ಸಂಪುಟ : Volume 13 ಸಂಚಿಕೆ : Issue 205 ಪುಟಗಳು : Pages 08 ಶನಿವಾರ 27 ಸಪ್ಟೆಂಬರ್ 2025 ₹2 RNINO:KARKAN/2011/48371 BDR/054/2026-20274 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಬೆಳಗು
" ಬಡವರು ಹಸಿದಿರುವುದು ಅಕ್ಕರೆಗಾಗಿ. ರೊಟ್ಟಿಗಾಗಿ ಅಲ್ಲ "
-ಮದರ್ ತೆರೇಸಾ .

ಸಂಪಾದಕರು: ರಮೇಶ ರೆಡ್ಡಿ

ಲಿಂಗಾಯತ ಎರವಲು ಧರ್ಮವಲ್ಲ 2
ಅ.2 ರಿಂದ ಯುವಪರಿವರ್ತನಯಾತ್ರೆ 4
ಭೀಮಾನದಿ ತೀರದಲ್ಲಿ ಪ್ರವಾಹ ಸ್ಥಿತಿ 8

# ಸಮೀಕ್ಷೆ ಕಾರ್ಯ ಚುರುಕುಗೊಳಿಸಲು ಜಿಲ್ಲಾಧಿಕಾರಿಗಳಿಗೆ ಸಿಎಂ ಸೂಚನೆ

ಮಲ್ಲಮ್ಮನುಡಿವಾರ್ತೆ ಬೆಂಗಳೂರು,ಸೆ26:ಸಮೀಕ್ಷೆಕಾರ್ಯ ರಾಜ್ಯಾದ್ಯಂತ ಆರಂಭವಾಗಿದ್ದು, ಆರಂಭದಲ್ಲಿ ಕೆಲವು ತಾಂತ್ರಿಕತೊಂದರೆಗಳಕಾರಣಸಮೀಕ್ಷೆನಿಧಾನವಾಗಿತ್ತು. ಈಗಎಲ್ಲಾತಾಂತ್ರಿಕಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಇಂದಿನಿಂದಸಮೀಕ್ಷೆಕಾರ್ಯವನ್ನು ಚುರುಕುಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಗತಿ ಬಗ್ಗೆಕೃಷ್ಣಾದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ಮುಖ್ಯಮಂತ್ರಿಗಳು, ಸಮೀಕ್ಷೆ ಕಾರ್ಯಕ್ಕೆ ಯಾವುದೇ ತಾಂತ್ರಿಕ ತೊಂದರೆಗಳು ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ತಾಂತ್ರಿಕ ತೊಂದರೆಗಳುಎದುರಾದರೆತಕ್ಷಣಅದನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ಸಮೀಕ್ಷೆ ಕಾರ್ಯವನ್ನು ಎಲ್ಲಾ ಅಧಿಕಾರಿಗಳುಗಂಭೀರವಾಗಿಪರಿಗಣಿಸಿಪೂರ್ಣಗೊಳಿಸಲು ಕ್ರಮಕೈಗೊಳ್ಳಬೇಕುಎಂದುತಿಳಿಸಿದರು.ರಾಜ್ಯದಲ್ಲಿ ಒಟ್ಟು 1,43,81,702 ಕುಟುಂಬಗಳಸಮೀಕ್ಷೆಕಾರ್ಯವನ್ನು ನಡೆಸಬೇಕಾಗಿದ್ದು, ಇದುವರೆಗೆ2,76,016 ಕುಟುಂಬಗಳ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಲಾಗಿದೆ. ಸಮೀಕ್ಷೆ ಕಾರ್ಯಕ್ಕೆ ಒಟ್ಟು 1,20,728 ಗಣತಿದಾರರನ್ನು ನಿಯೋಜಿಸಲಾಗಿದೆ. ಒಟ್ಟು1,22,085 ಗಣತಿ ಬ್ಲಾಕ್ ಗಳನ್ನು ಗುರುತಿಸಲಾಗಿದೆ. ಅಕ್ಟೋಬರ್ 7ರ ಒಳಗಾಗಿ ಗಣತಿಕಾರ್ಯಪೂರ್ಣಗೊಳಿಸಲುಸೂಚಿಸಿದರು.ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಿರುವ ಎಲ್ಲಾ ಶಿಕ್ಷಕರು ತಮಗೆ ವಹಿಸಲಾಗಿರುವ ಕಾರ್ಯವನ್ನು ನಿಗದಿತ ಅವಧಿಯ ಒಳಗಾಗಿ ಪೂರ್ಣಗೊಳಿಸಬೇಕು. ಯಾವುದೇ ಶಿಕ್ಷಕರು



ಗಣತಿಕಾರ್ಯಕ್ಕೆಅಸಹಕಾರತೋರಿಸಬಾರದು. ಇದು ಸರ್ಕಾರಿ ಕೆಲಸವಾಗಿದ್ದು, ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಬಾರದು. ನಿರ್ಲಕ್ಷ್ಯ ವಹಿಸುವ ಗಣತಿದಾರರ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಿದರು.ಶಿಕ್ಷಕರಿಗೆ ಗೌರವಧನದ ಬಗ್ಗೆ ಯಾವುದೇ ಅನುಮಾನ ಬೇಡ. ಈಗಾಗಲೇಗೌರವಧನವನ್ನು ಬಿಡುಗಡೆಮಾಡಿದ್ದೇವೆ. ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಗಣತಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ಕೇವಲ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಮೀಕ್ಷೆಯಲ್ಲ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ನಿಗದಿತ ಗುರಿಯ ಪ್ರಗತಿ ಬಗ್ಗೆ ಪ್ರತಿ ದಿನ ಪರಿಶೀಲನೆ ನಡೆಸಬೇಕು. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.ಕೆಲವುಜಿಲ್ಲೆಗಳಲ್ಲಿಸಮೀಕ್ಷೆನಿಧಾನಗತಿಯಲ್ಲಿದ್ದು, ಚುರುಕುಗೊಳಿಸಬೇಕು. ಅಗತ್ಯವಿರುವಕಡೆಅನುದಾನಿತ ಶಾಲೆಗಳ ಶಿಕ್ಷಕರ ಸೇವೆಯನ್ನು ಪಡೆದುಕೊಳ್ಳಬೇಕು. ಜಿಲ್ಲಾ ಉಸ್ತುವಾರಿ ಸಚಿವರೊಂದಿಗೂ ಈ ಕುರಿತು ಸಂಪರ್ಕದಲ್ಲಿರುವಂತೆಸೂಚಿಸಿದರು.ಸಮೀಕ್ಷೆಕಾರ್ಯದ ಮೇಲ್ವಿಚಾರಣೆ ನಡೆಸಲು ಪ್ರತಿ ತಾಲೂಕಿಗೆ ಜಿಲ್ಲಾ ಮಟ್ಟದಅಧಿಕಾರಿಯನ್ನುನೋಡಲ್ ಅಧಿಕಾರಿಯಾಗಿ ನೇಮಕಮಾಡಲುಜಿಲ್ಲಾಧಿಕಾರಿಗಳಿಗೆಸೂಚನೆನೀಡಿದ ಮುಖ್ಯಮಂತ್ರಿಗಳು, ಜಿಲ್ಲಾ ಮಟ್ಟದಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಎದುರಾದರೆ ಸ್ಥಳೀಯವಾಗಿ ಸಮಸ್ಯೆ ಬಗೆಹರಿಸಲು ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳಲ್ಲಿರುವ ಐಟಿ ತಂತ್ರಜ್ಞರ ನೆರವನ್ನು ಪಡೆದುಕೊಳ್ಳಬೇಕು ಎಂದರು.ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಸಮೀಕ್ಷೆ ಕಾರ್ಯ ಇಂದಿನಿಂದ ಆರಂಭವಾಗಿದೆ. ಬಿಬಿಎಂಪಿವ್ಯಾಪ್ತಿಯಲ್ಲಿಸುಮಾರು50ಲಕ್ಷ ಮನೆಗಳಿದ್ದು, ಆದಷ್ಟು ಬೇಗನೆ ಗಣತಿ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು. ರಾಜ್ಯದ ಪ್ರತಿಯೊಂದು ಕುಟುಂಬಗಳ ಸಮೀಕ್ಷೆಕಾರ್ಯವನ್ನು ಕೈಗೊಳ್ಳಬೇಕು. ಯಾವುದೇಕುಟುಂಬಸಮೀಕ್ಷೆಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.ಗುಡ್ಡಗಾಡು ಪ್ರದೇಶಗಳ ವ್ಯಾಪ್ತಿಯಲ್ಲಿ ಶಾಲೆಗಳಲ್ಲಿ ಸಮೀಕ್ಷೆ ಕೇಂದ್ರಗಳನ್ನು ಆರಂಭಿಸಲು ಅವಕಾಶನೀಡಲಾಗಿದೆ. ಜನರುಕೇಂದ್ರಕ್ಕೆಬಂದುಸಮೀಕ್ಷೆ ಕಾರ್ಯದಲ್ಲಿಪಾಲ್ಗೊಳ್ಳಬಹುದಾಗಿದೆ. ಆನ್‌ಲೈನ್‌ಮೂಲಕ ಸಹಸಮೀಕ್ಷೆಕಾರ್ಯದಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಲಾಗಿದ್ದು, ಇದರಪ್ರಯೋಜನಪಡೆದುಕೊಳ್ಳಬೇಕು. ಸಮೀಕ್ಷೆ ಸಂದರ್ಭದಲ್ಲಿ ಮನೆಗಳಿಗೆ ಬೀಗ ಹಾಕಿದ್ದರೆ, ಅಂತಹಮನೆಗಳಲ್ಲೂಗಣತಿಕಾರ್ಯವನ್ನು ಮುಂದಿನ ದಿನಗಳಲ್ಲಿ ಕೈಗೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.ಪ್ರತಿ ದಿನ ಜಿಲ್ಲಾವಾರು ಕನಿಷ್ಠ ಶೇಕಡಾ 10ರಷ್ಟುಸಮೀಕ್ಷೆಗುರಿಯನ್ನು ಸಾಧಿಸಬೇಕು. ಪ್ರಾದೇಶಿಕ ಆಯುಕ್ತರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಮೀಕ್ಷೆ ಪ್ರಗತಿಯ ಪರಿಶೀಲನೆ ನಡೆಸಬೇಕು ಮತ್ತು ಸಕ್ರಿಯವಾಗಿಕಾರ್ಯದಲ್ಲಿತಮ್ಮನ್ನುತೊಡಗಿಸಿಕೊಳ್ಳಲು ಸೂಚಿಸಿದರು.ಸಮೀಕ್ಷೆಕಾರ್ಯದಲ್ಲಿನಿರ್ಲಕ್ಷ್ಯ ವಹಿಸುವ ಗಣತಿದಾರರಮೇಲೆಕಾನೂನುಪ್ರಕಾರಕ್ರಮಕೈಗೊಳ್ಳಲು ಸೂಚನೆ ಸಹ ನೀಡಿದರು.ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ಶಿವರಾಜ ತಂಗಡಗಿ, ಕೃಷ್ಣಬೈರೇಗೌಡ, ರಹೀಂ ಖಾನ್, ಭೈರತಿ ಸುರೇಶ್, ಮಧು ಬಂಗಾರಪ್ಪ, ಭೋಸರಾಜು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ ನಾಯ್ಕ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮ್ಮದ್, ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಹುಮನಾಬಾದ್‌ನಲ್ಲಿ ಮಳೆ ಜನತೆ ಎಚ್ಚರಿಕೆಯಿಂದ ಇರಬೇಕು



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್: ಕಳೆದ ಎರಡು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ರೈತರು, ಕೃಷಿಕರು, ಶಾಲಾ ವಿದ್ಯಾರ್ಥಿಗಳು ಹಾಗೂ ಬಡವರು ಅತಿ ಜಾಗ್ರತೆಯಿಂದ ಇರಬೇಕೆಂದು ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ಜನತೆಗೆ ಮನವಿ ಮಾಡಿದ್ದಾರೆ.ಅವರು ಮಲ್ಲಮ್ಮ ನುಡಿ ಪತ್ರಿಕೆಯ ಜೊತೆ, ಮಾತನಾಡಿ, ಮಳೆಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಯಾವುದೇ ರೀತಿಯ ಅಪಾಯಗಳು ಸಂಭವಿಸದಂತೆ ತಾಲ್ಲೂಕು ಆಡಳಿತ ಕಡ್ಡಾಯವಾಗಿ ನಿಗಾ ವಹಿಸಬೇಕು ಎಂದು ಹೇಳಿದರು.ಮಳೆಗಾಲದಲ್ಲಿ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ರೈತರು ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಶಾಲಾ ಮಕ್ಕಳು ಹಾಗೂ ಸಾಮಾನ್ಯ ಜನರು ಅನಗತ್ಯವಾಗಿ ಮಳೆಯಲ್ಲಿ ಸಂಚಾರ ತಪ್ಪಿಸಬೇಕು ಎಂದು ಅವರು ಸೂಚಿಸಿದರು.

## ದಸರಾ ಸಿ.ಎಂ ಕಪ್ ಬಾಕ್ಸಿಂಗ್ ವಿಭಾಗದಲ್ಲಿ ಬೀದರಗೆ 7 ಪದಕ




ಮಲ್ಲಮ್ಮ ನುಡಿ ವಾರ್ತೆ ಬೀದರ, ಸೆ.26: ವಿಶ್ವವಿಖ್ಯಾತ ನಾಡ ಹಬ್ಬ ದಸರಾಪ್ರಯುಕ್ತವಾಗಿಹಮ್ಮಿಕೊಳ್ಳಲಾದದಸರಾಸಿ.ಎಂಕಪ್‌ಕ್ರೀಡಾಕೂಟ ಬಾಕ್ಸಿಂಗ್ ವಿಭಾಗದಲ್ಲಿಬೀದರ7 ಪದಕಪಡೆದಿದೆ.ಗುರುವಾರಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ದಸರಾ ಸಿ.ಎಂ ಕಪ್ ಕ್ರೀಡಾಕೂಟದಲ್ಲಿ ಬಾಕ್ಸಿಂಗ್ ವಿಭಾಗದಲ್ಲಿ ಬೀದರನ ವಿದ್ಯಾರ್ಥಿಗಳು ಒಂದು ಚಿನ್ನ, ಒಂದು ಬೆಳ್ಳಿ, ಐದು ಕಂಚು ಸೇರಿ ಒಟ್ಟು ಏಳು ಪದಕಗಳು ಗೆದ್ದಿದ್ದಾರೆ. ಸ್ಟೀವನ್ ಚಿನ್ನದ ಪದಕ, ವಿರೇಂದ್ರ ಬೆಳ್ಳಿ ಪದಕ ಹಾಗೂ ನಾಗರಾಜ ವರ್ಮಾ, ಶಶಿಕಾಂತ, ವಿಕ್ಕಿ, ಅಂಜಲಿ ಮತ್ತು ಕವಿತಾ ಕಂಚಿನ ಪದಕ ಗೆದ್ದಿದ್ದಾರೆ.ಈ ಸಂದರ್ಭದಲ್ಲಿ ಮುಖ್ಯ ತರಬೇತಿದಾರ ನಾಗರಾಜ ವರ್ಮಾ ಅವರು ಉಪಸ್ಥಿತರಿದ್ದರು.

## ಪಿಜಿಯಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.26– ನಗರದ ಪಿಜಿ ವಸತಿ ನಿಲಯದಲ್ಲಿ ಕಾಲೇಜು ವಿದ್ಯಾರ್ಥಿನಿಯೋರ್ವಳು ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಾಳೆ. ನಗರದ ಖಾಸಗಿ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ವಿಷಯದಲ್ಲಿ ಓದುತ್ತಿದ್ದ ಬೀಳಗಿ ತಾಲೂಕಿನ ಸೀಮಾ ರಾಠೋಡ ಸಾವಿಗೀಡಾದ ಯುವತಿ. ಸೀಮಾ ಕುಟುಂಬದವರು ಆಕೆಯ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿದ್ದು, ತನಿಖೆಗೆ ಒತ್ತಾಯಿಸಿದ್ದಾರೆ.

## ಪತ್ನಿ ಶೀಲ ಶಂಕಿಸಿ ಇಬ್ಬರು ಮಕ್ಕಳನ್ನು ಕೊಂದ ತಂದೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಸೆ.26: ತಂದೆಯೊಬ್ಬ ತನ್ನ ಪತ್ನಿಯ ಶೀಲ ಶಂಕಿಸಿ ಇಬ್ಬರು ಮಕ್ಕಳನ್ನು ಕುಡುಗೋಲಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿರುವ ಅಮಾನವೀಯ ಘಟನೆ ಯಾದಗಿರಿ ತಾಲೂಕಿನ ದುಗನೂರು ಕ್ಯಾಂಪ್ ನಲ್ಲಿ ನಡೆದಿದೆ.


ಆರೋಪಿ ಶರಣಪ್ಪ, ತನ್ನ ಪತ್ನಿ ಹಾಗೂ ತಾಯಿ ಬಹಿರ್ದೆಸೆಗೆ ಹೋದ ವೇಳೆ ಮನೆಯಲ್ಲಿದ್ದ ಮೂರು ವರ್ಷ ಮಗ ಭಾರ್ಗವ್ ಮತ್ತು ಐದು ವರ್ಷದ ಸಾನ್ವಿಯನ್ನು ಕುಡುಗೋಲುನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ. ಮತ್ತೋರ್ವ ಮಗ ಹೇಮಂತ್(8) ಮೇಲೂ ದಾಳಿ ಮಾಡಿದ್ದು, ಆತನ ಸ್ಥಿತಿ ಚಿಂತಾಜನಕವಾಗಿದೆ. ಘಟನೆ ಬಳಿಕ ಶರಣಪ್ಪ ಪರಾರಿಯಾಗಿದ್ದು, ಕುಟುಂಬಸ್ಥರ ರೋದನೆ ಮುಗಿಲು ಮುಟ್ಟಿದೆ.

ಗಾಯಗೊಂಡ ಹೇಮಂತನಿಗೆ ಯಾದಗಿರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗ್ತಿದೆ.ಆರೋಪಿ ಶರಣಪ್ಪ 10 ವರ್ಷಗಳ ಹಿಂದೆ ಜಯಮ್ಮಳ ಜೊತೆ ಮದುವೆ ಆಗಿದ್ದು, ಆರಂಭದ ವರ್ಷಗಳಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಇಬ್ಬರ ದಾಂಪತ್ಯಕ್ಕೆ ಸಾಕ್ಷಿಯೆಂಬಂತೆ ಮೂರು ಜನ ಮುದ್ದಾದ ಮಕ್ಕಳೂ ಇದ್ದರು. ಆದರೆ ಕಳೆದ ಎರಡು ವರ್ಷಗಳಿಂದ ವಿಪರೀತವಾಗಿ ಪತ್ನಿಯ ಶೀಲ ಶಂಕಿಸುತ್ತಿದ್ದ ಶರಣಪ್ಪ, ಜಯಮ್ಮ ಯಾರ ಜೊತೆಗೆ ಮಾತಾಡಿದ್ರೂ ಅನುಮಾನ ಪಡುತ್ತಿದ್ದ. ಇರುವ ಮೂವರು ಮಕ್ಕಳು ತನಗೆ ಹುಟ್ಟಿಲ್ಲ ಎನ್ನುತ್ತಿದ್ದ. ಇದೇ ಕಾರಣಕ್ಕೆ ಜೀವ ಭಯದಿಂದ ಎರಡು ವರ್ಷಗಳ ಹಿಂದೆ ಮಕ್ಕಳ ಜೊತೆ ಜಯಮ್ಮ ತವರು ಸೇರಿದ್ದರು. ರಾಜಿ ಪಂಚಾಯತಿ ಬಳಿಕ ಕಳೆದ 15 ದಿನಗಳ ಹಿಂದೆಯಷ್ಟೇ ಪತಿ ಮನೆಗೆ ವಾಪಸ್? ಬಂದಿದ್ದರು.

ಪಾಪಿ ಶರಣಪ್ಪನೇ ಕೊಲೆ ಮಾಡಿ ಓಡಿ ಹೋಗಿದ್ದಾನೆ. ಅವನು ಸಿಕ್ರೆ ಅಲ್ಲೇ ಸಾಯಿಸಬೇಕು ಅಂತ ಆರೋಪಿಯ ತಾಯಿ ಭೀಮವ್ವ ಕಣ್ಣೀರು ಹಾಕಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸಂಬಂಧಿಕರೂ ಆಗಮಿಸಿದ್ದು, ಮನೆಯಲ್ಲಿ ನಿರವ ಮೌನ ಆವರಿಸಿದೆ.

ಘಟನಾಸ್ಥಳಕ್ಕೆಯಾದಗಿರಿಎಸ್ಪಿಭೇಟಿನೀಡಿಪರಿಶೀಲನೆನಡೆಸಿದ್ದು,ಪ್ರಕರಣ ಸಂಬಂಧ ಯಾದಗಿರಿ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

## ಪಂಚಭೂತಗಳಲ್ಲಿ ಲೀನರಾದ ಎಸ್.ಎಲ್ ಭೈರಪ್ಪ



ಮಲ್ಲಮ್ಮ ನುಡಿ ವಾರ್ತೆ


ಮೈಸೂರು:ಸೆ.26: ಬದುಕಿನಯಾನ' ಮುಗಿಸಿದ ಅಕ್ಷರಮಾಂತ್ರಿಕ' ಎಸ್.ಎಲ್ ಭೈರಪ್ಪ ಪಂಚಭೂತಗಳಲ್ಲಿಲೀನವಾದರು. ಮೈಸೂರಿನ ಚಾಮುಂಡಿಬೆಟ್ಟದತಪ್ಪಲಿನ ಚಿತಾಗಾರದಲ್ಲಿ ಬ್ರಾಹ್ಮಣಸಂಪ್ರದಾಯದಂತೆ ಅಂತ್ಯಕ್ರಿಯೆನೆರವೇರಿಸಲಾಯಿತು. ಪಾರ್ಥಿವಶರೀರಕ್ಕೆ ಮಾನಸಪುತ್ರಿ ಸಹನಾ ವಿಜಯಕುಮಾರ್ ಅವರು ಅಂತಿಮ ನಮನಸಲ್ಲಿಸಿದ ಬಳಿಕ ಪುತ್ರರು ಅಗ್ನಿಸ್ಪರ್ಶ ಮಾಡಿದರು. ಇಂದು ಬೆಳಗ್ಗೆಯಿಂದಲೇ ಅಂತ್ಯಕ್ರಿಯೆಗೆ ಸಿದ್ಧತೆ ನಡೆದಿತ್ತು. ಕುಟುಂಬಸ್ಥರು, ಗಣ್ಯರು ಅಂತ್ಯಸಂಸ್ಕಾರ ವೀಕ್ಷಣೆಗೆ ಜರ್ಮನ್ ಟೆಂಟ್ ಹಾಕಿ ಕುರ್ಚಿಗಳನ್ನಿಟ್ಟು ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಎಡಿಸಿ ಶಿವರಾಜು ಅವರು ಸ್ಥಳಕ್ಕೆ ಭೇಟಿ ನೀಡಿ ಸಕಲ ಸಿದ್ಧತೆ ಪರಿಶೀಲಿಸಿದ್ದರು, ಪೊಲೀಸ್ ಭದ್ರತೆಯನ್ನೂ ನಿಯೋಜಿಸಲಾಗಿತ್ತು.ನಂತರ ಭೈರಪ್ಪನವರ ಪಾರ್ಥಿವ ಶರೀರದ ಮೇಲೆ ತ್ರಿವರ್ಣಧ್ವಜ ಹೊದಿಸಲಾಯಿತು. ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಸರ್ಕಾರಿ ಗೌರವ ಸಲ್ಲಿಸಲಾಯಿತು. ಇದೇ ವೇಳೆ ಚಿತಾಗಾರದ ಬಳಿಕ ಪೊಲೀಸ್ ತುಕಡಿ ಪೊಲೀಸ್ ಬ್ಯಾಂಡ್ ನಡೆಸಿಕೊಟ್ಟರು.

## ಜಾತಿ ಗಣತಿಗೆ ನೆಟ್ ವರ್ಕ್' ಸಿಗದೇ ಪರದಾಟ ಸಮೀಕ್ಷೆಗಾಗಿ ಮರ, ನೀರಿನ ಟ್ಯಾಂಕ್ ಏರಿದ ಶಿಕ್ಷಕರು.!



ಮಲ್ಲಮ್ಮನುಡಿವಾರ್ತೆ ಬೀದರ. ಸೆ. 26 : ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಹಮ್ಮಿಕೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸದ್ಯ ಎಲ್ಲೆಡೆನೆಟ್ವರ್ಕ್‌ಸಮಸ್ಯೆ ಉಂಟಾಗಿದೆ. ಪರಿಣಾಮಸಮೀಕ್ಷೆಬಂದಶಿಕ್ಷಕರು ಮೊಬೈಲ್ ನೆಟ್ವರ್ಕ್ ಗಾಗಿ ಮರ ಮತ್ತು ನಿರೀನ ಟ್ಯಾಂಕ್ ಹತ್ತುವ ಪರಿಸ್ಥಿತಿನಿರ್ಮಾಣವಾಗಿದೆ. ರಾಜ್ಯ ಸರ್ಕಾರದಿಂದನಡೆಸಲಾಗುತ್ತಿರುವ ಸಾಮಾಜಿಕ,ಶೈಕ್ಷಣಿಕಹಾಗೂಆರ್ಥಿಕ ಸಮೀಕ್ಷೆಗಾಗಿ ಮೊಬೈಲ್ಗೆ ನೆಟವರ್ಕ್ ಸಿಗದ ಕಾರಣ ಸಮೀಕ್ಷೆಗೆ ನಿಯುಕ್ತಿಗೊಂಡ ಶಿಕ್ಷಕರೊಬ್ಬರು ನೆಟವರ್ಕ್ಗಾಗಿ ಮರ ಹತ್ತಿದ ಪ್ರಸಂಗ ಹುಲಸೂರ ತಾಲೂಕಿನ ಮಿರಖಲ್ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ಜರುಗಿದೆ. ಸಮೀಕ್ಷೆಗೆಂದು ನಿಯುಕ್ತಿಗೊಂಡ ಮಿರಖಲ್ ಗ್ರಾಮದ ಸರ್ಕಾರಿ ಶಾಲೆ ಶಿಕ್ಷಕ ಗೋವಿಂದ ಮಹಾರಾಜ ನೆಟವರ್ಕ್ ಸಲುವಾಗಿ ಮರವೇರಿದ ಶಿಕ್ಷಕರಾಗಿದ್ದಾರೆ. ಕಳೆದ ಸೆ. 22ರಿಂದ ರಾಜ್ಯ ಸರ್ಕಾರದಿಂದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಗೆಚಾಲನೆನೀಡಲಾಗಿದ್ದು, ಮಹಾರಾಷ್ಟ್ರದಗಡಿಗೆಹೊಂದಿಕೊಂಡಿರುವಜಿಲ್ಲೆಯಗಡಿಗ್ರಾಮಮಿರಖಲ್ನಲ್ಲಿ ನೆಟವರ್ಕ್ ಸಿಗದ ಹಿನ್ನೆಲೆ ಶಿಕ್ಷಕ ಮರ ಹತ್ತಿದ್ದಾರೆ. ಆದರೆ ಮರ ಹತ್ತಿದ ನಂತರವು ಸಹ ಸರಿಯಾದ ನೆಟವರ್ಕ್ ಸಂಪರ್ಕ ಸಿಗದೆ ನೆರೆಯ ಮಹಾರಾಷ್ಟ್ರದ ನೆಟವರ್ಕ್ ಸಿಗುತ್ತಿತ್ತು ಎನ್ನಲಾಗಿದೆ. ಹೀಗಾಗಿ ಶಿಕ್ಷಕ ಮರದಿಂದ ಕೆಳಗೆ ಇಳಿಯುವಂತಾಗಿದೆ ಎಂದು ತಿಳಿದು ಬಂದಿದೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಮೊಬೈಲ್ ನೆಟ್ವರ್ಕ್ ಅನಿವಾರ್ಯ. ಆದರೆ ಮೊಬೈಲ್ ನೆಟ್ವರ್ಕ್ ಸಿಗದ ಕಾರಣ ಗಣತಿದಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಬೀದರ್ ಜಿಲ್ಲೆಯ ಮಹಾರಾಷ್ಟ್ರದ ಗಡಿಯಲ್ಲಿ ಬರುವ ಔರಾದ್, ಕಮಲನಗರ, ಬಸವ ಕಲ್ಯಾಣ, ಹುಲಸೂರು ತಾಲೂಕಿನ ಕೆಲವು ಗ್ರಾಮ ಹಾಗೂ ತಾಂಡಾಗಳಲ್ಲಿ ಮೊಬೈಲ್ ನೆಟ್ವರ್ಕ್ ಸಮಸ್ಯೆ ಉಂಟಾಗಿದೆ. ನೆಟ್ವರ್ಕ್ಗಾಗಿ ಶಿಕ್ಷಕರು ಮರಮತ್ತುನೀರಿನಟ್ಯಾಂಕ್ ಹತ್ತಿದ ಆಶ್ಚರ್ಯಕರಸಂಗತಿಗಳುನಡೆದಿವೆ. ಬಸವಕಲ್ಯಾಣಕ್ಷೇತ್ರ ಶಿಕ್ಷಣಾಧಿಕಾರಿಗಳು ಇಬ್ಬರಿಗೂ ನೋಟಿಸ್ ಜಾರಿ ಮಾಡಿದ್ದಾರೆ. ಸರ್ಕಾರದ ಆದೇಶವನ್ನು ಗಾಳಿಗೆತೂರಿ ನಿಯಮಬಾಹಿರವಾಗಿ ವರ್ತಿಸಿ, ಸರ್ಕಾರದ ನೀತಿಯನ್ನು ಅಣಕಿಸಿ ಸರ್ಕಾರಿ ನೌಕರರಲ್ಲದ ರೀತಿ ವರ್ತಿಸಿ ನೆಟ್‌ವರ್ಕ್ಕಾಗಿ ಮರ ಹಾಗೂ ನೀರಿನ ಟ್ಯಾಂಕ್ ಹತ್ತಿ ಆ ಚಿತ್ರಗಳನ್ನು ಹಂಚಿಕೊಂಡಿದ್ದೀರಿ. ಮೂರು ದಿನಗಳ ಒಳಗೆ ಲಿಖಿತ ಹೇಳಿಕೆ ಸಲ್ಲಿಸಬೇಕು. ಇಲ್ಲವಾದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ನೋಟಿಸ್‌ನಲ್ಲಿ ಇಬ್ಬರೂ ಶಿಕ್ಷಕರಿಗೆ ಎಚ್ಚರಿಸಿದ್ದಾರೆ.

## ಧಾರಾಕಾರ ಮಳೆಗೆ ನೆಲಕ್ಕುರುಳಿದ ಬೃಹತ್ ಮರ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಸೆ.26: ನಿರಂತರ ಮಳೆಯಿಂದಾಗಿ ಸುಮಾರು 500 ವರ್ಷಗಳ ಹಳೆಯದಾದ ಬೃಹತ್ ಬೇವಿನಮರವೊಂದುಧರೆಗುರುಳಿದಘಟನೆ ನಗರದಶಹಾಬಜಾರ್ ಬಡಾವಣೆಯ ಮರಗಮ್ಮನದೇವಿದೇವಸ್ಥಾನಹಾಗೂ ಸುಲಫಲಮಠದಹತ್ತಿರಶುಕ್ರವಾರಬೆಳಿಗ್ಗೆ 8–45ಕ್ಕೆಸಂಭವಿಸಿದೆ. ಅದೃಷ್ಟವಶಾತ್ ಯಾವುದೇರೀತಿಯಲ್ಲಿಪ್ರಾಣಾಪಾಯಗಳು ಸಂಭವಿಸಿಲ್ಲ. ಬೆಳಿಗ್ಗೆಯಿಂದಲೇಧಾರಾಕಾರ ಮಳೆಆರಂಭಗೊಂಡಿತ್ತು. ಹೀಗಾಗಿಜನ ಸಂಚಾರವೂ ಸಹ ಅಷ್ಟೊಂದು ಪ್ರಮಾಣದಲ್ಲಿ ರಸ್ತೆ ಮೇಲೆ ಇರಲಿಲ್ಲ. ಆದಾಗ್ಯೂ, ಮಹಾನಗರ ಪಾಲಿಕೆಯ ಕಸದ ವಾಹನವು ಮನೆ, ಮನೆ ಕಸ ಸಂಗ್ರಹಣೆಗಾಗಿ ಮರಗಮ್ಮನ ದೇವಿ ದೇವಸ್ಥಾನದ ಬಳಿ ನಿಲ್ಲಿಸಿದ್ದರು. ಆ ಸಂದರ್ಭದಲ್ಲಿಯೇ ಬೃಹತ್ ಮರ ವಾಹನದ ಮೇಲೆ ಬಿದ್ದಿದೆ. ಮರ ಬಿದ್ದ ರಭಸಕ್ಕೆ ವಿದ್ಯುತ್ ಕಂಬವೊಂದು ಸಹ ಬಿದ್ದಿದೆ. ಅಲ್ಲದೇ ಕೊಂಬೆ, ರೆಂಬೆಗಳು ನಿಲ್ಲಿಸಿದ ದ್ವಿಚಕ್ರವಾಹನಗಳ ಮೇಲೆ ಸಹ ಬಿದ್ದ ಪರಿಣಾಮ ಒಂದು ದ್ವಿಚಕ್ರವಾಹನ ಜಖಂಗೊಂಡಿದೆ. ಕಸದ ವಾಹನವು ಸಹ ಸ್ವಲ್ಪ ಜಖಂಗೊಂಡಿದೆ. ಉಳಿದಂತೆ ಯಾರಿಗೂ ಯಾವುದೇ ರೀತಿಯಲ್ಲಿ ಅಪಾಯ ಆಗಿಲ್ಲ.ಮರವು ಶಹಾಬಜಾರ್ ಪ್ರದೇಶದ ಮರಗಮ್ಮನ ಗುಡಿಯ ಹತ್ತಿರ ಆಯಕಟ್ಟಿನ ಸ್ಥಳದಲ್ಲಿತ್ತು. ಹೆಮ್ಮರವಾಗಿದ್ದರಿಂದ ಆ ಮರದ ನೆರಳಿನಲ್ಲಿಯೇ ಅನೇಕರು ವಿಶ್ರಾಂತಿ ಪಡೆಯುತ್ತಿದ್ದರು. ಮರದ ಹತ್ತಿರ ಶಾಲೆಯೂ ಸಹ ಇದ್ದು, ಮರ ಬೀಳುವ ಸಂದರ್ಭದಲ್ಲಿ ವಿದ್ಯಾರ್ಥಿಗಳಾರೂ ಶಾಲೆಯ ಹೊರಗಡೆ ಇರಲಿಲ್ಲ. ಹೀಗಾಗಿ ಯಾವುದೇ ರೀತಿಯಲ್ಲಿ ಸಮಸ್ಯೆ ಶಾಲಾ ವಿದ್ಯಾರ್ಥಿಗಳಿಗೆ ಆಗಲಿಲ್ಲ. ಆಳಂದ್ ನಾಕಾ, ಕಟಗರಪುರಾ, ಶೇಖ್ ರೋಜಾ ಸೇರಿದಂತೆ ಪ್ರಮುಖ ಬಡಾವಣೆಗಳಿಗೆ ಶಹಾಬಜಾರ್ ಬಡಾವಣೆಯು ರಸ್ತೆ ಸಂಪರ್ಕ ಕಲ್ಪಿಸುವ ಮುಖ್ಯ ಮಾರ್ಗವಾಗಿತ್ತು. ಹೀಗಾಗಿ ಮರ ಬಿದ್ದ ಪರಿಣಾಮ ಆ ಮಾರ್ಗದಲ್ಲಿ ವಾಹನಗಳ ಸಂಚಾರ ಕೆಲ ಹೊತ್ತು ಸ್ಥಗಿತಗೊಂಡಿತು. ಆದಾಗ್ಯೂ, ಮಹಾನಗರ ಪಾಲಿಕೆಯವರು ಜೆಸಿಬಿ ಮೂಲಕ ಬಿದ್ದ ಮರವನ್ನು ಬದಿಗೆ ಸರಿಸುವ ಮೂಲಕ ವಾಹನಗಳ ಸಂಚಾರಕ್ಕೆ ಹಾಗೂ ಪಾದಾಚಾರಿಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

## ನದಿಗಿಳಿದು ಬೆಳೆಹಾನಿ ಪರಿಶೀಲಿಸಿದ ಬಸವಕಲ್ಯಾಣ ಶಾಸಕ ಸಲಗರ



ಮಲ್ಲಮ್ಮನುಡಿವಾರ್ತೆ ಬೀದರ. ಸೆ.26: ಹುಲಸೂರ್ ಬಸವಕಲ್ಯಾಣ ಶಾಸಕಶರಣುಸಲಗರಅವರುಉಕ್ಕಿ ಹರಿಯುತ್ತಿರುವನದಿಯಪ್ರವಾಹದ ನೀರಿಗಿಳಿದುಬೆಳೆಹಾನಿಪರಿಶೀಲಿಸಿದರು. ಬೀದರ್ ಜಿಲ್ಲೆಯ ಮಾಂಜ್ರಾ ನದಿಯು ಉಕ್ಕಿ ಹರಿಯುತ್ತಿದ್ದು, ನದಿಪಾತ್ರದಲ್ಲಿರೈತರೊಬ್ಬರುಬೆಳೆದ ತೊಗರಿ ಬೆಳೆಯು ಸಂಪೂರ್ಣ ಜಲಾವೃತಗೊಂಡಿತ್ತು. ರೈತರ ಜೊತೆಗೆ ಶಾಸಕರೂ ಪ್ರವಾಹದ ನೀರಿನಲ್ಲಿ ಇಳಿದು ಬೆಳೆಯನ್ನು ವೀಕ್ಷಿಸಿದರು. 'ಕೃಷಿ ಹಾಗೂ ಕಂದಾಯ ಸಚಿವರು ಬೆಂಗಳೂರು, ಮಂಡ್ಯ, ಬೆಳಗಾವಿ ಜಿಲ್ಲೆಗಳನ್ನು ಬಿಟ್ಟು, ಕೂಡಲೇ ಬೀದರ್ ಜಿಲ್ಲೆಯ ಹಾನಿಗೊಳಗಾದ ಪ್ರದೇಶಕ್ಕೆ ಭೇಟಿ ನೀಡಿ ರೈತರ ಗೋಳು ಕೇಳಬೇಕು. ಸರ್ಕಾರ ಪ್ರತಿ ಎಕರೆಗೆ 25 ಸಾವಿರ ಪರಿಹಾರ ನೀಡಬೇಕು' ಎಂದು ಶಾಸಕ ಶರಣು ಸಲಗರ ಅವರು ಸೊಂಟದವರೆಗಿನ ಮಟ್ಟದ್ದ ಪ್ರವಾಹದ ನೀರಲ್ಲಿಯೇ ನಿಂತು ಒತ್ತಾಯಿಸಿದರು.

ಏಷ್ಯಾಕಪ್:ಪಾಕಿಸ್ತಾನದ ವೇಗದ ಬೌಲರ್ ಹ್ಯಾರಿಸ್ ರೌಫ್ ರಿಗೆ ಐಸಿಸಿ ಪಂದ್ಯ ಶುಲ್ಕದ ಶೇ. 30ರಷ್ಟು ದಂಡ ವಿಧಿಸಿದೆ.

# ಡಾ.ಭೈರಪ್ಪನವರಿಗೆ ಕರ್ನಾಟಕ ರತ್ನ ಘೋಷಿಸಲಿ




ಮಲ್ಲಮ್ಮ ನುಡಿ ವಾರ್ತೆ ಔರಾದ್ :ಸೆ.26: ತನ್ನ ವಿಶಿಷ್ಟ ಸಾಹಿತ್ಯದಿಂದ ಕನ್ನಡಸಾಹಿತ್ಯಲೋಕಉತ್ಕೃಷ್ಟಗೊಳಿಸಿದ ಡಾ.ಎಸ್.ಎಲ್ ಭೈರಪ್ಪ ಅವರಿಗೆ ರಾಜ್ಯ ಸರ್ಕಾರ ಕರ್ನಾಟಕ ರತ್ನ ಘೋಷಣೆ ಮಾಡಲಿ ಎಂದು ಸಾಹಿತಿ, ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಓಂಪ್ರಕಾಶ ದಡ್ಡೆ ಆಗ್ರಹಿಸಿದ್ದಾರೆ.

ಪಟ್ಟಣದ ಕನ್ನಡ ಭವನದಲ್ಲಿ ಶುಕ್ರವಾರ ಕಸಾಪ ಆಯೋಜಿಸಿದ ಎಸ್.ಎಲ್ ಭೈರಪ್ಪಅವರನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಲವು ಕಾದಂಬರಿಗಳು ಬರೆದ ಅವರು ಆಧುನಿಕ ಸಾಹಿತ್ಯ ಕ್ಷೇತ್ರದ ಋಷಿಯಂತೆ ನಮ್ಮೆಲ್ಲರಿಗೂ ಪ್ರೇರಣೆಯಾಗಿದ್ದಾರೆ.

ಸಮಾಜದ ಜ್ಯೋತಿಯಾಗಿ ಸದಾ ಪ್ರಜ್ವಲಿಸುವ ಅವರ ವಿಚಾರಗಳು ಕನ್ನಡಿಗರ ಪ್ರಜ್ಞಾವಂತಿಕೆಗೆ ಸಾಕ್ಷಿ ಎಂಬಂತಿದೆ. ಜೀವನದುದ್ದಕ್ಕೂ ಸಾಹಿತ್ಯವೇ ಉಸಿರಾಗಿಸಿಕೊಂಡು ಬದುಕಿದ ಅವರ ಕಾದಂಬರಿಗಳ ಖರೀದಿಗೆ ಜನ ಸಾಲುಗಟ್ಟಿ ನಿಲ್ಲುತ್ತಿರುವುದು ಆಧುನಿಕ ಯುಗದ ಆಶ್ಚರ್ಯವೆಂದರೂ ತಪ್ಪಾಗದು ಎಂದರು.

ಚಿಂತಕ ಜಗನ್ನಾಥ ಮೂಲಗೆ ಮಾತನಾಡಿ, ಕನ್ನಡ ನಾಡು ಒಬ್ಬ ಶ್ರೇಷ್ಠ ಸಾಹಿತಿಯನ್ನು ಕಳೆದುಕೊಂಡು ಬಡವಾಗಿದೆ. ಅವರ ಕೃತಿಗಳು ಕನ್ನಡವಲ್ಲದೇ ಇನ್ನಿತರ ಭಾಷೆಗಳಲ್ಲಿ ಅನುವಾದಗೊಂಡಿವೆ. ಕನ್ನಡ ಮಾತ್ರವಲ್ಲದೇ ಮರಾಠಿ, ಇಂಗ್ಲಿಷ್, ಹಿಂದಿ ಭಾಷಿಕರನ್ನು ಓದುಗರಾಗಿ ಪಡೆದ ಕೀರ್ತಿ ಎಸ್.ಎಲ್ ಭೈರಪ್ಪ ಅವರಿಗೆ ಸಲ್ಲುತ್ತದೆ ಎಂದರು.

ಕಸಾಪಗೌರವಾಧ್ಯಕ್ಷಡಾ.ವೈಜಿನಾಥ ಬುಟ್ಟೆ, ಕಸಾಪ ಅಧ್ಯಕ್ಷ ಬಿ.ಎಂ ಅಮರವಾಡಿ,ಗೌರವ ಕಾರ್ಯದರ್ಶಿ ಜಗನ್ನಾಥ ದೇಶಮುಖ ಮಾತನಾಡಿ ಎಸ್.ಎಲ್ ಭೈರಪ್ಪನವರ ನಿಧನದಿಂದ ಕನ್ನಡ ಸಾರಸ್ವತ ಲೋಕಕ್ಕೆ ಅತೀವ ನಷ್ಟ ಉಂಟಾಗಿದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಅಮೃತರಾವ ಬಿರಾದಾರ, ಕಲ್ಯಾಣರಾವ ಶೆಂಬೆಳ್ಳಿ, ನಗರ ಘಟಕದ ಅಧ್ಯಕ್ಷ ಸಂದೀಪ ಪಾಟೀಲ್, ಮಾಧ್ಯಮ ಪ್ರತಿನಿಧಿ ಅಮರಸ್ವಾಮಿ ಸ್ಥಾವರಮಠ, ಸಂಘಟನಾ ಕಾರ್ಯದರ್ಶಿ ಆನಂದ ದ್ಯಾಡೆ, ಕರವೇ ಅಧ್ಯಕ್ಷ ಅನೀಲ ದೇವಕತೆ, ಶಿವಕುಮಾರ ಪಾಟೀಲ್, ಬಸವರಾಜ ಚೌಕಂಪಳ್ಳೆ, ಪಪ್ಪು ಹಕ್ಕೆ ಸೇರಿದಂತೆ ಇನ್ನಿತರರಿದ್ದರು.

# ಕನ್ನಡದಲ್ಲಿ ಪ್ರತಿಶತ ಅಂಕ ಪಡೆದ ವಿದ್ಯಾರ್ಥಿಗಳ ಸತ್ಕಾರ ಅಭಿನಂದನಾರ್ಹ :ಹಳ್ಳದ್



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.26:ಕನ್ನಡದಲ್ಲಿ ಪ್ರತಿಶತ ಅಂಕಪಡೆದ ವಿದ್ಯಾರ್ಥಿಗಳಿಗೆ ನವರಾತ್ರಿ ಮಹೋತ್ಸವ ನಿಮಿತ್ಯ ಕನ್ನಡ ಸಾಹಿತ್ಯ ಪರಿಷತ್ತು ಸತ್ಕರಿಸುವತ್ತಿರುವುದು ಅಭಿನಂದನಾರ್ಹವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಹೇಳಿದರು.

ಪಟ್ಟಣದ ದೇವಿನಗರದ ಭವಾನಿ ದೇವಾಲಯದಲ್ಲಿ ನಡೆಯುತ್ತಿರುವ ನವರಾತ್ರಿಮಹೋತ್ಸವಕಾರ್ಯಕ್ರಮದ ನಿಮಿತ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು,ಜಯಕರ್ನಾಟಕ ಜನಪರ ವೇದಿಕೆ, ಭವಾನಿ ದೇವಾಲಯ ನವರಾತ್ರಿ ಉತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಚಿಂತನ ಮಂಥನ ಸಭೆ ಹಾಗು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಿಗೆ ತಾಯಂದಿರು ಮನೆಯಲ್ಲಿ ಉತ್ತಮ ಸಂಸ್ಕಾರ ನೀಡಿ, ಸಂಸ್ಕೃತಿ ಕಲಿಸುವ ಕಾರ್ಯವಾಗಬೇಕು. ನಾವೆಲ್ಲರೂ ಇಂದು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿ ನಮ್ಮತನ ಮರೆಯುತ್ತಿದ್ದೇವೆ. ಇದರಿಂದ ಕನ್ನಡ ಬಳಕೆ ಕಡಿಮೆಯಾಗುತ್ತದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು,ನಾಗಭೂಷಣ ಮಾಮಡಿಯವರ ನೇತೃತ್ವದಲ್ಲಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕಾರ್ಯಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಸಾಪ ತಾಲೂಕು ಅಧ್ಯಕ್ಷ ನಾಗಭೂಷಣ ಮಾಮಡಿ, ಕನ್ನಡ ಭಾಷೆ ಬೆಳೆಸಲು ನಾವೆಲ್ಲರೂ ಕನ್ನಡದಲ್ಲಿ ಮಾತಾಡಬೇಕು. ಕನ್ನಡ ಬರದವರಿಗೆ ಕನ್ನಡ ಕಲಿಸುವ ಕಾರ್ಯವಾಗಬೇಕು ಎಂದು ಹೇಳಿದರು. ಕಸಾಪ ಕಾರ್ಯದರ್ಶಿ ಹಣಮಂತ ಕಾರಾಮುಂಗೆ ಪ್ರಾಸ್ತಾವಿಕ ಮಾತನಾಡಿದರು. ಇದೇವೇಳೆ ಕನ್ನಡ ವಿಷಯದಲ್ಲಿ ಪ್ರತಿಶತ ಅಂಕ ಪಡೆದ ಸುಮಾರು 50ಕ್ಕೂ ಅಧಿಕ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗೆ ಕಸಾಪ ವತಿಯಿಂಸ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು ಮತ್ತು ಹಲವಾರು ಕವಿಗಳಿಂದ ಕವನ ವಾಚನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವಿಶ್ರಾಂತ ನಿರ್ದೇಶಕ ಡಿ.ಜಿ.ಜಗತಾಪ,

ಕಸಾಪಗೌರವಅಧ್ಯಕ್ಷಮಲ್ಲಿಕಾರ್ಜುನ ಹಲಮಂಡಗೆ, ದೇವಿನಗರ

ನವರಾತ್ರಿ ಉತ್ಸವ ಸಮಿತಿಯ ಉಪಾಧ್ಯಕ್ಷ ಮುರಳಿಧರರಾವ,

ಜಯಕರ್ನಾಟಕ ಜನಪರ ವೇದಿಕೆಯ ಅಧ್ಯಕ್ಷ ಸಂತೋಷ


ಬಿಜಿಪಾಟೀಲ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ತಾಲೂಕು ಘಟಕದ ಕಾರ್ಯದರ್ಶಿ ರಾಜೆಪ್ಪ ಪಾಟೀಲ, ಕಸಾಪ ಮಹಿಳಾ ಘಟಕದ ಅಧ್ಯಕ್ಷೆ ಸುನಿತಾ ಮಮ್ಮಾ ಉಪಸ್ಥಿತರಿದ್ದರು.

ಗ್ಲೋರಿ ಮೆಲೋಡಿಸ್ ತಂಡದ ಗಿಪ್ಸನ್ ಕೋಟೆ ಪ್ರಾರ್ಥನಾಗೀತೆ ಹಾಡಿದರು. ಹಣಮಂತ ಕಾರಾಮುಂಗೆ ಸ್ವಾಗತಿಸಿದರು. ದೀಪಕ ಥಮಕೆ ನಿರೂಪಿಸಿದರು. ಸಂತೋಷಪಾಟೀಲ ವಂದಿಸಿದರು.

# ಬೀದರ ನಗರದ ಸಾರಿಗೆ ವ್ಯವಸ್ಥೆ ಸುಧಾರಿಸಿ ವೃತ್ತಗಳಲ್ಲಿ ಹೊಸ ಜಂಕ್ಷನ್ ಯೋಜನೆ ರೂಪಿಸಲು ಮನವಿ

ಬೀದರ. ಸೆ. 26 : ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬೀದರ ನಗರದ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಿ ವೃತ್ತಗಳಲ್ಲಿ ಹೊಸ ಜಂಕ್ಷನ್ ಯೋಜನೆಯನ್ನು ರೂಪಿಸಲು ಕೆಳಕಂಡಂತೆ ಮಾಹಿತಿಯನ್ನು ಒದಗಿಸುತಿದ್ದೇವೆ. ಬೀದರ ನಗರ ಇತ್ತೀಚೆಗೆ ಮಹಾನಗರ ಪಾಲಿಕೆ ಎಂದು ಘೋಷಿಸಿ ಉನ್ನತೀಕರಿಸಿರುವುದಕ್ಕೆ ಕರ್ನಾಟಕ ಘನಸರ್ಕಾರಕ್ಕೆ ಹಾಗು ಜಿಲ್ಲಾಡಳಿತಕ್ಕೆ ಹೃತ್ಪೂರ್ವಕ ಕೃತಜ್ಞತೆಗಳು.





ಇತ್ತೀಚೆಗೆ ಜನಸಂಖ್ಯೆಗೆ ಅನುಗುಣವಾಗಿ ಬೀದರದಲ್ಲಿ ಸಂಚಾರ ಸಾರಿಗೆ ವ್ಯವಸ್ಥೆ ಸರಿ ಇಲ್ಲ. ಬೀದರ ಹಳೆ ನಗರದ ಮುಖ್ಯ ರಸ್ತೆ, ಚೌಬಾರ ರಸ್ತೆ, ಗುಂಪಾ ರಸ್ತೆ, ಮೈಲೂರ ಚೆನ್ನಮ್ಮ ವೃತ್ತ, ಭೊಮ್‌ಗೊಂಡೇಶ್ವರ ವೃತ್ತ, ಮಡಿವಾಳ ವೃತ್ತ, ಗುರು ನಾನಕ ಗೇಟ್, ಬರೀದ ಶಾಹಿ ಉದ್ಯಾನವನ ವೃತ್, ಪಾಪನಾಶ ಗೇಟ್ ವೃತ್ ಮತ್ತು ಬಸವೇಶ್ವರ ವೃತ್ತ ನೌಬಾದ, ಹೀಗೆ ನಗರದ ಪ್ರಮುಖ ರಸ್ತೆಗಳು ಜನದಟ್ಟಣೆಯಿಂದ ಹಾಗು ವಾಹನಗಳ ದಟ್ಟನೆಯಿಂದ ಕೂಡಿವೆ. 2011ರಲ್ಲಿ ರಸ್ತೆಯ ಅಗಲೀಕರಣ ಕಾರ್ಯ ಯೋಜನೆ ರೂಪಿಸಿಕೊಂಡು ಕಾರ್ಯಪ್ರವೃತ್ತರಾದಾಗ ಅನೇಕರಿಗೆ ಇರಿಸು ಮುರುಸಾಗಿತ್ತು. ಅದಾಗಿಯೂ ರಸ್ತೆ ಅಗಲೀಕರಣದ ಫಲವಾಗಿ ಬೀದರ ಸುಂದರೀಕಣವಾಗಿದೆ.

ಆದರೆ ಈಗಿರುವ ಅಗಲೀಕರಣ ಸಾಕಾಗುತ್ತಿಲ್ಲ ಸರಿಯಾದ ರಸ್ತೆಮಾರ್ಗ ಸೂಚಿಗಳಾಗಲಿ, ಪಾದಾಚಾರಿ ರಸ್ತೆಗಳಾಗಲಿ ಸಮರ್ಪಕವಾಗಿಲ್ಲ. ಪ್ರತಿಯೊಂದು ವೃತ್ತಗಳಲ್ಲಿ ಅತಿಯಾದ ವಾಹನಗಳು ಹಾಗು ಜನ ದಟ್ಟಣೆ ತುಂಬಿದಂತೆ ಇರುತ್ತದೆ. ಇವುಗಳ ಓಡಾಟ ಹೆಚ್ಚುತಿರುವುದರಿಂದ, ಸ್ಥಳವಕಾಶ ಕೊರತೆ ಇರುವುದರಿಂದ ಆಧುನಿಕ ಪದ್ಧತಿಯ ಜಂಕ್ಷನ್‌ಗಳಲ್ಲಿ ವಾಹನಗಳ ಹಾಗು ಜನ ದಟ್ಟಣೆ ನಿರ್ವಹಣೆ ಮಾಡುವ ಅವಶ್ಯಕತೆ ಇದೆ. ಕಾರಣ ತುರ್ತು ಕೆಲಸದ ಮೇಲೆ ಹೋಗುವವರಿಗೆ ಅನಾನುಕೂಲವಿದೆ. ವಾಹನ, ಹಾಗು ಜನ ದಟ್ಟಣೆ ಮತ್ತು ಕೆಟ್ಟರಸ್ತೆಗಳಿಂದ ಅನೇಕ ಅಪಘಾತಗಳು ಸಂಭವಿಸುತ್ತಿವೆ. 2022ರಲ್ಲಿ 1607 ಅಪಘಾತಗಾಳಾದರೆ, 2023ರಲ್ಲಿ 1404 ಮತ್ತು 2024ರಲ್ಲಿ 1442 ಅಪಘಾತಗಾಳಾಗಿವೆ, ಇದರಲ್ಲಿ ಅನೇಕರ ಸಾವಾಗಿದೆ. ಇದಕ್ಕೆ ಮುಖ್ಯ ಕಾರಣ 2011 ರಿಂದ ಈವರೆಗೆ ಜನಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಾಗಿದೆ. 2011ರಲ್ಲಿ, ಬೀದರ್ ಜನಸಂಖ್ಯೆಯು 1,703,300 ಆಗಿದ್ದು, 2001 ರ ಜನಸಂಖ್ಯೆಗೆ ಹೋಲಿಸಿದರೆ ಜನಸಂಖ್ಯೆಯಲ್ಲಿ ಶೇ.13.37 ರಷ್ಟು ಬದಲಾವಣೆ ಕಂಡುಬಂದಿದೆ. ವಾಹನಗಳ ಸಂಖ್ಯೆಯಲ್ಲಿಯೂ ಏರಿಕೆಯಾಗಿದೆ. ತೀವ್ರಗತಿಯ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ಹೊಸ ಸಾರಿಗೆ ಯೋಜನೆ ಸುಧಾರಣೆಯ ಅಗತ್ಯವಿದೆ.

ಅಲ್ಲದೇ 2022–23ರಲ್ಲಿ ನೊಂದಣಿಯಾದ ಬೀದರ ಜಿಲ್ಲೆಯ ವಿವಿಧ ವಾಹನಗಳ ಒಟ್ಟು ಸಂಖ್ಯೆ 11153, 2023–24ರಲ್ಲಿ 12650 ಹಾಗು 2024–25ರಲ್ಲಿ 12313, ಹೀಗೆ 2022–23ರಲ್ಲಿ ಮೋಟರ ಸೈಕಲ್‌ಗಳು–ಕಾರುಗಳ ಸಂಖ್ಯೆ 2364 ಹಾಗು 1091 ಅನುಕ್ರಮವಾಗಿ ನೊಂದಣಿಯಾಗಿವೆ. ಇದರಂತೆ 2023–24ರಲ್ಲಿ 9401 ಹಾಗು 1215 ಮತ್ತು 2024–25ರಲ್ಲಿ 9145 ಹಾಗು 1150 ಅನುಕ್ರಮವಾಗಿ ವಾಹನಗಳ ನೊಂದಣಿ ಹೆಚ್ಚುತಲೇ ಹೋಗುತ್ತಿವೆ.

ಇತ್ತೀಚಿನ ದಿನಗಳಲ್ಲಿ ನಗರ ಪಟ್ಟಣಗಳು ಆಧುನಿಕತೆಯ ಪ್ರಭಾವದಿಂದ ಅಭಿವೃದ್ಧಿ ಹೊಂದುತ್ತಿದ್ದು ನಗರದ ರಸ್ತೆ, ವೃತ್ತಗಳಲ್ಲಿಯ ಹಾಗು ಮಾರುಕಟ್ಟೆಯಲ್ಲಿಯ ಜನಸಂದಣಿಯನ್ನು ಮತ್ತು ವಾಹನ ದಟ್ಟಣೆಯನ್ನು

ಸುವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುವದು ಮತ್ತು ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಿ ಅದಕ್ಕೆ ಬೇಕಾದ ಹೊಸ ಯೋಜನೆ ರೂಪಿಸಿ ಇಲ್ಲಿನ ಟ್ರಾಫಿಕ್ ವ್ಯವಸ್ಥೆಯನ್ನು ಸರಿಪಡಿಸಿ ಸುಗಮ ಸಾರಿಗೆ ನಿರ್ವಹಣೆ ಮಾಡಲು ತುರ್ತು ಕ್ರಮ ಕೈಗೊಳ್ಳಲು ಆದರ ಪೂರ್ವಕವಾಗಿ ಬಿ.ಜಿ. ಶೆಟಕಾರ ಅಧ್ಯಕ್ಷರು ಡಾ. ವಿರೇಂದ್ರ ಶಾಸ್ತ್ರಿ ಕಾರ್ಯದರ್ಶಿಗಳು ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗು ಬೀದರ ನಾಗರಿಕರ ಪರವಾಗಿ ತಮ್ಮಲ್ಲಿ ವಿನಂತಿಸಿಕೋಳ್ಳುತ್ತೇವೆ.

# ಆರೋಗ್ಯ ಸಂಜೀವಿನಿ ಅನುಷ್ಠಾನ : ಸಂತಸ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.26: ರಾಜ್ಯ ಸರಕಾರಿ ನೌಕರರು, ಅವರ ಕುಟುಂಬದ ಅವಲಂಬಿತರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಇದೇ ಅ.1ರಿಂದ ಜಾರಿಗೊಳಿಸಲು ರಾಜ್ಯ ಸರಕಾರ ಆದೇಶ ಹೊರಡಿಸಿರುವುದು ಸಂತಸ ತರಿಸಿದೆ ಎಂದು ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ತಿಳಿಸಿದ್ದಾರೆ.

ನೌಕರರ ಸಮುದಾಯದ ಬಹು ದಿನಗಳ ಬೇಡಿಕೆಯಂತೆ ಈ ಯೋಜನೆ ಜಾರಿಯಿಂದಾಗಿ 6 ಲಕ್ಷ ಸರಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ಸೇರಿ ಸುಮಾರು 25 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಲಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ನೇತೃತ್ವದ ತಂಡದ ಪರಿಶ್ರಮ ದೊಡ್ಡದಿದೆ ಎಂದು ಪ್ರಕಟಣೆಯಲ್ಲಿ ಸ್ಮರಿಸಿದ್ದಾರೆ.

# ಲಿಂಗಾಯತ ಎರವಲು ಧರ್ಮವಲ್ಲ




ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 26 : ಲಿಂಗಾಯತ ಎರವಲು ಧರ್ಮವಲ್ಲ. ಸ್ವಂತ ಹೊಸ ಬೇರು ಆಳವಾಗಿ ಬಿಟ್ಟು ಹೆಮ್ಮರವಾಗಿ ಬೆಳೆದ ಧರ್ಮ ಎಂದು ಗುಣತೀರ್ಥವಾಡಿಯ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಗಾಂಧಿಗಂಜ್‌ನ ಬಸವೇಶ್ವರ ದೇವಸ್ಥಾನದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದಿಂದ ಈಚೆಗೆ ನಡೆದ ಮಾಸಿಕ ವಚನ ಮಂಟಪ ಕಾರ್ಯಕ್ರಮದಲ್ಲಿ 'ಲಿಂಗಾಯತ ಧರ್ಮ ಪರಿಪೂರ್ಣ ಧರ್ಮ' ಕುರಿತು ಅವರು ಅನುಭಾವ ಮಂಡಿಸಿದರು.

ಆಡು ಮುಟ್ಟದ ಸೊಪ್ಪಿಲ್ಲ. ಲಿಂಗಾಯತ ಧರ್ಮ ಬೋಧಿಸದ ತತ್ವಗಳೇ ಇಲ್ಲ ಎಂದು ತಿಳಿಸಿದರು.

ಲಿಂಗಾಯತ ಧರ್ಮದ ತತ್ವಗಳನ್ನು ಅಳವಡಿಸಿಕೊಂಡು ಕ್ರಮಬದ್ಧವಾಗಿ ನಡೆದ ದೇವನಾಗಬಲ್ಲ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಜಾಗತಿಕ ಲಿಂಗಾಯತ ಮಹಾಸಭಾದ ಕೇಂದ್ರ ಸಮಿತಿಯ ಉಪಾಧ್ಯಕ್ಷ ಬಸವರಾಜ ಧನ್ನೂರ ಮಾತನಾಡಿ, ಬೀದರನಲ್ಲಿ ಬಸವ ಸಂಸ್ಕೃತಿ ಅಭಿಯಾನ ಅದ್ಧೂ–ರಿಯಾಗಿ ನೆರವೇರಿವೆ. ಬೆಂಗಳೂರಿನಲ್ಲಿ ಅಭಿಯಾನದ ಸಮಾರೋಪವೂ ಐತಿಹಾಸಿಕವಾಗಿ ಜರುಗಲಿದೆ. ಬಸವಣ್ಣನವರ ಕಾರ್ಯದಲ್ಲಿ ಯಾವುದೇ ರಾಜಿ ಇಲ್ಲ ಎಂದು ಹೇಳಿದರು.

ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಜಿಲ್ಲೆಯ ಬಸವಾನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಅಭಿಯಾನದ ಯಶಸ್ವಿಗೆ ಸಹಕರಿಸಿ ದೇಶಕ್ಕೆ ಒಳ್ಳೆಯ ಸಂದೇಶ ರವಾನಿಸಬೇಕು ಎಂದು ತಿಳಿಸಿದರು.

ಮುಖಂಡ ಬಿ.ಎಸ್. ಕುದು–ರೆ ಮಾತನಾಡಿ, ಆತ್ಮವೆಂಬುದು ಎಲ್ಲರಿಗೂ ಇದೆ. ಹೀಗಾಗಿ ಆತ್ಮಸಾಕ್ಷಿಗೆ ಅನುಗುಣವಾಗಿ ಬದುಕಬೇಕು. ಬಸವಣ್ಣನ ಕಾರ್ಯ ಮಾಡುವವರನ್ನು ಮುಕ್ತ ಮನಸ್ಸಿನಿಂದ ಬೆಂಬಲಿಸಬೇಕು. ಅಂದಾಗ ಮಾತ್ರ ಲಿಂಗಾಯತ ಧರ್ಮದ ಬೆಳವಣಿಗೆ ಆಗಲು ಸಾಧ್ಯ ಎಂದು ಹೇಳಿದರು.

ಉದ್ಘಾಟನೆ ನೆರವೇರಿಸಿದ ನಿವೃತ್ತ ಜಿಲ್ಲಾ ಶಸ್ತ್ರಚಿಕಿತ್ಸಕರೂ ಆದ ಗುದಗೆ ಆಸ್ಪತ್ರೆಯ ಮುಖ್ಯಸ್ಥ ಡಾ. ಚಂದ್ರಕಾಂತ ಗುದಗೆ ಮಾತನಾಡಿ, ಬಸವಣ್ಣನವರ ತತ್ವಗಳು ವಿಶ್ವಮಾನ್ಯವಾಗಿವೆ. ಅವುಗಳಲ್ಲಿ ಕಾಯಕವೇ ಕೈಲಾಸ ಹಾಗೂ ದಯವೇ ಧರ್ಮದ ಮೂಲ ಈ ಎರಡನ್ನೇ ಅನುಸರಿಸಿದರೂ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಬಸವ ಸಂಸ್ಕೃತಿ ಅಭಿಯಾನದ ನಿಮಿತ್ತ ಹಮ್ಮಿಕೊಂಡ ಬೆಂಗಳೂರು ಚಲೋ ಕಾರ್ಯಕ್ರಮದ ಕರಪತ್ರ ಬಿಡುಗಡೆ ಮಾಡಲಾಯಿತು. ಬೀದ???ನಲ್ಲಿ ಜರುಗಿದ ಬಸವ ಸಂಸ್ಕೃತಿ ಅಭಿಯಾನದ ಯಶಸ್ವಿಗೆ ಸಹಕರಿಸಿದ ಅಭಿಯಾನ ಸಮಿತಿಯ ಪದಾಧಿಕಾರಿಗಳು, ಗಣ್ಯರು ಹಾಗೂ ದಾಸೋಹಿಗಳನ್ನು ಸನ್ಮಾನಿಸಲಾಯಿತು.

ಬಸವಕಲ್ಯಾಣದ ಬಸವ ಮಹಾಮನೆಯ ಸಿದ್ಧರಾಮೇಶ್ವರ ಸ್ವಾಮೀಜಿ, ಭಾಲ್ಕಿ ಹಿರೇಮಠ ಸಂಸ್ಥಾನದ ಮಹಾಲಿಂಗ ದೇವರು, ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಪ್ರಮುಖರಾದ ಶಾಮರಾವ್ ಸುಲಗುಂಟೆ, ಎಸ್.ಎಂ. ಪಾಟೀಲ, ಡಾ. ಸುಭಾಷ್ ಬಶೆಟ್ಟಿ, ಸಚಿನ್ ಗುರುನಾಥ ಕೊಳ್ಳೂರ, ಜೈರಾಜ ಖಂಡ್ರೆ, ಸಹಜಾನಂದ ಕಂದಗೂಳ, ಮಲ್ಲಮ್ಮ ಆರ್. ಪಾಟೀಲ, ಜಯದೇವಿ ಯದಲಾಪುರೆ, ಕಂಟೆಪ್ಪ ಗಂದಿಗುಡಿ, ಇಂದುಧರ ಮಂಗಲಗಿ ಇದ್ದರು.

ಶಿವಕುಮಾರ ಪಾಂಚಾಳ, ವೈಜಿನಾಥ ಸಜ್ಜನಶೆಟ್ಟಿ ಹಾಗೂ ರೇವಣಪ್ಪ ಮೂಲಗೆ ವಚನ ಗಾಯನ ಮಾಡಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ ಸ್ವಾಗತಿಸಿದರು. ಸುರೇಶ ಸ್ವಾಮಿ ನಿರೂಪಿಸಿದರು. ಯೋಗೇಂದ್ರ ಯದಲಾಪುರೆ ವಂದಿಸಿದರು. ಕರಣ ಪಾಟೀಲ ಚಿದ್ರಿ ಭಕ್ತಿದಾಸೋಹಗೈದರು.

# ಕನ್ನಡಕ್ಕೆ ಭೈರಪ್ಪ ಕೊಡುಗೆ ಅನನ್ಯ



ಬೀದರ. ಸೆ. 26 : ಸಾಹಿತಿ ಎಸ್.ಎಲ್. ಭೈರಪ್ಪ ಅವರು ಕನ್ನಡಕ್ಕೆ ನೀಡಿರುವ ಕೊಡುಗೆ ಅನನ್ಯ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಹೇಳಿದರು.

ನಗರದ ರಾಣಿ ಕಿತ್ತೂರು ಚೆನ್ನಮ್ಮ ವೃತ್ತ ಸಮೀಪದ ಕೃಷ್ಣ ದರ್ಶಿನಿ ಹೊಟೇಲ್‌ನ ಮಹಾಲಕ್ಷ್ಮಿ ಸಾಂಸ್ಕೃತಿಕ ಭವನದಲ್ಲಿ ಗುರುವಾರ ನಡೆದ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅವರ ಕನ್ನಡಾಭಿಮಾನ ಅನುಕರಣೀಯ. ಎಲ್ಲರೂ ದೈನಂದಿನ ಜೀವನದಲ್ಲಿ ಸಂಪೂರ್ಣ ಕನ್ನಡ ಬಳಸುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ತಿಳಿಸಿದರು.

ನಾಟ್ಯಶ್ರೀ ನೃತ್ಯಾಲಯದ ನಿರ್ದೇಶಕ ಕೆ. ಸತ್ಯಮೂರ್ತಿ ಮಾತನಾಡಿ, ಭಾರತೀಯ ಸಂಸ್ಕೃತಿ ಹಾಗೂ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ತಮ್ಮ ಲೇಖನಿ ಮೂಲಕ ವಿಶ್ವಕ್ಕೆ ತೋರಿದವರು ಭೈರಪ್ಪ ಅವರು ಎಂದು ಹೇಳಿದರು.

ಬಡತನದಲ್ಲೇ ಬೆಳೆದ ಅವರು ತಮ್ಮ ಪರಿಶ್ರಮದ ಮೂಲಕ ಎತ್ತರದ ಶಿಖರಕ್ಕೆ ಏರಿದರು. ನೇರ ನಡೆ ನುಡಿಗೆ ಹೆಸರಾಗಿದ್ದರು ಎಂದು ಬಣ್ಣಿಸಿದರು.

ಭಾರತೀಯ ಇತಿಹಾಸ ಸಂಕಲನ ಸಮಿತಿಯ ಬೀದರ್ ಘಟಕದ ಗೌರವಾಧ್ಯಕ್ಷ ಶಿವಕುಮಾರ ಉಪ್ಪೆ ಮಾತನಾಡಿ, ಭೈರಪ್ಪನವರು ಗಟ್ಟಿ ಸಾಹಿತಿಯಾಗಿದ್ದರು. ಯಾವುದೇ ವಿಷಯವಾದರೂ, ವಾಸ್ತವಾಂಶ ಅರಿತು, ಅದಕ್ಕೆ ಅಕ್ಷರದ ರೂಪ ನೀಡುತ್ತಿದ್ದರು ಎಂದು ತಿಳಿಸಿದರು.

ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡವರು ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಮುಖರಾದ ರಾಮಕೃಷ್ಣನ್ ಸಾಳೆ, ಮಂಗಲಾ ಭಾಗವತ್, ಜಯದೇವಿ ಯದಲಾಪುರೆ, ರಮೇಶ ಬಿರಾದಾರ, ಓಂಪ್ರಕಾಶ ದಡ್ಡೆ, ರುಕ್ಮೊದ್ದೀನ್ ಇಸ್ಲಾಂಪುರ ಮಾತನಾಡಿದರು.

ಭಾರತೀಯ ಇತಿಹಾಸ ಸಂಕಲನ ಸಮಿತಿಯ ಬೀದರ್ ಘಟಕದ ಅಧ್ಯಕ್ಷ ಪೃಥ್ವಿರಾಜ್ ಹಾಲಪ್ಪಗೋಳ್, ಡಾ. ಸಂಜೀವಕುಮಾರ ತಾಂದಳೆ,

ನಾಗರಾಜ ಕರ್ಪೂರ, ಬಸಯ್ಯ ಸ್ವಾಮಿ, ಶ್ರೀಕಾಂತ ಬಿರಾದಾರ, ಬಸವರಾಜ ಬಿರಾದಾರ, ಶ್ರೀದೇವಿ ಸೋಮಶೆಟ್ಟಿ, ಭಗವಾನ ಅಣ್ಣೆಪ್ಪನೋರ ಮತ್ತಿತರರು ಇದ್ದರು.

ಬಸವರಾಜ ಮೂಲಗೆ ನಿರೂಪಿಸಿದರು.

# ಬೆಂಬಲ ಬೆಲೆ ಯೋಜನೆಯ ಸದುಪಯೋಗಕ್ಕೆ ರೈತಬಾಂಧವರಲ್ಲಿ ಮನವಿ

ಬೀದರ, ಸೆ.26 : 2025–26ನೇ ಸಾಲಿಗೆ ಭಾರತ ಸರ್ಕಾರವು ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಬೀದರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ರೈತರು ಬೆಳೆದಿರುವ ಈಂಕಿ ಗುಣಮಟ್ಟದ ಹೆಸರು ಮತ್ತು ಉದ್ದಿನ ಕಾಳು ಪ್ರತಿ ಕ್ವಿಂಟಾಲ್‌ಗೆ (ಹೆಸರು) ರೂ. 8768–00 (ಉದ್ದು) ರೂ. 7800–00 ದರದಲ್ಲಿ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ರೈತರಿಂದ ಖರೀದಿಸಲು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ಬೆಂಗಳೂರು ರಾಜ್ಯದ ವತಿಯಿಂದ ಖರೀದಿ ಸಂಸ್ಥೆಯನ್ನಾಗಿ ನೇಮಿಸಿ, ರಾಜ್ಯ ಸರ್ಕಾರ ಆದೇಶಿಸಿರುತ್ತದೆ. ಅದರನ್ವಯ ಜಿಲ್ಲೆಯಲ್ಲಿ ಒಟ್ಟು 30 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ.

ಖರೀದಿ ಕೇಂದ್ರಗಳ ವಿವರ: ಬೀದರ ತಾಲ್ಲೂಕಿನ ಬಗದಲ್, ಜನವಾಡಾ, ಮಾಳೆಗಾಂವ್, ಮುನ್ನಳ್ಳಿ, ಅಣದೂರ, ಕಮಠಾಣಾ. ಭಾಲ್ಕಿ ತಾಲ್ಲೂಕಿನ ಲಕನಗಾಂವ್, ಹಲಬರ್ಗಾ (ಸಹಯೋಗ ಸುವಿಧಾ ಉತ್ಪಾದಕರ ಕಂ.ಲಿ.), ಖಟಕಚಿಂಚೋಳಿ, ಕುರುಬಖೇಳಗಿ, ಸಾಯಿಗಾಂವ್, ಭಾತಂಬ್ರಾ. ಹುಮನಾಬಾದ ತಾಲ್ಲೂಕಿನ ನಿರ್ಣಾ, ದುಬಲಗುಂಡಿ, ಚಿಟಗುಪ್ಪಾ, ಘಾಟಬೋರಾಳ್, ಹಳ್ಳಿಖೇಡ (ಬಿ), ಬೇಮಳಖೇಡ. ಬಸವಕಲ್ಯಾಣ ತಾಲ್ಲೂಕಿನ ಮುಡಬಿ, ಕೋಹಿನೂರ್, ಮಂಠಾಳ್, ರಾಜೇಶ್ವರ, ಹುಲಸೂರ್, ಮುಚಳಂಬ. ಔರಾದ (ಬಾ) ತಾಲ್ಲೂಕಿನ ಔರಾದ (ಬಾ), ಚಿಂತಾಕಿ, ಸಂತಪೂರ್, ಠಾಣಾಕುಶನೂರ್, ಮುಧೋಳ (ಬಿ), ಕಮಲನಗರ.

ರಾಜ್ಯಸರ್ಕಾರದ ಆದೇಶ ಹೊರಡಿಸಿದ ದಿನಾಂಕದಿಂದ ರೈತರ ನೊಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗಧಿಪಡಿಸಿದೆ. ಖರೀದಿ ಪ್ರಕ್ರಿಯೆಯಲ್ಲಿ ರೈತರು ಪ್ರತಿ ಎಕರೆಗೆ ಗರಿಷ್ಠ (ಹೆಸರು)–15 ಮತ್ತು (ಉದ್ದು)–30 ಕ್ವಿಂಟಾಲ್‌ನಂತೆ ಈಂಕಿ ಗುಣಮಟ್ಟದ ಹೆಸರು ಮತ್ತು ಉದ್ದಿನಕಾಳು ಮಾರಾಟ ಮಾಡಬಹುದಾಗಿದೆ. ಖರೀದಿಕೇಂದ್ರಗಳು ಲಾಗ್ ಇನ್ ಕ್ರೆಡೆನ್ಸಿಯಲ್ಸ್‌ಗಳನ್ನು ಪಡೆದು ನೋಂದಣಿ ಪ್ರಕ್ರಿಯೆ ಪ್ರಾರಂಭಿಸಿದ ಮೇಲೆ ನೋಂದಣಿ ಮಾಡಿಕೊಳ್ಳಲು ಇಚ್ಚಿಸುವ ರೈತರು ಸಮೀಪದ ಖರೀದಿ ಕೇಂದ್ರಗಳಿಗೆ ನೋಂದಣೀ ಮಾಡಿಸಿಕೊಂಡು ತಮ್ಮ ಹೆಸರುಕಾಳು ಮತ್ತು ಉದ್ದಿನಕಾಳು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮಾರಾಟ ಮಾಡಿ ಸದರಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ಸಹಾಯಕ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಬೀದರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೌಕರರ ಸಂಘ: ವಾರ್ಷಿಕ ಮಹಾಸಭೆ 11 ರಂದು



ಬೀದರ. ಸೆ. 26 : ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಕ್ಟೋಬರ್ 11 ರಂದು ನಗರದ ಪ್ರತಾಪನಗರದ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ನಡೆಯಲಿದೆ.

ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳು, ಕಾರ್ಯಕಾರಿ ಮಂಡಳಿ ಸದಸ್ಯರು, ನಾಮ ನಿರ್ದೇಶಿತ ಸದಸ್ಯರು, ಎಲ್ಲ ತಾಲ್ಲೂಕು ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ನೌಕರರು ತಪ್ಪದೇ ಭಾಗವಹಿಸಬೇಕು ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ಮನವಿ ಮಾಡಿದ್ದಾರೆ.

# ಮಾದಕ ವಸ್ತುಗಳ ವ್ಯಸನದಿಂದ ದೂರವಿರಿ




ಬೀದರ. ಸೆ. 26 : ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನದಿಂದ ದೂರವಿರಬೇಕು ಎಂದು ನವೀನ್ ಪಬ್ಲಿಕ್ ಶಾಲೆಯ ಅಧ್ಯಕ್ಷ ಕಾಮಶೆಟ್ಟಿ ಚಿಕ್ಕಬಸೆ ಹೇಳಿದರು.

ನಗರದ ಕುಂಬಾರವಾಡ ಕಮಾನ್ ಹತ್ತಿರದ ನವೀನ್ ಪಬ್ಲಿಕ್ ಶಾಲೆಯಲ್ಲಿ ಶುಕ್ರವಾರ ನಡೆದ ನಶೆಮುಕ್ತ ಭಾರತ ಹಾಗೂ ಸ್ವದೇಶಿ ಅಭಿಯಾನದಲ್ಲಿ ಅವರು ಮಾತನಾಡಿದರು.

ಅನೇಕ ಯುವಕರು ಮಾದಕ ವಸ್ತುಗಳ ದಾಸರಾಗಿ ತಮ್ಮ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಕುಟುಂಬವನ್ನು ಬೀದಿಗೆ ತರುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಯುವಕರು ಒಳ್ಳೆಯದ್ದನ್ನು ಹವ್ಯಾಸ ಮಾಡಿಕೊಳ್ಳಬೇಕು. ಕೆಟ್ಟದ್ದರ ಸನೀಹವೂ ಸುಳಿಯಬಾರದು. ಜೀವನದಲ್ಲಿ ಸಾಧನೆಗೆ ಪೂರಕವಾದ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಶಾಲೆಯ ಕಾರ್ಯದರ್ಶಿ ಶೀಲಾ ಚಿಕ್ಕಬಸೆ, ಪ್ರಾಚಾರ್ಯ ರಾಜಪ್ಪ ಬಿರಾದಾರ, ದೀಪಾರಾಣಿ, ಭಾನುಪ್ರಿಯಾ, ಆರತಿ, ಪಲ್ಲವಿ, ಅಲ್ಕಾರಾಣಿ, ಸಪ್ನಾ, ಕುಂದಮ್ಮ, ಶೀತಲ್, ರತ್ನಮಾಲಾ, ಸುಧಾರಾಣಿ, ಆಶಾರಾಣಿ, ಪ್ರವೀಣಾ ಮತ್ತಿತರರು ಇದ್ದರು.

# ಅಂತರಂಗ ಬಹಿರಂಗ ಶುದ್ಧಿಯೇ ವೀರಶೈವ ಧರ್ಮದ ಗುರಿ : ಶ್ರೀ ರಂಭಾಪುರಿ ಜಗದ್ಗುರುಗಳು



**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ-ಸಪ್ಟಂಬರ್-26- ಧರ್ಮ ಮತ್ತು ಆಧ್ಯಾತ್ಮಿಕತೆ ಬದುಕಿನ ಉನ್ನತಿಗೆ ಆಶಾಕಿರಣ. ವೀರಶೈವ ಧರ್ಮ ಕೊಟ್ಟ ಸಂಸ್ಕಾರ ಸಂಸ್ಕೃತಿ ಬಲು ದೊಡ್ಡದು. ಸಂವೇದನಾಶೀಲ ಜೀವನಕ್ಕೆ ವೀರಶೈವ ಧರ್ಮದ ಕೊಡುಗೆ ಅಪಾರ. ಅಂತರಂಗ ಮತ್ತು ಬಹಿರಂಗ ಇವೆರಡನ್ನು ಶುದ್ಧಿಗೊಳಿಸುವುದೇ ವೀರಶೈವ ಲಿಂಗಾಯತ ಧರ್ಮದ ಮೂಲ ಗುರಿಯಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 5ನೇ ದಿನದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮಾನವನ ಉಸಿರಾಟಕ್ಕೆ ಗಾಳಿ ಎಷ್ಟು ಮುಖ್ಯವೋ ಅಷ್ಟೇ ಜೀವನದ ಉಜ್ವಲ ಭವಿಷ್ಯಕ್ಕೆ ಧರ್ಮ ಆಶಾ ಕಿರಣವಾಗಿದೆ. ಆಚಾರ್ಯರ ಮತ್ತು ಶರಣ ಸತ್ಪುರುಷರ ಮಾರ್ಗದರ್ಶನ ಜೀವನದ ಶ್ರೇಯಸ್ಸಿಗೆ ಸ್ಫೂರ್ತಿಯಾಗಿದೆ. ವೀರಶೈವ ಧರ್ಮದ ಬೇರುಗಳನ್ನು ಶಿವಾಗಮಗಳಲ್ಲಿ ಕಾಣುತ್ತೇವೆ. ಶಿವಾಗಮಗಳ ಆಚಾರ್ಯರ ಹಾಗೂ ಶಿವಶರಣರ ಸಾಹಿತ್ಯ ಬದುಕಿ ಬಾಳುವ ಮನುಷ್ಯನ ಎರಡು ಕಣ್ಣು ಇದ್ದ ಹಾಗೆ. ಮೂಲ ನಂಬಿಕೆಗಳನ್ನು ಮೂಢ ನಂಬಿಕೆ ಎಂದು ತಿಳಿಯದೇ ಸಮನ್ವಯದಿಂದ ಬಾಳಿ ಬದುಕುವ ಧ್ಯೇಯವಾಗಬೇಕು. ಯಾವಾಗಲೂ ನಾಶವಾಗದೇ ಇರುವುದು ಧರ್ಮ. ಇದನ್ನು ನಾಶ ಮಾಡುವ ಶಕ್ತಿ ಯಾರಿಗೂ ಯಾವ ಕಾಲಕ್ಕೂ ಇಲ್ಲ. ಸುಸಂಸ್ಕೃತ ಸದೃಢ ಸಮಾಜ ನಿರ್ಮಾಣಕ್ಕೆ ಭದ್ರ ಅಡಿಪಾಯವಾಗಿರುವ ಆಧ್ಯಾತ್ಮ ಜ್ಞಾನದ ಅನುಸಂಧಾನ ಮುಖ್ಯ. ವೀರಶೈವ ಧರ್ಮದ ಸಂವಿಧಾನಗಳು ಭಾರತೀಯರ ಬದುಕಿಗೆ ಸಜ್ಜನಿಕೆಯ ಜೀವ ತುಂಬಿವೆ. ಸತ್ಯ ಮತ್ತು ಶಾಂತಿ ಎಲ್ಲರ ಬಾಳಿಗೂ ಅಗತ್ಯವಾಗಿದೆ. ಶಿವಜ್ಞಾನದ ತಂಗಾಳಿ ಜೀವನದ ಉನ್ನತಿಗೆ ಸಹಕಾರಿಯಾಗಿವೆ. ಶಿವ ಜೀವ ಐಕ್ಯದ ವಿದ್ಯೆಯಲ್ಲಿ ಯಾರು ಆಸಕ್ತರಾಗಿರುವರೋ ಅವರೆಲ್ಲರೂ ವೀರಶೈವರು. ಗುರು ಕೊಟ್ಟ ಇಷ್ಟಲಿಂಗವನ್ನು ಎದೆಯ ಮೇಲೆ ಧರಿಸಿ ಪೂಜಿಸುವಾತನೇ ನಿಜವಾದ ವೀರಶೈವ. ಸಾಮಾಜಿಕ ಬದುಕಿನಲ್ಲಿ ಎಲ್ಲರೊಂದಿಗೆ ಬೆರೆತು ಬಾಳುವುದೇ ವೀರಶೈವ ಧರ್ಮದ ಗುರಿಯಾಗಿದೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಹಾಗೂ ಬಸವಾದಿ ಶರಣರು ವೀರಶೈವ ಲಿಂಗಾಯತ ಧರ್ಮದ ಎರಡು ಕಣ್ಣು ಎಂಬುದನ್ನು ಯಾರೂ ಮರೆಯಬಾರದೆಂದರು.

'ವೀರಶೈವ ಲಿಂಗಾಯತ ಧರ್ಮದ ಸಮಷ್ಠಿಪ್ರಜ್ಞೆ ಚಿಂತನ ಗೋಷ್ಠಿ'ಯನ್ನು ಉದ್ಘಾಟಿಸಿದ ಕೇಂದ್ರ ಗ್ರಾಹಕ ವ್ಯವಹಾರ ಮತ್ತು ಸಾರ್ವಜನಿಕ ವಿತರಣಾ ಖಾತೆ ಸಚಿವ ಪ್ರಹ್ಲಾದ ಜೋಷಿ ಮಾತನಾಡಿ ಮಾನವ ಧರ್ಮಕ್ಕೆ ಜಯವಾಗಲಿ ಎಂದು ಘೋಷಿಸಿದ ಪೀಠ ರಂಭಾಪುರಿ ಪೀಠ. ಶ್ರೀ ರಂಭಾಪುರಿ ಜಗದ್ಗುರುಗಳು ನಿರಂತರ ಧರ್ಮ ಪ್ರಚಾರದೊಂದಿಗೆ ಜನತೆಯನ್ನು ಆಧ್ಯಾತ್ಮ ಪರಂಪರೆಯಲ್ಲಿ ಕೊಂಡೊಯ್ಯಲು ಪ್ರಯತ್ನ ಮಾಡುತ್ತಿದ್ದಾರೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಶ್ರೀ ರಂಭಾಪುರಿ ಪೀಠ ಸ್ಥಾಪನೆ ಮಾಡಿದ್ದಾರೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧನೆ ಮಾಡಿದ್ದು ಸಿದ್ಧಾಂತ ಶಿಖಾಮಣಿ ಹೆಸರಿನಲ್ಲಿ ಶಿವಾಗಮಗಳ ಸಾರವನ್ನು ತಿಳಿಸುವ ಗ್ರಂಥವಾಗಿದೆ. ಜೀವ ಜಗತ್ತಿಗೆ ಆಧ್ಯಾತ್ಮದ ಕೊಡುಗೆ ಅಮೂಲ್ಯ. ವ್ಯಕ್ತಿ ಹಿತಕ್ಕಿಂತ ಸಾಮಾಜಿಕ ಹಿತಾಸಕ್ತಿ ಉಂಟು ಮಾಡುವುದೇ ಧರ್ಮದ ಗುರಿಯಾಗಿದೆ. ಅಖಂಡತೆಗೆ ಇರುವ ಬೆಲೆ ವಿಘಟನೆಯಲ್ಲಿ ಇರುವುದಿಲ್ಲ. ವೀರಶೈವ ಲಿಂಗಾಯತ ಧರ್ಮದ ಉತ್ಕೃಷ್ಟ ಸಂಸ್ಕೃತಿ ಕೊಟ್ಟ ಶ್ರೀ ಜಗದ್ಗುರು ರೇಣುಕಾಚಾರ್ಯರ ಮತ್ತು ಶ್ರೀ ಬಸವೇಶ್ವರರ ವಿಚಾರ ಧಾರೆಗಳ ಅರಿವು ಅನುಸಂಧಾನ ಮುಖ್ಯ. ಬಾಳೆಹೊನ್ನೂರು ಜಗದ್ಗುರುಗಳು ಸದಾ ಸಂಚರಿಸಿ ಜಾಗೃತಿ ಉಂಟು ಮಾಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ ಎಂದರು.

ಬಸವನ ಬಾಗೇವಾಡಿ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಅಸತ್ಯದಿಂದ ಸತ್ಯದೆಡೆಗೆ ಕತ್ತಲೆಯಿಂದ ಬೆಳಕಿನೆಡೆ ಮೃತ್ಯುವಿನಿಂದ ಅಮೃತತ್ವದ ಕಡೆಗೆ ಕರೆದೊಯ್ಯುವುದೇ ಧರ್ಮದ ಗುರಿಯಾಗಿದೆ. ಬಾಲ್ಯದಲ್ಲಿ ಜ್ಞಾನ ತಾರುಣ್ಯದಲ್ಲಿ ಸಂಪತ್ತು ವೃದ್ಧಾಪ್ಯದಲ್ಲಿ ಪುಣ್ಯ ಸಂಪಾದಿಸಿಕೊಂಡು ಬಾಳಬೇಕು. ವೀರಶೈವ ಲಿಂಗಾಯತ ಧರ್ಮ ಜಾತಿ ಜಂಜಡಗಳನ್ನು ಕಿತ್ತು ಜೀವನದ ಉನ್ನತಿಗೆ ಬೇಕಾದ ಪರಮ ಜ್ಞಾನವನ್ನು ಬೋಧಿಸಿದೆ. ವೀರಶೈವ ಧರ್ಮದಲ್ಲಿ ಬೆಟ್ಟದಷ್ಟು ಆಧ್ಯಾತ್ಮ ಸಂಪತ್ತು ಇದ್ದರೂ ಅರಿಯಲಾರದ ಸ್ಥಿತಿ ನಮ್ಮದಾಗಿದೆ. ಉದಾತ್ತ ಮಾನವೀಯ ಮೌಲ್ಯಗಳನ್ನು ಸಾರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಜಗಜ್ಯೋತಿ ಬಸವಣ್ಣನವರ ವಿಚಾರ ಧಾರೆಗಳು ನಮ್ಮೆಲ್ಲರ ಬಾಳಿಗೆ ಬೆಳಕು ತೋರುತ್ತವೆ ಎಂದರು. ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ಬಿಚಗುಂದ ಸಂಸ್ಥಾನಮಠದ ಸೋಮಲಿಂಗ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು.

ಮಾಜಿ ಸಂಸದ ಬಸವರಾಜ ಪಾಟೀಲ (ಸೇಡಂ) ಮಾತನಾಡಿ 21 ವರ್ಷದ ಹಿಂದೆ ಶ್ರೀ ರಂಭಾಪುರಿ ಪೀಠದಲ್ಲಿ ಗುರು ವಿರಕ್ತರ ಸಮಾವೇಶ ಮಾಡಿದ ಕೀರ್ತಿ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಸಲ್ಲುತ್ತದೆ. ಈ ಹಿಂದೆ ಜೇವರ್ಗಿಯಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವಕ್ಕೆ ವಿರೋಧ ಬಂದಾಗ ತಾವು ಜಿಲ್ಲಾಧಿಕಾರಿಗಳನ್ನು ಕಂಡು ಯಾರ ಹಕ್ಕನ್ನು ಯಾರೂ ಕಸಿಯಬಾರದಾಗಿ ವಿನಂತಿಸಿದ್ದೇನೆ. ಅವರವರ ಪರಂಪರೆ ಅವರದು. ಯಾರನ್ನೂ ಪಂಚ ಪೀಠಗಳೊಂದಿಗೆ ಹೋಲಿಕೆ ಮಾಡುವುದು ಸರಿಯಲ್ಲ ಎಂದರು.

ವಿ.ಪ.ಸದಸ್ಯ ಬಿ.ಜಿ. ಪಾಟೀಲ, ಬಸವಕಲ್ಯಾಣದ ಪ್ರದೀಪ ವಾತಡೆ, ತಾಲೂಕಾ ಅ.ಭಾ.ವೀ. ಮಹಾಸಭಾ ಅಧ್ಯಕ್ಷ ರಾಜಕುಮಾರ ಸಿರಗಾಪೂರ, ಹೈದರಾಬಾದಿನ ಎಂ.ವೀರಮಲ್ಲೇಶ, ನ್ಯಾಯವಾದಿ ವಿಜಯಕುಮಾರ ಹೇರೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.


ಗೌರವ ಗುರುರಕ್ಷೆ : ಹಣೆಗಾಂವ ಹಿರೇಮಠದ ಶಂಕರಲಿಂಗ ಶಿವಾಚಾರ್ಯರು, ಮಂಠಾಳ ಚೌಕಿಮಠದ ಅಭಿನವ ಚನ್ನಬಸವ ಸ್ವಾಮಿಗಳು, ತೆಲಂಗಾಣ ರಾಜ್ಯ ಜಂಗಮ ಸಮಾಜದ ಅಧ್ಯಕ್ಷ ಆರ್. ವಿಶ್ವೇಶ್ವರಯ್ಯ, ತೆಲಂಗಾಣ ರಾಜ್ಯ ವೀರಶೈವ ಧರ್ಮ ಪ್ರಚಾರ ಸಂಗಮದ ಅಧ್ಯಕ್ಷ ಜಗದೇವ ಹಿರೇಮಠ, ಕೊಲನಪಾಕ ಕ್ಷೇತ್ರದ ಜಿ.ಎಂ. ಭೂಷಣಂ, ಪ್ರಧಾನ ಅರ್ಚಕ ಜಿ.ಎಂ. ಸೋಮಯ್ಯ ಸ್ವಾಮಿ, ಜಿ.ಎಂ.ಗಂಗಾಧರ, ಜಿ.ಎಂ. ಚಂದ್ರಶೇಖರ, ಶ್ರೀನಿವಾಸ ಯಾದವ, ಭಾರತ ಸರ್ಕಾರದ ರಾಜ್ಯ ಅಭಿವೃದ್ಧಿ ಸಮನ್ವಯ-ಮೇಲುಸ್ತುವಾರಿ ಸಮಿತಿ ಸದಸ್ಯ ಶಿವಯ್ಯಾ ಸ್ವಾಮಿ ಕಮಠಾಣಾ ಇವರಿಗೆ ಗೌರವ ಗುರುರಕ್ಷೆ ಹಾಗೂ ಬಸವಕಲ್ಯಾಣದ ನಿವೃತ್ತ ಶಿಕ್ಷಕರು-ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಪಂಚಾಕ್ಷರಿ ಹಿರೇಮಠ ಹಾಗೂ ಬೆಳಗಾವಿಯ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಗಂಗಾಧರ ಬಿ. ಮಠಪತಿ ಎ.ಸಿ.ಪಿ. ಇವರಿಗೆ ವಿಶೇಷ ಗುರುರಕ್ಷೆ ನೀಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು.

ಕು. ಶ್ರದ್ಧಾ ಶರಣಬಸಪ್ಪ ಪಾಟೀಲ ನೇಳಕೂಡ ಇವರಿಂದ ಯೋಗ ನೃತ್ಯ ಪ್ರದರ್ಶನ ಜರುಗಿತು. ಗುರುಲಿಂಗಯ್ಯಾ ಹಿತ್ತಲಶಿರೂರ ಸಂಗಡಿಗರಿಂದ ಸಂಗೀತ ನಡೆಯಿತು. ಶಿವಮೊಗ್ಗದ ಶಾಂತಾ ಆನಂದ ಹಾಗೂ ರಮೇಶ ರಾಜೋಳೆ ಇವರು ನಿರೂಪಿಸಿದರು. ಈ ಸಂದರ್ಭದಲ್ಲಿ ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು. ತಡೋಳಾದ ಪೂಜ್ಯ ಶ್ರೀ ರಾಜೇಶ್ವರ ಶಿವಾಚಾರ್ಯರು. ತ್ರಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಇನ್ನಿತರ ಪೂಜ್ಯರು ಹಾಗೂ ಶಾಸಕರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶ್ರೀ ಚನ್ನಬಸವೇಶ್ವರ ಹಿರೇಮಠ ಸಂಸ್ಥಾನ ಸುಕ್ಷೇತ್ರ ಹಾರಕೂಡ ಇವರಿಂದ ಅನ್ನ ದಾಸೋಹ ಜರುಗಿತು.

# ಇಂದು ಮನ್ನಾಏಖೇಳ್ಳಿ ಶ್ರೀ ಬಾಲಮ್ಮ ದೇವಿಗೆ ಸಾಮೂಹಿಕ ಕುಂಕುಮಾರ್ಚನೆ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಪ್ರಸಿದ್ಧ ಪುಣ್ಯ ಕ್ಷೇತ್ರವಾದ ತಾಲೂಕಿನ ಮನ್ನಾಏಖ್ಖೇಳ್ಳಿ ಶ್ರೀ ಬಾಲಮ್ಮ ದೇವಿ ದೇವಸ್ಥಾನದಲ್ಲಿ ನಾಡಹಬ್ಬ ದಸರಾ ಮಹೋತ್ಸವ ಮತ್ತು ಶ್ರೀ ಬಾಲಮ್ಮ ದೇವಿಯ 25ನೇಯ ಜಾತ್ರಾ ರಜತ ಮಹೋತ್ಸವ ಅಂಗವಾಗಿ ಇಂದು ಬೆಳಗ್ಗೆ 10 ಗಂಟೆಗೆ ಬೆಮಳಖೇಡಾ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಡಾ. ರಾಜಶೇಖರ ಶಿವಾಚಾರ್ಯರ ಹಾಗೂ ಪೂಜ್ಯ ಶ್ರೀ ಬಾಲಯೋಗಿ ಅಭಿನವ ಶರಣ



ಶಂಕರಲಿಂಗ ಮಹಾರಾಜರು ಸೊಂತ ಇವರುಗಳ ದಿವ್ಯ ಸಾನಿಧ್ಯದಲ್ಲಿ ವಿಶ್ವ ಶಾಂತಿ ಲೋಕ ಕಲ್ಯಾಣಾರ್ಥವಾಗಿ ಸಾಮೂಹಿಕ ಕುಂಕುಮಾರ್ಚನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸರಿಯಾದ ಸಮಯಕ್ಕೆ ಮಹಿಳಾ ತಾಯಂದಿರು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕುಂಕುಮಾರ್ಚನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶ್ರೀ ಬಾಲಮ್ಮ ದೇವಿ ದೇವಸ್ಥಾನ ಟ್ರಸ್ಟಿನ ಅಧ್ಯಕ್ಷ ಹನುಮಂತಪ್ಪ ಮರಕುಂದ, ಸ್ವಾಗತ ಸಮಿತಿಯ ಅಧ್ಯಕ್ಷ ಶಂಕರರಾವ್ ಜ್ಯೋತಗೊಂಡ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸರಿಯಾದ ಸಮಯಕ್ಕೆ ಬಾರದ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ:ಸಮಸ್ಯೆ ಸ್ಪಂದಿಸಲು ಸಾರ್ವಜನಿಕರ ಆಗ್ರಹ

# ಬಾದಲಗಾಂವ ಗ್ರಾಮ ಪಂಚಾಯತ್‌ಗೆ ಇಓ ಭೇಟಿ

(ಶಿವಕುಮಾರ ಬಿರದಾರ)

**ಮಲ್ಲಮ್ಮ ನುಡಿ ವಾರ್ತೆ**

ಔರಾದ ತಾಲೂಕಿನ ಬಾದಲಗಾಂವ ಗ್ರಾಮ ಪಂಚಾಯತ ವ್ಯಾಪತಿ ಯಲ್ಲಿ ಬರುವ ಎಲ್ಲಾ ಗ್ರಾಮಗಳಿಗೆ ಮೂಲ ಸೌಕರ್ಯ ಇಲ್ಲದೆ ಎಲ್ಲಾ ಗ್ರಾಮಗಳಲ್ಲಿ ಸ್ವಚ್ಛ ನೀರಿನ ವ್ಯವಸ್ಥೆ ಚರಂಡಿ ರಸ್ತೆ ಮುಂತಾದವು ಸಮಸ್ಯೆಗಳಿವೆ ಈ ಸಮಸ್ಯೆಗಳನ್ನು ನೋಡಲಾರದೆ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಬಾದಲಗಾಂವ ಹಾಗೂ ನಾರಾಯಣಪುರ್ ಗ್ರಾಮ ದ ಜನರು ಫೋನಿನ ಮುಖಾಂತರ ಕರೆ ಮಾಡಿ ಸಮಸ್ಯೆಗಳನ್ನು ಹೇಳಿದರು ಅವಾಗ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ್ ಪಾಟೀಲ್ ಅವರು ನಾನು ಖುದ್ದಾಗಿ ಬಂದು ಭೇಟಿ ಮಾಡುತ್ತೇನೆ ಎಂದು ಸಾರ್ವಜನಿಕರಿಗೆ ತಿಳಿಸಿದರು.

ದಿನಾಂಕ 26 ರಂದು ಶುಕ್ರವಾರರಂದು ಮುಂಜಾನೆ 11 ಗಂಟೆಗೆ ಗ್ರಾಮ ಪಂಚಾಯತ್ ಕಾರ್ಯಾಲಯಕ್ಕೆ ಭೇಟಿ ನೀಡಿರುತ್ತಾರೆ ಆವಾಗ ಅಲ್ಲಿನ ಪಂಚಾಯತ್ ಅಧಿಕಾರಿ ಕಆಔ ಇರುವುದಿಲ್ಲ ಕೆಲಸ ದ ಸಮಯ 10 ಗಂಟೆ ಕೆಲವು ಸಿಬ್ಬಂದಿ ಇರುವುದಿಲ್ಲ



ಗ್ರಾಮದಲ್ಲಿ ಕಂಬಗಳಿಗೂ ದೀಪ ಇಲ್ಲ ಸ್ವಚ್ಛವಾದ ಚರಂಡಿ ಇಲ್ಲ ರಸ್ತೆ ನೀರಿನ ಸುದ್ದಿಕರಣ ಘಟಕವಿದ್ದರೂ ನೀರು ಬಾರದೆ ಇರುತ್ತದೆ ಬಾದಲಗಾಂವ ನೀರಿನ ಸುದ್ದಿಕರಣ ಘಟಕ ಇದೆ 01/07/2025 ರಂದು ನೀರಿನ ಸುದ್ದಿಕರಣ ರಿಪೇರಿ ಮಾಡಲಾಗಿದೆ ಎಂದು 88308=00 ಸಾವಿರ ರೂಪಾಯಿ ಖರ್ಚು ಮಾಡಲಾಗಿದೆ ಆದರೆ ನೀರು ಇಲ್ಲದೆ ಗ್ರಾಮಸ್ಥರು ಇಔ ಸಾಹೇಬರನ್ನು ಗ್ರಾಮಸ್ಥರು ತಿಳಿಸಿದರು ಹಾಗೂ ಪಂಚಾಯತ್ ಅಧಿಕಾರಿ PDO ಹಾಗೂ ಕಾರ್ಯದರ್ಶಿ ಸರಿಯಾಗಿ ಸಮಯಕ್ಕೆ ಬರುವುದಿಲ್ಲ

ಕಾರ್ಯನಿರ್ವಾಹಕ ಅಧಿಕಾರಿ ಕಿರಣ್ ಪಾಟೀಲ್ ಅವರು ಇದನ್ನು ಪರಿಶೀಲನೆ ಮಾಡಿ ಒಂದು ವಾರದ ಒಳಗೆ ಬಗೆಹರಿಸುತ್ತೇನೆ ಎಂದು ಗ್ರಾಮಸ್ಥರಿಗೆ ತಿಳಿಸಿದ್ದರು. ನಾರಾಯಣಪುರ ಗ್ರಾಮದಲ್ಲಿ ಮುಖ್ಯರಸ್ತೆ ಪಕ್ಕದಲ್ಲಿ ಚರಂಡಿ ಮಾಡಲಾಗುವುದೆಂದು ಜೆಸಿಬಿ ಯಿಂದ ತೆಗೆಯುತ್ತಾರೆ ಸುಮಾರು 50 ದಿನಗಳಿಂದ ನಾರಾಯಣಪುರ ಗ್ರಾಮದ ಚರಂಡಿಯ ತೆಗೆದ ಅಲ್ಲಿನ ಮನೆ ಅವರಿಗೆ ತುಂಬಾ ತೆ-ಊಂದರೆಯಾಗುತ್ತಿದೆ ಆದಕಾರಣ ತಾವು ಇದನ್ನು ಬಗೆಹರಿಸಬೇಕೆಂದು ನಾರಾಯಣಪುರ ನಿವಾಸಿಯಾದ ಮೋಷಿನ್ ಇಔ ಸಾಹೇಬರಿಗೆ ಮನವಿ ಮಾಡಿಕೊಂಡಿದ್ದಾನೆ

ನಾರಾಯಣಪುರ ಅಶೋಕ್ ಹುಗ್ಗೆ ಅವರ ಮನೆ ಹತ್ತಿರ ಚರಂಡಿಯ



ನೀರು ಮಳೆಯ ನೀರು , ಸುಮಾರು ಎರಡು ವರ್ಷಯಿಂದ ಸಮಸ್ಯೆ ಇದೆ ಬೀದರ್ ವನ್ಮಮರ್ಪಲ್ಲಿ ರಸ್ತೆ ಮಾಡುವಾಗ ಈ ಸಮಸ್ಯೆ ಆಗಿದ್ದು ಅದನ್ನು ಕುರಿತು ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ಸುಮಾರು ಬಾರಿ ಈ ಸಮಸ್ಯೆ ಇದೆ ಎಂದು ತಿಳಿಸಿದ್ದಾರೆ ಸಾರ್ವಜನಿಕ ರಸ್ತೆ ಆಗಿದ್ದರಿಂದ ಓಡಾಡಕ್ಕೆ ತುಂಬಾ ಸಮಸ್ಯೆ ಆಗುತ್ತಿದೆ ಎಂದು ತಿಳಿಸಿದರು ಆದರು ಇಲ್ಲಿವರೆಗೆ ಸುಮಾರು ಬೈಕ್ ಸವಾರರು 20 ಜನ ಕೆಸರಿನಲ್ಲಿ ಬಿದ್ದಿದ್ದಾರೆ ಆದ ಕಾರಣ ಇದನ್ನು ಸರಿಪಡಿಸಿ ಎಂದು ಆಗ್ರಹಿಸಿದ್ದಾರೆ.

ಗ್ರಾಮ ಪಂಚಾಯತ್ ವತಿಯಿಂದ ಒಣ ಕಸ ಮತ್ತು ಹಸಿ ಕಸ ಡಬ್ಬಿಯನ್ನು ವಿತರಣೆ ಮಾಡಿದ್ದಾರೆ ಪ್ರತಿ ಗ್ರಾಮ ಕೇ ಆಟೋ ಬಾರದೆ ಇದ್ದ ಕಾರಣ ರಸ್ತೆಯ ಮೇಲೆ ಕಸ ಬಿಸಾಕತ್ತಿದ್ದಾರೆ ಆಗ ಕಾರಣ ಪಂಚಾಯಿತಿ ಎರಡು ಸಿಬ್ಬಂದಿ ನೇಮಕ ಮಾಡಿದ್ದಾರೆ ಅವರು ಯಾರು ಎಂದು ತಿಳಿಸಿ ಗ್ರಾಮಸ್ಥರು

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಸದಸ್ಯರಾದ ಸೋಪನಾವ ಸರಿಕಾರ, ವಿಜಯಕುಮಾರ ಬಿರಾದಾರ. ಮಲ್ಲಿಕಾರ್ಜುನ ವಡಮುರ್ಗೆ.ಉದ್ದೋ ಪಾಟೀಲ್ ಕಂಡು ನಾಯಕ್ ಪಂಢರಿನಾಥ ಹಮಲಪೂರೆ, ಕಿಶನರಾವ ರಾಠೊಡ, ಉದ್ದ್ವಗೌವಳಿ, ಪ್ರಕಾಶ ವಾಗಮಾರೆ, ಗಂಗರಾಮ ಕಾಂಬಳೆ, ವಿನಾಯಕ ಪಾಟೀಲ, ವಸಂತ ಪಾಂಚಳ, ವಸಂತ ಪಾಟೀಲ, ಸೋಪಾನ ಗೌಳಿ , ಸೂರ್ಯಕಾಂತ ವಿಠಲ, ನಾಯಮ ಬಗ್ವಾನ. ಹೀಗೆ ಗ್ರಾಮದ ಅನೇಕರು ಭಾಗಿಯಾಗಿದ್ದರು.

### ಬೀದರ್ ಜಿಲ್ಲೆ ಕಸಮುಕ್ತ ಜಿಲ್ಲೆಯನ್ನಾಗಿ ಮಾಡುವುದೇ

# ನಮ್ಮ ಗುರಿ: ಡಾ. ಗಿರೀಶ್ ಬದೋಲೆ



**ಮಲ್ಲಮ್ಮ ನುಡಿ ವಾರ್ತೆ**

ಹುಮನಾಬಾದ್:ಬೀದರ್ ಜಿಲ್ಲೆ ಕಸಮುಕ್ತ ಜಿಲ್ಲೆಯ ನಾಗಿ ಮಾಡಲು ಗ್ರಾಮ ಪಂಚಾಯತ್ ಅವರ ಸಹಕಾರ ಅಗತ್ಯವಾಗಿದೆ ಎಂದು ಬೀದರ್ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಣ ಅಧಿಕಾರಿ ಡಾ.ಗಿರೀಶ್ ಬದೋಲೆ ಪಟ್ಟಣದ ತಾಲೂಕ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛ ಸೇವಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ತಿಳಿಸಿದರು.

ಸಪ್ಟೆಂಬರ್ 17ರಂದು ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಹಸ್ತದಿಂದ ಸ್ವಚ್ಛತಾ ಈ ಕಾರ್ಯಕ್ರಮ ಉದ್ಘಾಟಿಸಲಾಯಿತು . ನಿರಂತರವಾಗಿ ಪ್ರತಿ ಗ್ರಾಮಗಳಲ್ಲಿ ಸ್ವಚ್ಛತಾ ಈ ಕಾರ್ಯಕ್ರಮದ ಅಂಗವಾಗಿ ಸ್ವಚ್ಛ ಭಾರತ ಯೋಜನೆ ಅಡಿಯಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಒಡಮೂಡಿಸಲಾಗುತ್ತದೆ ಎಂದರು. ಈ ಒಂದು ಸ್ವಚ್ಛತಾ ಈ ಕಾರ್ಯಕ್ರಮ ಸಮಾರೋಪ ಅಕ್ಟೋಬರ್ 2 ರಂದು ಜರುಗಲಿದೆ ಎಂದರು. ಈ ಕಾರ್ಯಕ್ರಮದ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ತ್ಯಾಜ್ಯದಿಂದ ಕಲೆ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಈ ಒಂದು ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡು ವಿವಿಧ ಮಾದರಿಗಳನ್ನು ವಸ್ತು ಪ್ರದೇಶದಲ್ಲಿ ಇಟ್ಟಿದ್ದರು ವಿವಿಧ ಮಾದರಿಗಳನ್ನು ಸಿ ಎಸ್ ವೀಕ್ಷಿಸಿ ಮೆಚ್ಚಿಗೆ ವ್ಯಕ್ತಪಡಿಸಿದರು. ತಾ.ಪಂ.ಕಾರ್ಯನಿರ್ವಾಹಕಾಧಿಕಾರಿ ದೀಪಿಕಾ ನಾಯ್ಕ್ ಪ್ರಸ್ತಾವಿಕವಾಗಿ ಮಾತನಾಡಿ, ಪ್ಲಾಸ್ಟೀಕ್ ತ್ಯಾಜ್ಯದ ವಸ್ತು ಪ್ರದರ್ಶನವನ್ನು ಹಮ್ಮಿಕೊಂಡಿದ್ದು ಇದರಲ್ಲಿ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದಕ್ಕೆ ಧನ್ಯವಾದ ಸಲ್ಲಿಸಿದರು. ಪರಿಸರವಾದಿ ಶೈಲೇಂದ್ರ ಕಾವಡಿ, ಸ್ವಚ್ಛ ಜನಜಾಗೃತಿ ಜಾಥಾದಲ್ಲಿ ಪಾಲ್ಗೊಂಡು ಮಾತನಾಡಿ, ಸ್ವಚ್ಛತಾ ಜಾಗೃತಿ ಕಾರ್ಯಕ್ರಮ ಹಾಗೂ ತ್ಯಾಜ್ಯ ಕಲೆ ಸ್ಪರ್ಧೆ ಕಲ್ಯಾಣ ಕರ್ನಾಟಕಕ್ಕೆ ಮಾದರಿಯ ವಸ್ತು ಪ್ರದರ್ಶನವಾಗಿದೆ ಎಂದರು.

ಹಾಗೂ ಸ್ವಚ್ಛ ಕರ್ನಾಟಕ ಹಸಿರು ಕರ್ನಾಟಕ ಎಂದು ಜೈಘೋಷ ಹಾಕುತ್ತಾ ಜನಜಾಗೃತಿ ಮಾಡಿದರು. ಪ್ರಥಮ ದ್ವಿತೀಯ ತೃತೀಯ ವಿತರಿಸಿದರು. ಗ್ರಾಮ ಪಂಚಾಯತ್ ಸ್ವಚ್ಛತಾ ಕಾರ್ಮಿಕರಿಗೆ ಸಮವಸ್ತ್ರ ವಿತರಿಸಿದರು. ತಾಲೂಕ ಪಂಚಾಯತ್ ಸಾಯಕ ನಿರ್ದೇಶಕರುಗಳಾದ ಶಿವಲೀಲಾ ಜಗನ್ನಾಥ್ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮಹದೇವ ದೇಶಪಾಂಡೆ, ನಾಗಯ್ಯ ಸ್ವಾಮಿ, ಶಿವರಾಜ್, ರಾಜಕುಮಾರ್ ಬುಳ್ಳ, ವೀರಣ್ಣ ಜಮಾದಾರ್, ರಮೇಶ್, ಉಪಸ್ಥಿತರಿದ್ದರು.

### ಸರಡಗಿ ಬ್ಯಾರೇಜ್ ಹತ್ತಿರದ ಪಂಪ್‌ಹೌಸ್‌ನಲ್ಲಿ ಪಂಪ್‌ಲೇವಲ್‌ವರೆಗೆ

# ನೀರು: ವಿವಿಧ ಬಡಾವಣೆಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಸೆ.26-ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಜಲ ಮೂಲ ನದಿಗಳಲ್ಲಿ ಒಂದಾದ ಭೀಮಾ ನದಿಯ ಮೇಲ್ಭಾಗದ ಪ್ರದೇಶದಲ್ಲಿ ವಿಪರಿತ ಮಳೆಯಾಗುತ್ತಿದೆ. ಮಹಾರಾಷ್ಟದ ಉಜ್ಜಯನಿ ಜಲಾಶಯ ಹಾಗೂ ಅಫಜಲಪೂರ ಭೀಮಾ ಬ್ಯಾರೇಜಿನಿಂದ ಹೊರ ಹರಿವು ಹೆಚ್ಚಾಗಿರುವುದರಿಂದ, ಭೀಮಾ ನದಿಯಲ್ಲಿ ಪ್ರವಾಹ ಉಂಟಾಗಿ ಸರಡಗಿ ಬ್ಯಾರೇಜಿನ ಹತ್ತಿರದ ಪಂಪ್‌ಹೌಸ್‌ನಲ್ಲಿ ಪಂಪ್‌ಲೇವಲ್‌ವರೆಗೆ ನೀರು ಬಂದಿರುತ್ತದೆ.

ಇದರ ಹಿನ್ನೆಲೆಯಲ್ಲಿ ಸದರಿ ಮೂಲದಿಂದ ನೀರು ಸರಬರಾಜಾಗುವ ಬಡಾವಣೆಗಳಲ್ಲಿ ಮಾತ್ರ ನಿಗದಿತ ದಿನ ಹಾಗೂ ಸಮಯಕ್ಕೆ ಸರಿಯಾಗಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಕಲಬುರಗಿ ನಗರದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆಯುಐಡಿಎಫ್‌ಸಿ ಹಾಗೂ ಮೆ॥ ಎಲ್ ಆಂಡ್ ಟಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಅವರು ತಿಳಿಸಿದ್ದಾರೆ.

# ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಸೆ.26-ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಸೆಪ್ಟೆಂಬರ್ 27 ರಂದು ಶನಿವಾರ ಕಲಬುರಗಿಯಲ್ಲಿ ನಿಗದಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಂತರ ಮಧ್ಯಾಹ್ನ 12.10 ಗಂಟೆಗೆ ಕಲಬುರಗಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ಶ್ರೀ ತುಳಜಾ ಭವಾನಿ ಜಾತ್ರಾ ಮಹೋತ್ಸವ: ವಿಶೇಷ ವಾಹನಗಳ ಕಾರ್ಯಾಚರಣೆ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಸೆ.26.-ದಾರಶಿವ್ ಜಿಲ್ಲೆಯ ತುಳಜಾಪುರದಲ್ಲಿ 2025ರ ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 10ರವರೆಗೆ ಜರುಗಲಿರುವ ಶ್ರೀತುಳಜಾ ಭವಾನಿ ಜಾತ್ರಾ ಮಹೋತ್ಸವಕ್ಕೆ ಹೋಗುವ ಭಕ್ತಾದಿಗಳ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ-1 ಮತ್ತು 4, ಚಿತ್ತಾಪುರ, ಕಾಳಗಿ ಹಾಗೂ ಸೇಡಂ ಘಟಕಗಳಿಂದ ತುಳಜಾಪೂರಕ್ಕೆ ವಿಶೇಷ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗ-1ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ಅದೇ ರೀತಿ ಚಿಂಚೋಳಿ ತಾಲೂಕಿನ ಸಾರ್ವಜನಿಕರು/ಭಕ್ತಾದಿಗಳಿಗೆ ಅನುಕೂಲವಾಗಲು ಚಿಂಚೋಳಿಯಿಂದ ತುಳಜಾಪುರಕ್ಕೆ ವ್ಹಾಯಾ ಹುಮನಾಬಾದ ಮಾರ್ಗವಾಗಿ ವಿಶೇಷ ವಿಶೇಷ ಬಸ್ಸುಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಈ ವಿಶೇಷ ವಾಹನಗಳ ಸೌಲಭ್ಯಕ್ಕಾಗಿ ಸಂಪರ್ಕಿಸಬೇಕಾದ ಘಟಕ ವ್ಯವಸ್ಥಾಪಕರ ದೂರವಾಣಿ ಸಂ-ಖ್ಯೆ ವಿವರ ಇಂತಿದೆ. ಕಲಬುರಗಿ ಘಟಕ-1 ಘಟಕ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ 7760992113, ಕಲಬುರಗಿ ಘಟಕ-4ರ ಘಟಕ ವ್ಯವಸ್ಥಾಪಕ-7022012103, ಚಿಂಚೋಳಿ ಘಟಕದ ಘಟಕ ವ್ಯವಸ್ಥಾಪಕ-7760992117, ಚಿತ್ತಾಪೂರ ಘಟಕದ ಘಟಕ ವ್ಯವಸ್ಥಾಪಕ-7760992119, ಕಾಳಗಿ ಘಟಕದ ಘಟಕ ವ್ಯವಸ್ಥಾಪಕ-7760992120 ಹಾಗೂ ಸೇಡಂ ಘಟಕ ಘಟಕ ವ್ಯವಸ್ಥಾಪಕ-7760992466 ಗಳಿಗೆ ಸಂಪರ್ಕಿಸಬಹುದಾಗಿದೆ.

ಮೇಲ್ಕಂಡ ಘಟಕಗಳ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣ/ಗ್ರಾಮಗಳಿಂದ 40 ರಿಂದ 45, ಜನ ಪ್ರಯಾಣಿಕರಿದ್ದಲ್ಲಿ ನೇರವಾಗಿ ಬಸ್ ನಿಲ್ದಾಣ/ಗ್ರಾಮಗಳಿಂದಲೇ ತುಳಜಾಪೂರಕ್ಕೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದ್ದು, ಸಾರ್ವಜನಿಕ ಪ್ರಯಾಣಿಕರು/ ಭಕ್ತಾದಿಗಳು ಸಾರಿಗೆಗಳ ಸದುಪಯೋಗವನ್ನು ಪಡೆಯಬೇಕೆಂದು ಅವರು ತಿಳಿಸಿದ್ದಾರೆ.

# ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಭೆ:

## ಮೂರು ಹೊಸದಾಗಿ ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ನೀಡಲು ಒಪ್ಪಿಗೆ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಸೆ.26-ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅಧ್ಯಕ್ಷತೆಯಲ್ಲಿ ಬುಧವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಹಾಗೂ ಜಿಲ್ಲಾ ಕಲ್ಲು ಪುಡಿ ಘಟಕಗಳ ಲೈಸನ್ಸ್ ನೀಡಿಕೆ ನಿಯಂತ್ರಣ ಪ್ರಾಧಿಕಾರದ ಸಭೆಯಲ್ಲಿ ಕಲಬುರಗಿ, ಕಾಳಗಿ ಹಾಗೂ ಕಮಲಾಪೂರ ತಾಲೂಕಿನಲ್ಲಿ ತಲಾ ಒಂದರಂತೆ ಕಲ್ಲು ಗಣಿಗಾರಿಕೆ ನಡೆಸಲು ಲೈಸೆನ್ಸ್ ನೀಡಲು ಸಭೆ ಒಪ್ಪಿಗೆ ಸೂಚಿಸಿದೆ.



ಕಲಬುರಗಿ ತಾಲೂಕಿನ ಭೀಮಳ್ಳಿ ಮತ್ತು ಕಮಲಾಪುರ ತಾಲೂಕಿನ ಜೀವಣಗಿಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಗೆ ಮತ್ತು ಕಾಳಗಿ ತಾಲೂಕಿನ ಹುಲುಸಗೂಡನಲ್ಲಿ ಸವಳು ಮಣ್ಣು ರಪ್ತು(ಫುಲರ್ಸ್) ಗಣಿಗಾರಿಕೆ ನಡೆಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು-1994 ರಂತೆ ಟಾಸ್ಕ್‌ಫೋರ್ಸ್ ಸಮಿತಿ ಒಪ್ಪಿಗೆ ಸೂಚಿಸಿದೆ.

ಇದೇ ಸಂದರ್ಭದಲ್ಲಿ ನಡೆದ ಜಿಲ್ಲಾ ಕಲ್ಲು ಪುಡಿ ಘಟಕ ನಿಯಂತ್ರಣ ಸಮಿತಿ ಸಭೆಯಲ್ಲಿ ಕಾಳಗಿ ಮತ್ತು ಕಲಬುರಗಿ ತಾಲೂಕಿನಲ್ಲಿ ತಲಾ ಒಂದು ಕ್ರಶರ್ ಯೂನಿಟ್ ಘಟಕ ಕಾರ್ಯಾರಂಭಕ್ಕೂ ಫಾರ್ಮ್-ಸಿ ಪರವಾನಿಗೆ ನೀಡಲು ಸಭೆ ಅನುಮೋದನೆ ನೀಡಿದೆ.

ಅಕ್ರಮ ಗಣಿಗಾರಿಕೆ,53.31 ಲಕ್ಷ ರೂ. ದಂಡ: ಸಭೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ಸೋಮಶೇಖರ ಮಾತನಾಡಿ, ಪ್ರಸಕ್ತ 2025-26ನೇ ಸಾಲಿನಲ್ಲಿ ಏಪ್ರಿಲ್ ನಿಂದ ಇಲ್ಲಿಯವರೆಗೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ಮಾಡಿಕೊಂಡಿದಕ್ಕಾಗಿ 139 ಪ್ರಕರಣಗಳಲ್ಲಿ 53.31 ಲಕ್ಷ ರೂ. ದಂಡ ವಿಧಿಸಿದೆ. ಇದರಲ್ಲಿ 81 ಎಫ್.ಐ.ಆರ್ ದಾಖಲಿಸಿದ್ದು, 6 ಪ್ರಕರಣಗಳಲ್ಲಿ ಇಲಾಖೆಯೆ ಪಿ.ಸಿ.ಆರ್ ವರದಿ ತಯಾರಿಸಿ ಸಂಬಂಧಿಸಿದ ಜೆ.ಎಂ.ಎಫ.ಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ. ನಿಗದಿತ ಮಾರ್ಗದಲ್ಲಿ ಸಾಗಾಣಿಕೆ ಮಾಡದೆ ನಿಯಮಾವಳಿ ಉಲ್ಲಂಘಿಸಿದಕ್ಕಾಗಿ 10 ವಾಹನಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಎಸ್.ಪಿ ಅಡ್ಡೂರು ಶ್ರೀನಿವಾಸಲು, ಡಿ.ಸಿ.ಪಿ ಕನಿಕಾ ಸಿಕ್ರಿವಾಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ ಪಾಟೀಲ, ಸಹಾಯಕ ಆಯುಕ್ತ ಪ್ರಭುರೆಡ್ಡಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪರಿಸರ ಅಧಿಕಾರಿಗಳು ಸೇರಿದಂತೆ ತಾಲೂಕಿನ ತಹಶೀಲ್ದಾರರು, ಪೊಲೀಸ್ ಅಧಿಕಾರಿಗಳು ಮತ್ತಿತರರು ಹಾಜರಿದ್ದರು.

# ದಸರಾ ಹಬ್ಬದ ಪ್ರಯುಕ್ತ ಕೆ.ಕೆ.ಆರ್.ಟಿ.ಸಿ ಸಂಸ್ಥೆಯಿಂದ 500 ಹೆಚ್ಚುವರಿ ಬಸ್ ಕಾರ್ಯಾಚರಣೆ -ಡಾ.ಬಿ.ಸುಶೀಲಾ

ಕಲಬುರಗಿ,ಸೆ.26-ದಸರಾ ಹಬ್ಬ, ವಾರಾಂತ್ಯ ಹಾಗೂ ಸಾಲು ರಜೆ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪ್ರದೇಶದ ಜಿಲ್ಲಾ ಮತ್ತು ತಾಲೂಕು ಕೇಂದ್ರದಿಂದ ಬೆಂಗಳೂರು ಮತ್ತು ಸೋಲಾಪೂರದ ತುಳಜಾಪುರಕ್ಕೆ ಹೋಗಿ ಬರಲು ಪ್ರಯಾಣಿಕರ ಅನುಕೂಲಕ್ಕಾಗಿ 500 ಹೆಚ್ಚುವರಿ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕರು ಮತ್ತು ಪ್ರಯಾಣಿಕರು ಇದರ ಸೌಲಭ್ಯ ಪಡೆಯಬೇಕು ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಡಾ.ಬಿ.ಸುಶೀಲಾ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಸೆಪ್ಟೆಂಬರ್ 25, 26 ಹಾಗೂ 29 ರಂದು ಸಂಸ್ಥೆ ವ್ಯಾಪ್ತಿಯ ಜಿಲ್ಲಾ ಮತ್ತು ತಾಲೂಕು ಕೇಂದ್ರದಿಂದ ಬೆಂಗಳೂರು, ತುಳಜಾಪೂರ ಸೇರಿದಂತೆ ಇತರೆ ಪ್ರಮುಖ ಸ್ಥಳಗಳಿಗೆ ಹಾಗೂ ಸೆಪ್ಟೆಂಬರ್ 26, 27 ಹಾಗೂ 30 ರಂದು ಬೆಂಗಳೂರಿನಿಂದ ಇತರೆ ಸ್ಥಳಗಳಿಗೆ ಹೆಚ್ಚುವರಿ ವಾಹನಗಳ ಕಾರ್ಯಾಚರಣೆಗೊಳಿಸಲಾಗುತ್ತಿದೆ. ಇನ್ನು ಹಬ್ಬ ಮತ್ತು ರಜೆ ಮುಗಿದ ನಂತರ ಅಕ್ಟೋಬರ್ 3 ರಿಂದ 5ರ ವರೆಗೆ ಸಹ ಸಂಚಾರ ದಟ್ಟಣೆಗನುಗುಣವಾಗಿ ವಾಹನಗಳ ಕಾರ್ಯಾಚರಣೆ ನಡೆಯಲಿದೆ ಎಂದಿದ್ದಾರೆ. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸಾರಿಗೆ ಬಸ್ ನಲ್ಲಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅವಕಾಶವಿದ್ದು, ಪ್ರಯಾಣಿಕರು ಕರ್ನಾಟಕ ಹಾಗೂ ಅಂತರರಾಜ್ಯದಲ್ಲಿರುವ 18 ಗಣಕೀಕೃತ ಬುಕ್ಕಿಂಗ್ ಕೌಂಟರ್‌ಗಳ ಮುಖಾಂತರ ಆಸನ ಕಾಯ್ದಿರಿಸಬಹುದಾಗಿದೆ. 4 ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5ರಷ್ಟು ಹಾಗೂ ಹೋಗುವ ಮತ್ತು ಬರುವ ಪ್ರಯಾಣದ ಟಿಕೇಟನ್ನು ಒಟ್ಟಿಗೆ ಕಾಯ್ದಿರಿಸಿದಲ್ಲಿ ಪ್ರಯಾಣ ದರದಲ್ಲಿ ಶೇ.10ರಷ್ಟು ರಿಯಾಯತಿ ನೀಡಲಾಗುತ್ತಿದೆ. ಪ್ರಯಾಣಿಕರು ಬಸ್ ನಿಲ್ದಾಣಗಳಿಗೆ ತೆರಳುವ ಮುನ್ನ ಮುಂಗಡ ಟಿಕೇಟುಗಳ ಮೇಲೆ ನಮೂದಿಸಲಾಗಿರುವ ಬಸ್ ನಿಲ್ದಾಣ, ಪಿಕ್ ಅಪ್ ಪಾಯಿಂಟ್ ಸ್ಥಳ ಮತ್ತು ಹೆಸರು ಗಮನಿಸಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುಣ್ಯಾವತಿಬಾಯಿ ಕೊಂಡಿ ಇವರ ಅಮೃತ ಹಸ್ತದಲ್ಲಿ ಇಂದು ಘಟಸ್ಥಾಪನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 26 : ಪ್ರತಿ ವರ್ಷದಂತೆ ಈ ವರ್ಷವು ನಗರದ ಕುಂಬಾರವಾಡಾ ಶ್ರೀ ಮಾತಾ ಕಾಳಿಕಾದೇವಿ ಭವಾನಿ ಮಂದಿರದಲ್ಲಿ ನವರಾತ್ರಿ ಉತ್ಸವವನ್ನು ಸೆಪ್ಟೆಂಬರ್ 22 ಸೋಮವಾರದಿಂದ ಅಕ್ಟೋಬರ್ 6 ಸೋಮವಾರ ದವರೆಗೆ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಗುತ್ತಿದೆ.

ಪ್ರತಿ ವರ್ಷದಂತೆ ಈ ವರ್ಷವು ಪುಣ್ಯಾವತಿಬಾಯಿ ಕೊಂಡಿ ಇವರ ಅಮೃತ ಹಸ್ತದಲ್ಲಿ ಘಟಸ್ಥಾಪನಾ ನಡೆಯಲಿದೆ, ಅವರು ಇಂದಿನಿಂದ ಅಕ್ಟೋಬರ್ 1 ಬುಧವಾರ ರಾತ್ರಿ 12 ಗಂಟೆಯವರೆಗೆ ಅನುಷ್ಠಾನ ಕುಳಿತುಕೊಳ್ಳುವರು. ಅವರು ಕಳೆದ ಸುಮಾರು ಇಪತ್ತು ವರ್ಷದಿಂದ ತಮ್ಮ ಅಮೃತ ಹಸ್ತದಲ್ಲಿಯೇ ಘಟಸ್ಥಾಪನೆ ಮಾಡಿಕೊಂಡು ಜಾನಕಲ್ಯಾಣಕ್ಕಾಗಿ ಅನುಷ್ಠಾನ ಕೈಗೊಳ್ಳುತ್ತಿದ್ದಾರೆ.



ಪ್ರತಿದಿನ ಮುಂಜಾನೆ 7 ಗಂಟೆಯಿಂದ 11 ಗಂಟೆಯವರೆಗೆ ಹಾಗೂ ರಾತ್ರಿ ಪೂಜಾ, ಅರ್ಚನಾ ಹಾಗೂ ಆರತಿ ಕಾರ್ಯಕ್ರಮ ನಡೆಯುತ್ತದೆ ಸದ್ಭಕ್ತರು ಮಾತೆ ದರ್ಶನ ಪಡೆಯಬಹುದು.

ಸೆ.29 ರಂದು ಸೋಮವಾರ ರಾಣಿ ಸತ್ಯಮೂರ್ತಿ ನೇತೃತ್ವದಲ್ಲಿ ರಾತ್ರಿ 6 ಗಂಟೆಗೆ ಭರತನಾಟ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಕ್ಟೋಬರ್ 2 ರಂದು ಗುರುವಾರ ವಿಜಯದಶಮಿ (ದಸರಾ) ದಿನದಂದು ಶ್ರೀ ಮಾತಾ ಕಾಳಿಕಾದೇವಿ ಪಾಲಕಿ, ಮಧ್ಯಾಹ್ನ 2 ಗಂಟೆಗೆ ಕುಂಬಾರವಾಡಾ ಮಂದಿರದಿಂದ ಪ್ರಾರಂಭವಾಗಿ ಹೂಗೇರಿ ಕ್ಷೇತ್ರ ದಿಂದ ಎಸ್.ಪಿ. ಬಂಗಲಾ, ಹೈದ್ರಾಬಾದ ರೋಡ್, ಶ್ರೀ ಹನುಮಾನ ದೇವಾಲಯ ದರ್ಶನ ಪಡೆದು, ಪುನಃ ಲಾಲವಾಡಿ ಕ್ಷೇತ್ರದಿಂದ ಹಾಯುತ್ತ ರಾತ್ರಿ 10 ಗಂಟೆಗೆ ಕುಂಬಾರವಾಡ ಕ್ಷೇತ್ರಕ್ಕೆ ತಲುಪುತ್ತದೆ. ಈ ಮೆರವಣಿಗೆಯಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ.

ಅ. 6 ರಂದು ಸೋಮವಾರ ಕೋಜಗಿರಿ ಪೂರ್ಣಿಮಾ ದಿವಸ ಮುಂಜಾನೆ 5 ಗಂಟೆಯಿಂದ 11 ಗಂಟೆಯವರೆಗೆ ಹಾಲು, ಮೊಸರು, ಸಕ್ಕರೆ, ತುಪ್ಪ ಇವುಗಳಿಂದ ಶ್ರೀ ಮಾತಾ

ಅಭಿಷೇಕ ನಡೆಯಲಿದ್ದು ಭಕ್ತಾದಿಗಳೂ ತಮ್ಮ ಅಮೃತ ಹಸ್ತದಿಂದ ಅಭೀಷೇಕ ಮಾಡಲು ಇದು ಒಂದೆ ದಿನ ತಮಗೆ ಗರ್ಭಗುಡಿಯಲ್ಲಿ ಅವಕಾಶ ಇರುತ್ತದೆ. ಸಮಸ್ತ ಸದ್ಭಕ್ತರು ಇದರಲ್ಲಿ ಭಾಗವಹಿಸಿ ಶ್ರೀ ಮಾತಾ ದರ್ಶನ ಪಡೆದು ಪುನಿತರಾಗಿರಿ. ಸಾಯಂಕಾಲ 5 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಮಹಾಪ್ರಸಾದ ವ್ಯವಸ್ಥೆ ಇರುತ್ತದೆ. ಇಡಿ ರಾತ್ರಿ ಭಜನ, ಸಂಗೀತ ದರ್ಬಾರ ನಡೆ–ಯುತ್ತದೆ. ಸದ್ಭಕ್ತರು ಈ ನವರಾತ್ರಿ ಉತ್ಸವದ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ

ಮಾತೆಯ ದರ್ಶನ ಪಡೆದು ಪುನೀತರಾಗಬೇಕೆಂದು ಕುಂಬಾರವಾಡಾದ ಶ್ರೀ ಮಾತಾ ಕಾಳಿಕಾದೇವಿ ಸಮಸ್ತ ಮಂಡಳಿ ಅಧ್ಯಕ್ಷ ವಿಜಯಕುಮಾರ ವೀರಶೆಟ್ಟಿ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾರ್ಥಕ ಜೀವನ ಲೋಕಾರ್ಪಣೆ: ಸೆ.28 ರಂದು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಸೆ.26: ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿಯಾಗಿ, ಅನೇಕ ಹೆಣ್ಣು ಮಕ್ಕಳಿಗೆ ಅಂಗನವಾಡಿ ಕಾರ್ಯಕರ್ತೆ, ಸಹಾಯಕರಾಗಿಸಿ ಸಾವಿರಾರು ಉದ್ಯೋಗ ನೀಡಿ ಮಹಿಳಾ ಸಬಲೀಕರಣಕ್ಕೆ ಮುಂದಾದವರು ಅವರ ಪ್ರಥಮ ಪುಣ್ಯಸ್ಮರಣೆಯನ್ನು ನೆನಪಿಗೆ ಹುಮನಾಬಾದ ಹಿರಿಯ ಸಾಹಿತಿ ಡಾ.ಎಚ್.ಕಾಶೀನಾಥ ರೆಡ್ಡಿ ಸಂಪಾದಿಸಿದ ಸಾರ್ಥಕ ಜೀವನ ಎಂಬ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಇದೇ ಸೆಪ್ಟೆಂಬರ್ 28 ರಂದು ರವಿವಾರ ಬೆಳಗ್ಗೆ 10–30 ಗಂಟೆಗೆ ವೀರಶೈವ ಕಲ್ಯಾಣ ಮಂಟಪ ಖರ್ಗೆ ಪೆಟ್ರೋಲ್ ಬಂಕ್ ಹತ್ತರದ ಹುಮನಾಬಾದ ರಿಂಗ



ರಸ್ತೆ ಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪರಿವಾರ ಡಾ.ಶರಣಬಸಪ್ಪ ಗಣಜಲಖೇಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಾರಂಗಧರ ಮಠ ಶ್ರೀಶೈಲ ಮತ್ತು ಸುಲಫಲ ಮಠ

ಕಲಬುರಗಿ ಜಗದ್ಗುರು ಡಾ.ಸಾರಂಗಧರ ಮಹಾಸ್ವಾಮಿಗಳು ಮತ್ತು ಸೊನ್ನದ ಡಾ.ಸಿವಾನಂದ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವಹಿಸಿ ಗ್ರಂಥ ಲೋಕಾರ್ಪಣೆ ಮಾಡುವರು. ದಕ್ಷಿಣ ಮತ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಉದ್ಘಾಟಿಸುವರು ನಿಕಟಪೂರ್ವ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಅಪ್ಪಾರಾವ್ ಅಕ್ಕೋಣಿ ಅಧ್ಯಕ್ಷತೆ ವಹಿಸುವರು. ಗ್ರಂಥ ಸಂಪಾದಕ ಎಚ್ ಕಾಶೀನಾಥರೆಡ್ಡಿ ಭಾಗವಹಿಸುವರು, ಅವರ ಪರಿವಾರ, ಬಂಧು ಮಿತ್ರರು, ಅಧಿಕಾರಿಗಳು, ಸಾಹಿತಿಗಳು, ಸಾಹಿತ್ಯಾಸಕ್ತರು, ಅಭಿಮಾನಿಗಳು, ಭಾಗವಹಿಸಲು ಸಾಹಿತಿ ಮತ್ತು ಸಂಚಾಲಕ ಡಾ.ಗವಿಸಿದ್ಧಪ್ಪ ಪಾಟೀಲ ಕೋರಿದ್ದಾರೆ.

# ಅ. 2 ರಂದು ಗಾಂಧಿ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ: ಸೆ.30 ರಂದು ಜಿಲ್ಲೆಯಾದ್ಯಂತ ಶ್ರಮದಾನ ಆಯೋಜನೆಗೆ ಸೂಚನೆ

ಕಲಬುರಗಿ,ಸೆ.26: ಜಿಲ್ಲೆಯಾದ್ಯಂತ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 156ನೇ ಜಯಂತಿಯನ್ನು ಸರ್ವಧರ್ಮ ಪ್ರಾರ್ಥನೆ, ಸದ್ಭಾವನಾ ಗೀತ ಗಾಯನ ಹಾಗೂ ಗಾಂಧಿಪ್ರಿಯ ಭಜನ್ ಸೇರಿದಂತೆ ಅರ್ಥಪೂರ್ಣವಾಗಿ ಆಚರಿಸಲು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗಾಂಧಿ ಜಯಂತಿ ಹಿನ್ನೆಲೆಯಲ್ಲಿ ಅಧಿಕಾರಿಗಳ ಪೂರ್ವಭಾವಿ ಸಭೆ ನಡೆಸಿದ ಅವರು, ಅಕ್ಟೋಬರ್ 2 ರಂದು ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಕಲಬುರಗಿ ನಗರದ ಸರ್ದಾರ ವಲ್ಲಭಭಾಯ್



ಪಟೇಲ್ ವೃತ್ತದಲ್ಲಿರುವ ಕನ್ನಡ ಭವನದಲ್ಲಿ ಬಾಪುವಿನ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕು. ಶಿಷ್ಠಾಚಾರದಂತೆ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಚುನಾಯಿತ ಜನಪ್ರತಿನಿಧಿಗಳನ್ನು ಮತ್ತು ಎಲ್ಲಾ ಧರ್ಮಗುರುಗಳನ್ನು ಅಹ್ವಾನಿಸಬೇಕು ಎಂದರು.

ಜಯಂತಿ ಕಾರ್ಯಕ್ರಮ ನಡೆಯುವ ಕನ್ನಡ ಭವನ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು. ಕುಡಿಯುವ ನೀರು ಪೂರೈಸಬೇಕು. ವಿದ್ಯುತ್ ಅಡೆತಡೆ–ಯಾಗದಂತೆ ಎಚ್ಚರ ವಹಿಸಬೇಕು. ಸಾರ್ವಜನಿಕರು ಮತ್ತು ಮಕ್ಕಳು ಕಾರ್ಯಕ್ರಮಕ್ಕೆ ಆಗಮಿಸುವುದರಿಂದ ಪೊಲೀಸ್ ಬಂದೋಬಸ್ತ್ ಒದಗಿಸಬೇಕು. ಗಾಂಧೀಜಿ ಅವರ ಸರಳ ಜೀವನ ವಿವರಿಸುವ ಓರ್ವ ತಜ್ಞರನ್ನು ಗುರುತಿಸಿ ಅವರಿಂದ ಉಪನ್ಯಾಸ ಆಯೋಜಿಸಬೇಕು. ಇದೇ ಸಂದರ್ಭದಲ್ಲಿ ಬಾಪೂಜಿ ಪ್ರಬಂದ ಸ್ಪರ್ಧೆಯಲ್ಲಿ ವಿಜೇತ ಅಭ್ಯರ್ಥಿಗಳಿಗೆ ನಗದು ಬಹುಮಾನ ವಿತರಿಸಬೇಕು ಎಂದರು.


ಜಯಂತಿಯ ಹಿಂದಿನ ದಿನವೇ ಕಲಬುರಗಿ ನಗರದ ಇಂದಿರಾ ಸ್ಮಾರಕ ಭವನ (ಟೌನ್ ಹಾಲ್) ನಲ್ಲಿರುವ ಗಾಂಧಿ ಪ್ರತಿಮೆಗೆ ವಿದ್ಯುತ್ ದೀಪಾಲಂಕಾರಗೊಳಿಸಬೇಕು. ಇದಲ್ಲದೆ ಪ್ರಮುಖ ವೃತ್ತಗಳಲ್ಲಿ ದೀಪಾಲಂಕಾರ ಮಾಡುವ ಮೂಲಕ ಬಾಪುವಿನ ಜನ್ಮ ವರ್ಷಾಚರಣೆ ವಿಶೇಷವಾಗಿ ಆಚರಿಸಬೇಕು ಎಂದು ರಾಯಪ್ಪ ಹುಣಸಗಿ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಸೆಪ್ಟೆಂಬರ್ 30ಕ್ಕೆ ಶ್ರಮದಾನ: ಗಾಂಧಿ ಜಯಂತಿ ಅಂಗವಾಗಿ ಸೆ.30 ರಂದು

ಜಿಲ್ಲೆಯ ಎಲ್ಲಾ ಶಾಲಾ–ಕಾಲೇಜು, ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳಲ್ಲಿ ಸ್ವಚ್ಛತೆಯ ಶ್ರಮದಾನ ಮತ್ತು ಅಕ್ಟೋಬರ್ 2 ರಂದು ಗಾಂಧಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ತಿಳಿಸಿದರು.

ಸಭೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ದಗಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ಅ. ನಾಸಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಸುರೇಶ ಅಕ್ಕಣ್ಣ ಸೇರಿದಂತೆ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳಿದ್ದರು.

# ಭಕ್ತಿ, ಮಹಿಮೆಯ ಶಕ್ತಿಪೀಠ : ತುಳಜಾಪುರದ ತುಳಜಾ ಭವಾನಿ ದೇವಾಲಯ





ಮಲ್ಲಮ್ಮ ನುಡಿ ವಾರ್ತೆ ಬೀದರ.ಸೆ. 26 : ಮಹಾರಾಷ್ಟ್ರದ ಧರಾಶಿವ್ (ಉಸ್ಮಾನಾಬಾದ್) ಜಿಲ್ಲೆಯ ತುಳಜಾಪುರ ಪಟ್ಟಣದಲ್ಲಿರುವ ಜಗನ್ಮಾತೆ ಶ್ರೀ ತುಳಜಾ ಭವಾನಿ ದೇವಾಲಯ ದಕ್ಷಿಣ ಭಾರತದ ಪ್ರಮುಖ ಶಕ್ತಿಪೀಠಗಳಲ್ಲಿ ಒಂದಾಗಿದ್ದು, ಈ ದೇವಾಲಯವು ಶತಮಾನಗಳಿಂದ ಭಕ್ತರ ನಂಬಿಕೆ, ಧೈರ್ಯ ಮತ್ತು ಶೌರ್ಯದ ಸಂಕೇತವಾಗಿ ಪ್ರಸಿದ್ಧಿ ಪಡೆದಿದೆ. ಇತಿಹಾಸ, ಪುರಾಣ ಮತ್ತು ಸಂಸ್ಕೃತಿಯ ಮಹತ್ತನ್ನು ಒಟ್ಟುಗೂಡಿಸಿರುವ ಈ ತೀರ್ಥಕ್ಷೇತ್ರವು ಪ್ರತಿ ವರ್ಷ ಲಕ್ಷಾಂತರ ಭಕ್ತರನ್ನು ತನ್ನತ್ತ ಆಕರ್ಷಿಸುತ್ತದೆ.

ಈ ದೇವಸ್ಥಾನವು ಪುರಾಣಗಳ ಪ್ರಕಾರ, ತುಳಜಾ ಭವಾನಿ ತಾಯಿ ಪಾರ್ವತಿ ದೇವಿಯ ಅವತಾರ. ದುಷ್ಟ ಶಕ್ತಿಗಳನ್ನು ಸಂಹರಿಸಿ ಧರ್ಮ ರಕ್ಷಣೆಗೆ ತಾಯಿ ಭೂಮಿಗೆ ಅವತರಿಸಿದರೆಂದು ನಂಬಿಕೆ. ಕ್ರಿಸ್ತ ಶಕ 12–13ನೇ ಶತಮಾನದಲ್ಲಿ ಯಾದವ ವಂಶದ ಆಡಳಿತಕಾಲದಲ್ಲಿ ಈ ದೇವಾಲಯದ ನಿರ್ಮಾಣ ಪ್ರಾರಂಭವಾಯಿತು. ನಂತರ ಭೋಸಲೆ ಮನೆತನದ ರಾಜರು ದೇವಾಲಯದ ವಿಸ್ತರಣೆ, ಗರ್ಭಗೃಹದ ಅಲಂಕಾರ, ಗೋಪುರ, ದೀಪಸ್ತಂಭ, ಘಟಾಮಂಟಪ ನಿರ್ಮಿಸಿ ದೇವಾಲಯಕ್ಕೆ ಶಿಲ್ಪಕಲೆಯ ವೈಭವವನ್ನು ನೀಡಿದರು.

ತುಳಜಾ ಭವಾನಿ ದೇವಿಯ ದೈವಿಕ ರೂಪ ಎಂಟು ಕೈಗಳಲ್ಲಿ ತ್ರಿಶೂಲ, ಖಡ್ಗ, ಧನುಷ್, ಶಂಖ, ಚಕ್ರ ಮುಂತಾದ ಆಯುಧಗಳನ್ನು ಹಿಡಿದ ಭವ್ಯ ರೂಪದಲ್ಲಿ ಮಾತೆಯ ಮೂರ್ತಿಯು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ವರ್ಷಪೂರ್ತಿ ದೇವಿಗೆ ವಿಶೇಷ ಪೂಜೆಗಳು, ಹೋಮ–ಹವನ, ಜಪ–ತಪ ನಡೆಯುತ್ತಿದ್ದು, ವಿಶೇಷವಾಗಿ ಸಂಕಷ್ಟ ನಿವಾರಣೆಗೆ, ಹೊಸ ಜೀವನದ ಶುಭಾರಂಭಕ್ಕೆ ಭಕ್ತರು ತುಳಜಾ ಭವಾನಿ ತಾಯಿಯ ಆಶೀರ್ವಾದ ಪಡೆಯಲು ಕರ್ನಾಟಕ, ತೆಲಂಗಾಣ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ದೇವಾಲಯದ ಆವರಣದಲ್ಲಿ ಇರುವ ಪವಿತ್ರ ತೀರ್ಥಕುಂಡದಲ್ಲಿ ಸ್ನಾನ ಮಾಡಿ ದೇವಿಯ ದರ್ಶನ ಪಡೆದು ಪುನಿತರಾಗುತ್ತಾರೆ.

ಇತಿಹಾಸದಲ್ಲಿ ಮಹತ್ವ ಪೂರ್ಣ ಘಟನೆಯೆಂದರೆ ಛತ್ರಪತಿ ಶಿವಾಜಿ ಮಹಾರಾಜರಿಗೆ ತುಳಜಾ ಭವಾನಿ ತಾಯಿಯು ಆಶೀರ್ವಾದವಾಗಿ ಖಡ್ಗ ನೀಡಿದರೆಂಬ ನಂಬಿಕೆ ಇದೆ. ಶಿವಾಜಿ ಮಹಾರಾಜರು ಸ್ವರಾಜ್ಯ ಸ್ಥಾಪನೆಯ ಹಾದಿಯಲ್ಲಿ ನಡೆಯಲು ಆತ್ಮವಿಶ್ವಾಸ ತುಂಬಿದು ಇದೆ ಖಡ್ಗ ಎಂದು ಭಕ್ತರು ಭಾವಿಸುತ್ತಾರೆ.

ಭಕ್ತರ ನಂಬಿಕೆ ಮತ್ತು ಪದ್ಧತಿಗಳು:– ತಾಯಿಯ ಕೃಪೆಯಿಂದ ಸಂಕಷ್ಟ ನಿವಾರಣೆ, ರೋಗಮುಕ್ತಿ, ಧೈರ್ಯ, ಶೌರ್ಯ ದೊರೆಯುತ್ತದೆ ಎಂಬ ಭಕ್ತರ ನಂಬಿಕೆ ಶತಮಾನಗಳಿಂದ ಜೀವಂತವಾಗಿದೆ. ತಮ್ಮ ಮನೋಭಿಲಾಷೆ ಈಡೇರಿದ ಬಳಿಕ ಭಕ್ತರು ದೇವಿಗೆ ಓಟಿ ಹಾಗೂ ಕಾಣಿಕೆ ಸಮರ್ಪಣೆ ಮಾಡುವ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ.

ನವರಾತ್ರಿ ಉತ್ಸವ:– ಪ್ರತಿ ವರ್ಷ ಆಶ್ವಿನಿ ಮಾಸದಲ್ಲಿ ನಡೆಯುವ ನವರಾತ್ರಿ ಉತ್ಸವವು ಬಹಳ ವೈವಿಧ್ಯಮಯವಾಗಿದ್ದು, ತುಳಜಾ ಭವಾನಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಪ್ರತಿ ದಿನ ವಿಶೇಷ ಅರ್ಚನೆ, ಹೋಮ, ದೀಪಾರಾಧನೆ, ನವರಾತ್ರಿ ಕಾಲದ ವಿಶೇಷ ಪೌರಾಣಿಕ ವಿಧಿಗಳು, ರಥೋತ್ಸವ ನಡೆಯುತ್ತವೆ. ದಸರಾ ಹಬ್ಬದಂದು ದೇವಿಯ ವಿಶೇಷ ಮೆರವಣಿಗೆ, ಶೋಭಾಯಾತ್ರೆ, ರಥೋತ್ಸವ ಅದ್ದೂರಿಯಾಗಿ ನಡೆ–ಯುತ್ತದೆ. ಈ ಸಮಯದಲ್ಲಿ ತುಳಜಾಪುರದ ಬೀದಿಗಳು ಲಕ್ಷಂತರ ಭಕ್ತರಿಂದ ನೆರೆದಿರುತ್ತದೆ. ಪಟ್ಟಣವು ವಿಶೇಷ ಅಲಂಕಾರ, ದೀಪಮಾಲೆ, ಭಜನೆ, ಧಾರ್ಮಿಕ ಶಾಸ್ತ್ರೋಕ್ತ ಕಾರ್ಯಕ್ರಮಗಳಿಂದ ದೇವಸ್ಥಾನವು ಕಂಗೊಳಿಸುತ್ತದೆ.

ಪಾದಯತ್ರೆ:– ನಮ್ಮ ಕರ್ನಾಟಕದ ಬೀದರ, ಕಲಬುರಗಿ, ಯಾದಗಿರಿ, ವಿಜಯಪೂರ ಜಿಲ್ಲೆಗಳು ಸೇರಿದಂತೆ ಮಹಾರಾಷ್ಟ್ರದ ಸೊಲ್ಲಾಪುರ, ಲಾತೂರ ಹಾಗೂ ಧರಾಶಿವ್ (ಉಸ್ಮಾನಾಬಾದ್) ಜಿಲ್ಲೆಯಿಂದ ಭಕ್ತರು ವಿಜಯದಶಮಿ ದಿನದಂದು ತಮ್ಮ– ತಮ್ಮ ಮನೆಗಳಲ್ಲಿ ಅತೀ ವಿಜೃಂಭಣೆಯಿಂದ ಆಚರಿಸಿದ ನಂತರ ಭಕ್ತ ವೃಂದರು ಸೇರಿ ತುಳಜಾಪೂರದ ಶ್ರೀ ತುಳಜಾ ಭವಾನಿ ದೇವಾಲಯದವರೆಗೆ ಧಾರ್ಮಿಕ ನಂಬಿಕೆ ಮತ್ತು ಭಕ್ತಿಯಿಂದ ಪಾದಯಾತ್ರೆ ಹಮ್ಮಿಕೊಂಡು ಅಶ್ವಿನಿ ಪೂರ್ಣಿಮೆಂದು ತುಳಜಾಪೂರಕ್ಕೆ ಬಂದು ತಾಯಿ ತುಳಜಾ ಭವಾನಿಯ ಆರ್ಶಿವಾದ ಪಡೆಯುತ್ತಾರೆ.

ಈ ಪಾದಯಾತ್ರೆಯಲ್ಲಿ ಭಾಗವಹಿಸುವ ಭಕ್ತರು, ದೇವಿಯ ಆಶೀರ್ವಾದವನ್ನು ಪಡೆಯಲು ತಮ್ಮ ಮನಸ್ಸಿನಲ್ಲಿ ಶುದ್ಧತೆ ಮತ್ತು ಭಕ್ತಿಯಿಂದ ನಡೆಯುತ್ತಾರೆ. ಯಾತ್ರೆಯ ಮಾರ್ಗದಲ್ಲಿ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು, ಅನ್ನದಾನ ನಡೆಯುತ್ತವೆ, ಇದು ಭಕ್ತಿಯ ಜೊತೆಗೆ ಸಾಂಸ್ಕೃತಿಕ ವೈವಿಧ್ಯತೆಯನ್ನೂ ಪ್ರತಿಬಿಂಬಿಸುತ್ತದೆ. ಈ ಪಾದಯಾತ್ರೆ, ಭಕ್ತಿ ಮತ್ತು ಧಾರ್ಮಿಕ ನಂಬಿಕೆಯ ಪ್ರತೀಕವಾಗಿದ್ದು, ಭಾರತದ ಧಾರ್ಮಿಕ ಪರಂಪರೆಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ.

ದೇವಾಲಯದ ನಿರ್ವಹಣೆ:–ಪ್ರಸ್ತುತ ಶ್ರೀ ತುಳಜಾ ಭವಾನಿ ದೇವಸ್ಥಾನ ಟ್ರಸ್ಟ್ ದೇವಾಲಯದ ನಿರ್ವಹಣೆ ಮಾಡುತ್ತಿದೆ. ದೈನಂದಿನ ಪೂಜೆ, ಹಬ್ಬ–ಹರಿದಿನಗಳ ಆಯೋಜನೆ, ತೀರ್ಥಕುಂಡದ ಶುದ್ಧತೆ, ಭಕ್ತರಿಗೆ ವಸತಿ, ಆನ್ಲೈನ್ ದರ್ಶನ ಸೇವೆ, ದೇವಸ್ಥಾನದ ಸಂರಕ್ಷಣೆ ಮುಂತಾದ ಅನೇಕ ಕಾರ್ಯಗಳನ್ನು ಟ್ರಸ್ಟ್ ಯಶಸ್ವಿಯಾಗಿ ನಡೆಸುತ್ತಿದೆ. ಇಂದಿನ ತುಳಜಾಪುರ:– ತುಳಜಾ ಭವಾನಿ ಮಂದಿರವು ಧಾರ್ಮಿಕ ಕೇಂದ್ರ ಮಾತ್ರವಲ್ಲದೆ ಇತಿಹಾಸ, ಶೌರ್ಯ ಮತ್ತು ಸಂಸ್ಕೃತಿಯ ಪರಂಪರೆಯನ್ನು ತೋರುವ ಪವಿತ್ರ ಕ್ಷೇತ್ರವಾಗಿದೆ. ಸರ್ಕಾರ ಮತ್ತು ದೇವಸ್ಥಾನ ಟ್ರಸ್ಟ್‌ಳು ದೇವಾಲಯದ ಮೂಲ ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಪರಂಪರೆ ಉಳಿಸುವತ್ತ ಗಮನಹರಿಸುತ್ತಿವೆ. ಆದರಂತೆ ಭಕ್ತರ ಹೃದಯದಲ್ಲಿ ಅಚಲ ಭಕ್ತಿಯನ್ನು ತುಂಬಿದ ತುಳಜಾ ಭವಾನಿ ತಾಯಿ, ತುಳಜಾಪುರವನ್ನು ಭಾರತದೆಲ್ಲೆಡೆ ಪ್ರಸಿದ್ಧಗೊಳಿಸಿರುವ ಶಕ್ತಿಪೀಠವಾಗಿಯೇ ಇಂದಿಗೂ ದೀಪ್ತಿಮಂತವಾಗಿದೆ.

# ಅ.2 ರಿಂದ ಬೀದರನಿಂದ ಯುವ ಪರಿವರ್ತನ ಯಾತ್ರೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.26– ಜನಸಾಮಾನ್ಯರ ವೇದಿಕೆಯಿಂದ ಅಕ್ಟೋಬರ್ 2 ರಿಂದ 13 ರವರೆಗೆ ಬೀದರಿನಿಂದ ಬೆಂಗಳೂರಿನವರೆಗೆ 'ಯುವ ಪರಿವರ್ತನೆಗಾಗಿ' ಯುವ ಪರಿವರ್ತನೆಯಾತ್ರೆಹಮ್ಮಿಕೊಳ್ಳಲಾಗಿದೆ ಎಂದು ಯಾತ್ರೆಯ ಸಂಚಾಲಕ ಯಲ್ಲಪ್ಪ ಹೆಗಡೆ ಹೇಳಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜ್ವಲಂತ ಸಮಸ್ಯೆಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದ ಕುರಿತು ಸರ್ಕಾರದ ಗಮನ ಸೆಳೆಯಲು ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಯಾತ್ರೆಹಮ್ಮಿಕೊಳ್ಳಲಾಗಿದೆ ಎಂದರು.

ಯುವಕರು ಅಭಿವೃದ್ಧಿಯತ್ತ ಚಿತ್ತಹರಿಸಲು, ಶಿಕ್ಷಣ, ಸಬಲೀಕರಣ, ಉದ್ಯೋಗದ ಮೂಲಕ ಯುವಜನರ ಹಾಗೂ ರೈತರ ಏಳಿಗೆಗಾಗಿ ಜಾಥಾ ಮಾಡಲಾಗುವುದು. ಬೀದರ್‌ನಿಂದ ಬೆಂಗಳೂರು ವಿಧಾನಸೌಧದವರೆಗೂ ಸುಮಾರು

12 ಸಾವಿರ ಕಿ.ಮೀ. ಯಾತ್ರೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದ ಅವರು, ಯುವಜನರು, ರೈತರು ಯಾತ್ರೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಮುತ್ತಪ್ಪ ಕೋಮಾರ, ಬಸವರಾಜ ಧರ್ಮಂತಿ, ಶಿವಲಿಂಗ ನಿಂಗನೂರ, ಶೇಖರ ಕಾಂಬಳೆ, ಆಸ್ಕರ್ ಸರಕಾವಸ, ಪರಶು ನಾಯಕರ ಇದ್ದರು.

# ಡಾ. ನಾಗೇಶ ತಳಕೇರಿ ಅವರಿಗೆ ವಿಶೇಷ ಸನ್ಮಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಸೆ.26: ಮುಂಬೈ ನಗರದ ಮೈಸೂರು ಅಸೋಸಿಯೇಷನ್ ಬಾಂಬೆ ಭವನದಲ್ಲಿ ಸಮಾಜ ಸೇವಕ ನಾಗೇಶ್ ತಳಕೇರಿ ಅವರ ಸಾಮಾಜಿಕ ಉತ್ತಮ ಸೇವೆಯನ್ನು ಪರಿಗಣಿಸಿ ವಿಶ್ವವಿದ್ಯಾಲಯ ಅಂತರಾಷ್ಟ್ರೀಯ ಮಾನ್ಯತೆ ಸಂಸ್ಥೆಯ ಲಾವೋ ಯುಎಸ್ಎ 2015 –16 ಭಾರತ ಸರ್ಕಾರದ ನೊಂದಣಿ ಅಡಿಯಲ್ಲಿ ಡಾಕ್ಟರೇಟ್ ಪಡೆದ ಬಳಿಕ ನಗರಕ್ಕೆ ಆಗಮಿಸಿದ ಡಾ. ನಾಗೇಶ್ ತಳಕೇರಿ ಅವರಿಗೆ ಬಿಜೆಪಿ ಪಕ್ಷದ ಮುಖಂಡರು ಹಾಗೂ ಜಿ.ಪಂ.ಮಾಜಿ ಅಧ್ಯಕ್ಷ ನಿತಿನ್ ವ್ಹಿ ಗುತ್ತೇದಾರ್, ಸಮಾಜ ಸೇವಕ ಶ್ರೀಕಾಂತ್ ರೆಡ್ಡಿ ಹಾಗೂ ಕನ್ನಡ ಪರ ಸಂಘಟನೆಗಳು, ಹಿಂದೂ ಪರ ಸಂಘಟನೆಗಳು ದಲಿತ ಪರ ಸಂಘಟನೆಗಳ ನೇತೃತ್ವದಲ್ಲಿ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಇಂಡಿ ತಾಲೂಕಿನ ಬುಯ್ಯಾರ ಗ್ರಾಮದ ನಾಗೇಶ್ ತಳಕೇರಿ ಬಂದಿದ್ದು ತುಂಬಾ ಬಡತನ ಕುಟುಂಬದಿಂದ ಆದರೂ ಧಾನ



ಧರ್ಮಕ್ಕೆ ಯಾವಾಗಲೂ ಎತ್ತಿದ ಕೈ.ಇಂಡಿ ತಾಲೂಕಿನಲ್ಲಿ ಕಷ್ಟ ಅಂತ ಯಾರಾದರೂ ಬಂದರೆ ಅಂತವರಿಗೆ ಧಾನಮಾಡುವ ದಾನಶುರ ಕರ್ಣ ತನ್ನ ಕೈಯಿಂದ ಆಗುವಷ್ಟು ದಾನ ಮಾಡುವಂತೆ ಏಕೈಕ ವ್ಯಕ್ತಿ ಅಂತ ಅಂದ್ರೆ ಅದು ನಾಗೇಶ್ ತಳಕೇರಿ ಅವರು ಮಾತ್ರ ಯಲ್ಲರನ್ನೂ ಕೂಡ ಸಮಾನರಾಗಿ ನೋಡುವಂತ ಮನಸ್ಥಿತಿಯ ವ್ಯಕ್ತಿ ಅಂತ ಅಂದ್ರೆ ಅದು ಬೇರೆ ಯಾರು ಅಲ್ಲ ನಾಗೇಶ್ ತಳಕೇರಿ ಅವರು ಮಾತ್ರ ತಂದೆ ಶರಣಪ್ಪ ತಳಕೇರಿ ತಾಯಿ ನೀಲವ್ವ ತಳಿಕೇರಿ ಅವರ ದಂಪತಿಗಳ ಹೊಟ್ಟೆಯಲ್ಲಿ ಹುಟ್ಟಿದ ಅಮೂಲ್ಯ ರತ್ನ ಈ ನಾಗೇಶ್ ತಳಕೇರಿ ದಲಿತ ಸಮುದಾಯದ ಯುವ ಮುಖಂಡ ನಾಗೇಶ್ ತಳಕೇರಿ ಅವರು ಯಾವಾಗಲೂ ಸಾಮಾಜಿಕ ಸೇವೆ ಅತಿ ಕಡುಬಡ ಕುಟುಂಬದವರಿಗೆ ಪ್ರತಿ ತಿಂಗಳ ರೇಶನ್ ಕೊಡುವುದು ಇನ್ನಿತರ ಸಮಾಜ ಸೇವಕರಾಗಿ ಗುರುತಿಸಿಕೊಂಡಿರುವ ವ್ಯಕ್ತಿ ಯಾರಾದರೂ ಇದ್ರೆ ಅದು ಡಾ. ನಾಗೇಶ್ ತಳಕೇರಿ ಅವರು ಮಾತ್ರ

ಭೀಮಾ ತೀರದ ರಕ್ತ ಚರಿತ್ರೆಯ ಹೆಸರನ್ನು ಸಮಾಜ ಸೇವೆಯ ಮೂಲಕ ಅಳಿಸಲು ಹೊರಟ ಡಾ. ನಾಗೇಶ್ ತಳಕೇರಿ ಸಮಾಜ ಸೇವೆ ಹಾಗೂ ಬಡವರ ಕಷ್ಟಗಳಿಗೆ ಸ್ಪಂದಿಸುವ ಜನನಾಯಕ ಇರುವರೆಗೆ ಬಡವರಿಗೆ ಯಾವುದೇ ರೀತಿಯಾಗಿ ಸಮಸ್ಯೆಗಳು ಆಗೋದಿಲ್ಲ ಅನ್ನೋದು ಗೊತ್ತಾಗುತ್ತದೆ.

ಇವರ ಸಮಾಜ ಸೇವೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಕೇವಲ ನಿಂಬೆ ನಾಡಿಗೆ ಮಾತ್ರ ಅಲ್ಲದೆ ರಾಜ್ಯದ ಮೂಲೆ ಮೂಲೆಯಲ್ಲಿ ಕೂಡ ಇವರ ಹೆಸರು ಪ್ರತಿ ಬಿಂಬಿಸಲಿ ಅನ್ನೋದೇ ನಮ್ಮ ನಿಮ್ಮೆಲ್ಲರ ಆಶಯ.

ಈ ಸಂದರ್ಭದಲ್ಲಿ ಕನ್ನಡ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಮ್ ಎಸ್ ಪಾಟೀಲ್ ನರಿಬೋಳ, ಜಯ ಕರ್ನಾಟಕ ಸಂಘಟನೆಯ ವಿಭಾಗೀಯ ಅಧ್ಯಕ್ಷ ಮಲ್ಲಿಕಾರ್ಜುನ ಸಾರವಾಡ, ಕರ್ನಾಟಕ ರೈತ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರಪ್ಪ ತಂಬೆ, ಹಿಂದೂ ಜಾಗೃತಿ ಸೇನೆ ಜಿಲ್ಲಾಧ್ಯಕ್ಷ ಲಕ್ಷ್ಮಿಕಾಂತ್ ಸ್ವಾದಿ, ಭಾರತೀಯ ಯುವ ಸೈನ್ಯದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಚಿಂಚನಸೂರ್, ವೀರ ಶಿವಾಜಿ ಸೇನೆ ಜಿಲ್ಲಾಧ್ಯಕ್ಷ ಶ್ರೀಕಾಂತ್ ಜಾಧವ್, ರಾಮ್ ಸೇನೆ ವಿಭಾಗಿ ಅಧ್ಯಕ್ಷ ಗುಂಡು ಪಾಟೀಲ್, ಹಿರಿಯ ಮುಖಂಡ ಮಲ್ಲಿಕಾರ್ಜುನ ಡೋಲೆ ಸೇರಿದಂತೆ ಅನೇಕ ಮುಖಂಡರು ಯುವಕರು ಉಪಸ್ಥಿತರಿದ್ದರು.

# ಇನ್ನರ್ ವ್ಹಿಲ್ ಗುಲಬರ್ಗಾ ಸನ್‌ಸಿಟಿ ವತಿಯಿಂದ 'ದೀಲ್ ಸೇ ದಾಂಡಿಯಾ' ಗರಭಾ (ದಾಂಡಿಯಾ)

ಕಲಬುರಗಿ :ಸೆ.26: ನಗರದ ಬಂಜಾರಾ ಭವನದಲ್ಲಿ ಇನ್ನರ್ ವ್ಹಿಲ್ ಗುಲಬರ್ಗಾ ಸನ್‌ಸಿಟಿ ವತಿಯಿಂದ 'ದೀಲ್ ಸೇ ದಾಂಡಿಯಾ' ಗರಭಾ (ದಾಂಡಿಯಾ) ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಇನ್ನರ್ ವ್ಹಿಲ್ ಗುಲಬರ್ಗಾ ಸನ್‌ಸಿಟಿ ವತಿಯಿಂದ 'ದೀಲ್ ಸೇ ದಾಂಡಿಯಾ' ಗರಭಾ (ದಾಂಡಿಂ–ಯಾ) ಕಾರ್ಯಕ್ರಮವನ್ನು ಸುಮಾರು 12 ವರ್ಷಗಳಿಂದ ಈ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಾ ಬಂದಿದ್ದಾರೆ.



ಈ ಕಾರ್ಯಕ್ರಮದ ಮುಖಾಂತರ ದಾನಿಗಳು ಮತ್ತು ದಾಂಡಿಯಾ ಟಿಕೇಟಿನ ಹಣವನ್ನು ಪಡೆದು ಕಡು–ಬಡವರಿಗೆ ವೃದ್ಧಾಶ್ರಮ, ಅಂಧ ಮಕ್ಕಳಿಗೆ ಕಲಿತ ಸಾಮಗ್ರಿಗಳು, ಬಡವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮುಂತಾದ ಸಾಮಾಜಿಕ ಸೇವೆಯನ್ನು ಮಾಡುತ್ತಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಲಕ್ಷ್ಮೀ ದತ್ತಾತ್ತೇಯ ಪಾಟೀಲ್ (ರೇವೂರ), ಜಯಶ್ರೀ ಬಸವರಾಜ ಮತ್ತಿಮೊಡ, ಪ್ರದೀಪ ಸಂಗಾ–ಮಾಲಿಕರು, ರಾಯಲ್ ಎನಫಿಲ್ಡ್, ಎಪಿ ಸ್ಟುಡಿಯೊ ನಿರ್ದೇಶಕ ಅನಿಲ ಪವಾರ, ಡಾ. ಶ್ವೇತಾ ಅಲೋಕ ಪಾಟೀಲ, ಜ್ಯೋತಿ ತೇಗನೂರ, ಅನು ಪಾಟೀಲ, ಅಧ್ಯಕ್ಷೆ ಸ್ವಾತಿ ಪವಾರ, ಕಾರ್ಯದರ್ಶಿ ಶಿಲ್ಪಾ ಜೈನ್, ಪಾಸ್ಟ್ ಪ್ರೆಸಿಡೆಂಟಗಳಾದ ಚಂದನ ಸೇಠಿಯಾ, ಸಪ್ನಾ ದೇಶಪಾಂಡೆ, ಶ್ವೇತಾ ಎಂ.ಜಿ., ತೃಪ್ತಿ ಶಹಾ, ಪಲ್ಲವಿ ಮುಕ್ಕಾ, ಪ್ರಿಯಾ ಕಾವೇರಿ, ಸುನಿತಾ ಬೋರಾ, ಡೈರೆಕ್ಟರುಗಳಾದ ಅಂಜನಾ ಶಿರವಾಳ, ವಿಜಯಶ್ರೀ ಮುಕ್ಕಾ, ಸಾರಿಕಾ ರಂಗದಳ, ಮನಿಷಾ ಜೈನ್, ಪ್ರಿಯಾ ವಿರೇಶ, ಪಲ್ಲವಿ ಕೋಠಾರಿ, ತನಿಯತ್ ಬಾನು, ಸಂಗೀತಾ ಕಳಸ್ಕರ್, ದೀಪಾ ಏಡಕೆ, ಕಾಂಚನಾ ಮಂದಕನಳ್ಳಿ, ಹಾಗೂ ಗರಭಾ (ದಾಂಡಿಯಾ) ಪ್ರೇಮಿ ಸದರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅದ್ದೂರಿಯಾಗಿ ಜರುಗಿತು ಎಂದು ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರೋಟರಿ ಕೋ–ಆರ್ಡಿನೇಟರ್ ಶ್ರೀ ಮಲ್ಲಿಕಾರ್ಜುನ ಬಿರಾದಾರ ಉಪಸ್ಥಿತರಿದ್ದರು.

# ಹಿಂಗುಲಾಂಬಿಕದೇವಿ ದೇವಸ್ಥಾನದಲ್ಲಿ ವಿವಿಧ ಕಾರ್ಯಕ್ರಮ : ರಂಗದಾಳ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಸೆ.26: ನವರಾತ್ರಿ ಹಬ್ಬದ ನಿಮಿತ್ಯವಾಗಿ ಭಾವಸಾರ್ ಕ್ಷತ್ರಿಯ ಸಮಾಜ ವತಿಯಿಂದ ನಗರದ ಹಿಂಗುಲಾಂಬಿಕದೇವಿ ದೇವಸ್ಥಾನದಲ್ಲಿ ವಿವಿಧ ಕಾರ್ಯಕ್ರಮಗಳು ಆಯೋಜಿಸಲಾಗಿದೆ ಎಂದು ಭಾವಸಾರ ಕ್ಷತ್ರಿಯ ಸಮಾಜದ ಜಿಲ್ಲಾ ಅಧ್ಯಕ್ಷರಾದ ಲಕ್ಷ್ಮೀಕಾಂತ್ ರಂಗದಾಳ ತಿಳಿಸಿದ್ದಾರೆ.

ದಿನಾಂಕ 25–9–2025 ರಿಂದ 30–09–2025 ರವರೆಗೆ ಪ್ರತಿದಿನ ಬೆಳಿಗ್ಗೆ 9 ಗಂಟೆಗೆ ಮತ್ತು ರಾತ್ರಿ 8:30 ಗಂಟೆಗೆ ದೇವಿ ಆರತಿ, ಅದೇರೀತಿಯಾಗಿ ಪ್ರತಿದಿನ ಸಾಯಂಕಾಲ ದಾಂಡಿಯಾ ನೃತ್ಯ ಸೇರಿದಂತೆ ವಿವಿಧ ದಾರ್ಮಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದ್ದು, ಕಲಬುರಗಿ ಮಹಾ ಜನತೆ ಆಗಮಿಸಿ ದೇವಿಯ ಆಶೀರ್ವಾದ ಪಡೆದುಕೊಂಡು, ದಾಂಡಿಯಾದಲ್ಲಿ ಭಾಗವಹಿಸಬಹುದು ಎಂದು ರಂಗದಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ನಗರ ದಲ್ಲಿ ಸ್ವಚ್ಛತೆ ಕಾಣಲು ಪೌರ ಕಾರ್ಮಿಕರ ಪರಿಶ್ರಮ ಇದೆ: ಅಮ್ಜದ್ ಪಟೇಲ್

**ಮಲ್ಲಮ್ಮ ನುಡಿ ವಾರ್ತೆ**




ಕೊಪ್ಪಳ : ಜಿಲ್ಲಾ ಕೇಂದ್ರವಾದ ಕೊಪ್ಪಳ ನಗರವನ್ನು ಸುಂದರ ನಗರ ವನ್ನಾಗಿಸಲು ಇಲ್ಲಿನ ಪೌರ ಕಾರ್ಮಿಕರ ಪರಿಶ್ರಮ ಹೆಚ್ಚಾಗಿದೆ, ನಗರದಲ್ಲಿ ಸ್ವಚ್ಛತೆ ಕಂಡುಬರುತ್ತವೆ ಎಂದರೆ ಅದಕ್ಕೆ ಪೌರಕಾರ್ಮಿಕರ ಪರಿಶ್ರಮ ಅವರ ನಿಸ್ವಾರ್ಥ ಸೇವೆ ಕಾರಣವಾಗಿದೆ ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿದರು, ಅವರು ನಗರದಲ್ಲಿ ನಗರಸಭೆ ವತಿಯಿಂದ ಏರ್ಪಡಿಸಿದ ಪೌರ ಕಾರ್ಮಿಕರ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಮುಂದುವರೆದು ಮಾತನಾಡಿ ನಗರದಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರು, ಬೀದಿ ದೀಪ ಜೊತೆಗೆ ಸ್ವಚ್ಛತೆ ಬಯಸುತ್ತಾರೆ, ಇದನ್ನೆಲ್ಲ ಅವರಿಗೆ ನೀಡ ಬೇಕೆಂದರೆ ಪೌರ ಕಾರ್ಮಿಕರ ಪರಿಶ್ರಮ ಬಹಳವಿದೆ, ಬೆಳಗಿನ ಜಾವ ದಿಂದಲೇ ತನ್ನ ಸೇವೆ ಪ್ರಾರಂಭಿಸುವ ಕಾರ್ಮಿಕರಿಗೆ ನಗರಸಭೆ ವತಿಯಿಂದ ಸಿಗಬಹುದಾದ ಸೌಕರ್ಯ ಮತ್ತು ಅವರ ಬೇಡಿಕೆ ಗಳನ್ನು ಈಡೇರಿಸುವುದು ನಮ್ಮ ಜವಾಬ್ದಾರಿಯಾಗಿದೆ ಈಗಾಗಲೇ ಶಾಸಕರ ಮುತುವರ್ಜಿಯಿಂದ 55 ಜನ ಪೌರ ಕಾರ್ಮಿಕರಿಗೆ ನಿವೇಶನ ಹಂಚಲಾಗಿದೆ ಇನ್ನು 10 ರಿಂದ 15 ಜನರ ಬೇಡಿಕೆ ಇದೆ ಅದು ಕೂಡ ಈಡೇರಿಸಲು ಶಾಸಕರಲ್ಲಿ ಮನವರಿಕೆ ಮಾಡಿ ಕೊಳ್ಳಲಾಗಿದೆ ಪೌರ ಕಾರ್ಮಿಕರ ಕಾಲೋನಿ ನಿರ್ಮಿಸಲಾಗುವುದು ಎಂದರು, ಕಳೆದ ವರ್ಷದ ಗವಿಮಠ ಜಾತ್ರೆ ಸಂದರ್ಭದಲ್ಲಿ ನಮ್ಮ ಪೌರಕಾರ್ಮಿಕರು ಉತ್ತಮ ರೀತಿಯಲ್ಲಿ ಶ್ರಮಿಸಿ ಸ್ವಚ್ಛ ನಗರವನ್ನಾಗಿ ಮಾಡುವಲ್ಲಿ ಪರಿಶ್ರಮ ಪಟ್ಟಿದ್ದು ಸ್ವತಃ ಗವಿಮಠದ ಶ್ರೀಗಳು ದೂರವಾಣಿ ಮೂಲಕ ಮಾತನಾಡಿ ಮೆಚ್ಚುಗೆ ವ್ಯಕ್ತಪಡಿಸಿ ಆಶೀರ್ವಾದ ಮಾಡಿದ್ದರು ಎಂದು ಹೇಳಿ ಮುಂಬರುವ ಈ ಸಾಲಿನ ಶ್ರೀ ಗವಿಮಠದ ಜಾತ್ರೆ ಸಂದರ್ಭದಲ್ಲಿ ನಾವೆಲ್ಲರೂ ಸೇರಿ– ಕೊಂಡು ನಗರದಲ್ಲಿ ಸ್ವಚ್ಛತೆ ಕಾಪಾಡುವುದರ ಜೊತೆಗೆ ನಗರದ ಸುಂದರಿ ಕರಣಕ್ಕಾಗಿ ಶ್ರಮಿಸೋಣ ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹೇಳಿದರು, ಸಮಾರಂಭದಲ್ಲಿ ಶಾಸಕ ಕೆ ರಾಘವೇಂದ್ರ ಹಿಟ್ನಾಳ, ಸಂಸದ ಕೆ ರಾಜಶೇಖರ ಹಿಟ್ನಾಳ್, ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್ ಅರಸಿದ್ದಿ, ನಗರಸಭೆಯ ಉಪಾಧ್ಯಕ್ಷರಾದ ಅಶ್ವಿನಿ ಗದಗಿನಮಠ, ಪೌರಾಯುಕ್ತರಾದ ವೆಂಕಟೇಶ್ ನಾಗನೂರ್, ಸ್ಥಾಯಿ ಸಮಿತಿ ಅಧ್ಯಕ್ಷ ಬಸಯ್ಯ ಹಿರೇಮಠ್ ಸೇರಿದಂತೆ ನಗರಸಭೆಯ ಸದಸ್ಯರು ಅಧಿಕಾರಿ ವರ್ಗದವರು ಮತ್ತು ಸಿಬ್ಬಂದಿ ವರ್ಗದವರು ಸೇರಿದಂತೆ ಪೌರ ಕಾರ್ಮಿಕರು ಪೌರಕಾರ್ಮಿಕರ ಸಂಘಟನೆ ಪದಾಧಿಕಾರಿಗಳು ಕಾರ್ಯಕ್ರದಲ್ಲಿ ಉಪಸ್ಥಿತರಿದ್ದರು.

# ಸ್ವಾಸ್ಥ್ಯ ಸಂಕಲ್ಪ : ಜಿಲ್ಲಾ ಕಾರಾಗೃಹ ಬಂದಿಗಳಿಗೆ ಕ್ರೀಡೋತ್ಸವ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**




ಕೊಪ್ಪಳ : ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ ಟ್ರಸ್ಟ್(ರಿ) ಕೊಪ್ಪಳ, ಜಿಲ್ಲಾ ಕಾರಾಗೃಹ ಮತ್ತು ಸುಧಾರಣಾ ಸೇವೆಗಳು ಕೊಪ್ಪಳ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಖಿ ಒನ್ ಸ್ಟಾಪ್ ಸೆಂಟರ್, ಜಿಲ್ಲಾ ಮಹಿಳಾ ಸಬಲೀಕರಣ

ಘಟಕ ಕೊಪ್ಪಳ ಸಹಯೋಗದಲ್ಲಿ ಕಾರಾಗೃಹದಲ್ಲಿ ಇರುವಂತಹ ಬಂದಿಗಳಿಗೆ ಸ್ವಸ್ಥ ಸಂಕಲ್ಪ ಕಾರ್ಯಕ್ರಮದಲ್ಲಿ ಆಯೋಜಿಸಲಾಯಿತು. ಕ್ರೀಡೆಯಲ್ಲಿ ವಿಜೇತರಾದವರಿಗೆ 24ನೇ ಸೆಪ್ಟಂಬರ್ 2025 ರಂದು ಪ್ರಶಸ್ತಿ ಪತ್ರ ಪ್ರಮಾಣವನ್ನು ನೀಡುವುದರ ಮೂಲಕ ರಾಜ್ಯ ಸಂಪನ್ಮೂಲ ವ್ಯಕ್ತಿ ಶ್ರೀ ವಿವೇಕ್ ಪಾಯಿಸ್, ಪ್ರಾದೇಶಿಕ ನಿರ್ದೇಶಕರು ಧರ್ಮ ಶ್ರೀ ಧರ್ಮಸ್ಥಳ ವ್ಯಸನ ಮುಕ್ತಿ ಮತ್ತು ಸಂಶೋಧನಾ ಕೇಂದ್ರ, ಉಜಿರೆ, ಧರ್ಮಸ್ಥಳ ರವರಿಂದ ಉಪನ್ಯಾಸ ನೀಡುವುದರ ಮೂಲಕ ಬಂದಿಗಳಿಗೆ ಇನ್ನಷ್ಟು ಉತ್ತೇಜಿಸುವ ಮೂಲಕ ಸ್ವಾಸ್ಥ್ಯ ಸಂಕಲ್ಪವನ್ನು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದೆಂದು ತಿಳಿಸಿದರು. ಸಖಿ ಘಟಕ ಆಡಳಿತಾಧಿಕಾರಿ ಯಮುನಾ ರವರು ತಿಳಿಸಿದರು.

ಡಾ. ರಾಮ್ ಎಲ್. ಅರಸಿದ್ದಿ, ಭಾ.ಪೊ.ಸೇ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು , ಕಾರ್ಯಕ್ರಮವನ್ನು ಉದ್ಘಾಟಿಸಿ

ಮಾನಸಿಕ ಆರೋಗ್ಯ ಹಾಗೂ ದೈಹಿಕ ಆರೋಗ್ಯಕ್ಕೆ ಕ್ರೀಡೆ ಬಹುಮುಖ್ಯವಾಗಿದೆ. ಮನಸ್ಸಿನ ಆಲೋಚನೆಗಳು ಸರಿ ಇಲ್ಲದಿರುವಾಗ ವ್ಯಕ್ತಿ ಅಪರಾಧಿಕ ಚಟುವಟಿಕೆಗಳ ಕಡೆ ಗಮನ ನೀಡುತ್ತಾನೆ. ಬಂದಿಗಳು ತಿಳುವಳಿಕೆಯಿಲ್ಲದ ಮಾಡಿದ ತಪ್ಪುಗಳನ್ನು ಮರೆತು ಮಾನಸಿಕವಾಗಿ ಸದೃಢರಾಗಿರುಲ್ಲಿ ಕ್ರೀಡೆಯು ಒಂದು ಸಾಧನವಾಗಿದೆ. ಹಾಗೂ ಸಮಾಜದ ಸುಸ್ಥಿರ ಏಳಿಗೆಗಾಗಿ ಶ್ರಮಿಸುವಲ್ಲಿ ಹೊಸತನದ ಭವಿಷ್ಯದ ಉನ್ನತ ಗುರಿಕೊಳ್ಳುವಂತೆ ಪ್ರೇರಣಾತ್ಮವಾಗಿರುವಂತೆ ತಿಳಿಸಿದರು. . ಅಂಬರೀಶ್ ಎಸ್ ಪೂಜಾರ್ ಅಧೀಕ್ಷಕರು ಜಿಲ್ಲಾ ಕಾರಾಗೃಹ ಕೊಪ್ಪಳ,

ಅ ಸದರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.

ಸದರಿ ಕಾರ್ಯಕ್ರಮದಲ್ಲಿ ಶ್ರೀಮತಿ ಗಾಯತ್ರಿ ರೂಡ್ಡ ಪೊಲೀಸ್ ಇನ್ಸೆಕ್ಟರ್ ಆಂತರಿಕ ಭದ್ರತಾ ವಿಭಾಗ ಬಳ್ಳಾರಿ, ಜೈಪ್ರಕಾಶ್ ಪೊಲೀಸ್ ಇನ್ಸೆಕ್ಟರ್ ನಗರ ಪೊಲೀಸ್ ಠಾಣೆ ಕೊಪ್ಪಳ ಶ್ರೀ ಚಂದ್ರಶೇಖರ್ ಪ್ರಾದೇಶಿಕ ನಿರ್ದೇಶಕರು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ ಸಿ ಟ್ರಸ್ಟ್ ಕೊಪ್ಪಳ ಶ್ರೀ ಪ್ರಕಾಶ್ ರಾವ್ ಜಿಲ್ಲಾ ನಿರ್ದೇಶಕರು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ಕೊಪ್ಪಳ

ಶ್ರೀಮತಿ ಶ್ರೀದೇವಿ, ಮತ್ತು ಶ್ರೀಮತಿ ಫಾತಿಮಾ ಮಹಿಳಾ ಸಬಲೀಕರಣ ಘಟಕ ಹೊಪ್ಪಳ, ತಂಡ ಹಾಗೂ ಶ್ರೀಮತಿ ಹುಲಿಗೆಮ್ಮ, ಕು ನಿರ್ಮಲಾ, ತಂಡ ಸಖಿ ಒನ್ ಸ್ಟಾಪ್ ಸೆಂಟರ್ ಕೊಪ್ಪಳ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಕಾರಾಗೃಹ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.. ಕಾರ್ಯಕ್ರಮದ ನಿರೂಪಣೆ ಶ್ರೀಮತಿ ಯಮುನಾ ಸಖಿ ಘಟಕ ಆಡಳಿತಾಧಿಕಾರಿಗಳು, ಹಾಗೂ ಕ್ರೀಡೆಯ ಉಸ್ತುವಾರಿಯನ್ನು ಶ್ರೀ ಬಸವರಾಜ್ ದೈಹಿಕ ಶಿಕ್ಷಕರು ಸರಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಕೊಪ್ಪಳ . ಬಂದಿಗಳಿಗೆ ಕ್ರೀಡೆಯನ್ನು ಆಡಿಸುವುದರ ಕ್ರೀಡಾ ಕಾರ್ಯಕ್ರಮವನ್ನು ಮೂಲಕ ಯಶಸ್ವಿಗೊಳಿಸಿರುತ್ತಾರೆ.

### ಸಮೀಕ್ಷೆಯಲ್ಲಿ ಕುಳುವ ಸಮಾಜದವರು ಕೊರಮ, ಕೊರವ,

# ಕೊರವರ್ ಎಂದು ಬರೆಸಿ ಲೋಕೇಶ್ ಭಜಂತ್ರಿ

**ಮಲ್ಲಮ್ಮ ನುಡಿ ವಾರ್ತೆ**



ಕೊಪ್ಪಳ : ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವತಿಯಿಂದ ಸಾಮಾಜಿಕ ಶೈಕ್ಷಣಿಕ ಮತ್ತು ಜಾತಿ ಸಮೀಕ್ಷೆಯಲ್ಲಿ ಕೊರಮ, ಕೊರವ, ಕೊರವರ್ ಎಂದು ತಪ್ಪದೆ ಬರಸಬೇಕೆಂದು (ಕೊರಮ) ಕುಳುವ ಸಮಾಜ ಕೊಪ್ಪಳ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಲೋಕೇಶ್ ಭಜಂತ್ರಿ ಮನವಿ ಮಾಡಿದ್ದಾರೆ.

ಈ ಸಮೀಕ್ಷೆಯ ಮುಖಾಂತರ ಕಲೆಹಾಕಲಾದ ದತ್ತಾಶಗಳೇ ಮುಖ್ಯ ದಾಖಲೆಗಳಾಗಿ ಅಂತಿಮವಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಜಾರಿಗೆ ತರಲು ತೀರ್ಮಾನ ಮಾಡಲಾಗುತ್ತದೆ.

ಹಾಗಾಗಿ ನಮ್ಮ ಕೊರಮ, ಕೊರವ, ಕೊರವರ್ ಜನಾಂಗ ಪ್ರತಿ ಹಳ್ಳಿ, ಗ್ರಾಮ, ಹೋಬಳಿಗಳಲ್ಲಿ ತಮ್ಮ ತಮ್ಮ ಜಾತಿ ಮತ್ತು ಸಾಮಾಜಿಕ, ಶೈಕ್ಷಣಿಕ, ಆರ್ಥಿಕತೆ ಹಿಂದುಳಿದಿರುವ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡದೇ ಹೋದರೆ ಖಂಡಿತ ನಮ್ಮ ಸಮುದಾಯಗಳಿಗೆ ಒಳ ಮೀಸಲಾತಿ ಪಡೆಯುವದರಲ್ಲಿ ದೊಡ್ಡ ಗಂಡಾಂತರವೇ ಆಗಿ ನ್ಯಾಯ ಸಿಗದೇ ಹೋಗಬಹುದು.

ಆದ್ದರಿಂದ ನಮ್ಮ ಸಮಾಜದ ಅಕ್ಷರಸ್ಥರು ಹಳ್ಳಿ, ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ವಾಸಿಸುತ್ತಿರುವ ಜನಾಂಗದ ಅನಕ್ಷರಸ್ತರು, ಬಡವರು, ಕೂಲಿಕಾರರು ಮತ್ತು ಎಲ್ಲರಿಗೂ

ಜಾಗೃತಿ ಮೂಡಿಸಿ ಧರ್ಮ ಕಾಲಂ ನಂ: 8 ರಲ್ಲಿ ಹಿಂದು ಜಾತಿ ಕಾಲಂ ನಂ:9ರಲ್ಲಿ ಕ್ರಮ ಸಂಖ್ಯೆ :–054.1 ನಮ್ಮ ಜಾತಿ ಕೊರಮ, ಕೊರವರ್, ಕೊರವ, ಹಾಗೂ ತಮ್ಮ ಮನೆಯಲ್ಲಿ ಎಷ್ಟು ಜನ ಸಂಖ್ಯೆ ಇದೆ ಎಂದು ತಪ್ಪದೆ ಬರಿಸಬೇಕು ಎಂದು ಮನವಿ ಮಾಡಿದ್ದಾರೆ. ಜಿಲ್ಲಾ ಮತ್ತು ತಾಲೂಕು ಮಟ್ಟದ ಪದಾಧಿಕಾರಿಗಳು ಸ್ಥಳೀಯ ಎಲ್ಲ ಮುಖಂಡರುಗಳನ್ನು ಗಣನೆಗೆ ತಗೆದು ಕೊಳ್ಳಲಾಗುವದು. ಅವರುಗಳ ಸಮಾಜದ ಮಹತ್ವದ ಈ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆ ಕುಳುವ ಮಹಾಸಂಘದ. ತಂಡ ಮತ್ತು ಪದಾಧಿಕಾರಿಗಳ ಜೊತೆ ಸಹಕರಿಸಿ ಸಾಮಾಜಿಕ–ಶೈಕ್ಷಣಿಕ ಮತ್ತು ಜಾತಿ ಸಮೀಕ್ಷೆಯಲ್ಲಿ ಪಾಲ್ಗೊಂಡ ನಮ್ಮ ಕುಳುವ ಸಮುದಾಯಕ್ಕೆ ಹೆಚ್ಚಿನ ಅವಕಾಶಗಳನ್ನು ಪಡೆಯುವಲ್ಲಿ ಸಹಕಾರ ನೀಡಬೇಕೆಂದು ಎಲ್ಲ ಕುಲಬಾಂಧವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

### ಅರ್ಥಪೂರ್ಣವಾಗಿ ಮಹಾತ್ಮ ಗಾಂಧೀಜಿ

# ಜಯಂತಿ ಆಚರಣೆಗೆ ನಿರ್ಧಾರ



**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ:ಸೆ:26–:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಅಕ್ಟೋಬರ್ 2 ರಂದು ಮಹಾತ್ಮ ಗಾಂಧೀಜಿ 156ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಾತ್ಮ ಗಾಂಧೀಜಿ ಅವರ ಜಯಂತಿ ಆಚರಿಸುವ ಕುರಿತು ಸಹಾಯಕ ಆಯುಕ್ತರಾದ ಶ್ರೀಧರ್ ಗೋಟುರ್

ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಅಂದು ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಈ ಜಯಂತಿ ಆಯೋಜಿಸಲು, ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ, ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಗೌರವ ಅರ್ಪಿಸಲು, ವೇದಿಕೆ, ಆಸನದ ವ್ಯವಸ್ಥೆ, ಶಿಷ್ಟಾಚಾರದಂತೆ ಗಣ್ಯರನ್ನು, ನುರಿತ ಉಪನ್ಯಾಸಕರಿಂದ ಉಪನ್ಯಾಸ ನೀಡಲು ಅವರನ್ನು ಆಹ್ವಾನಿಸಲು ನಿರ್ಧರಿಸಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಹಾಯಕ ಆಯುಕ್ತರು ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಸೂಕ್ತ ಪೋಲಿಸ್ ಬಂದೋಬಸ್ತ್, ವೇದಿಕೆ ಸಿದ್ಧತೆ ನೋಡಿಕೊಳ್ಳಲು , ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಆಮಂತ್ರಣ ಪತ್ರಿಕೆ ವಿತರಿಸುವ ವ್ಯವಸ್ಥೆಗೆ ಸೂಚಿಸಲಾಯಿತು.

ಕಾರ್ಯಕ್ರಮವನ್ನು ತಾಲೂಕ ಮಟ್ಟದಲ್ಲಿ ಶಾಲಾ ಕಾಲೇಜು, ಗ್ರಾಮ ಪಂಚಾಯತ್, ವಿವಿಧ ಕಚೇರಿ ಗಳಲ್ಲಿ ಕಾರ್ಯಕ್ರಮ ಆಚರಣೆ, ಮುಖ್ಯ ಕಾರ್ಯಕ್ರಮದ ವೇದಿಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು

ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು. ಬೆಳಿಗ್ಗೆ ಶ್ರಮದಾನ ಮಾಡಲು ಸೂಚಿಸಿ, ಆಯಾ ಗ್ರಾಮ ಪಂಚಾಯತ್ ವ್ಯಾಪ್ತಿ, ನಗರ ಸ್ಥಳೀಯ ಸಂಸ್ಥೆಗಳ, ಆಸ್ಪತ್ರೆಗಳು ಮತ್ತು ಆಸ್ಪತ್ರೆ ಆವರಣ ವ್ಯಾಪ್ತಿಯಲ್ಲಿ ಶ್ರಮದಾನ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಸುಲೈಮಾನ್ ನದಾಫ ಸ್ವಾಗತಿಸಿದರು. ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ರಾಯಚೂರು ಜಿಲ್ಲೆಯಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ಕಾರ್ಯ

## ಯುದ್ಧೋಪಾದಿಯಲ್ಲಿ ನಡೆಯಲಿ: ಜಿಲ್ಲಾಧಿಕಾರಿ ನಿತೀಶ್ ಕೆ ಕಟ್ಟುನಿಟ್ಟಿನ ಸೂಚನೆ

**ಮಲ್ಲಮ್ಮ ನುಡಿ ವಾರ್ತೆ**



ರಾಯಚೂರು ಸೆಪ್ಟೆಂಬರ್ 26– ರಾಯಚೂರ ಜಿಲ್ಲೆಯಲ್ಲಿ ಈಗಾಗಲೇ ಆರಂಭಗೊಂಡಿರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ ಕಾರ್ಯವು ಅಕ್ಟೋಬರ್ 7ರವರೆಗೆ ಯುದ್ಧೋಪಾದಿಯಲ್ಲಿ ನಡೆಯಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೆ.26ರಂದು ಸಂಜೆ, ಈ ಸಮೀಕ್ಷಾ ಕಾರ್ಯದಲ್ಲಿ ತೊಡಗಿದ ಮತ್ತು ಮೇಲ್ವಿಚಾರಣೆಯಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಸಮೀಕ್ಷೆಯು ರಾಜ್ಯಾದ್ಯಂತ ಏಕಕಾಲಕ್ಕೆ ಆರಂಭಗೊಂಡು ಎಲ್ಲ ಕಡೆಗಳಲ್ಲಿ ನಡೆಯುತ್ತಿದ್ದು, ರಾಯಚೂರು ಜಿಲ್ಲೆಯಲ್ಲಿ ಸಹ ಅತ್ಯುತ್ತಮ ರೀತಿಯಲ್ಲಿ ಈ ಸಮೀಕ್ಷೆ ನಡೆಯಲು ಈ ಸಮೀಕ್ಷಾ ಕಾರ್ಯದಲ್ಲಿ ಭಾಗಿಯಾದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಮಧ್ಯೆದಲ್ಲಿನ ಸಮನ್ವಯತೆ ಅತ್ಯಂತ ಮುಖ್ಯವಾಗಿದೆ. ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಒಂದು ತಂಡವಾಗಿ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ರಾಯಚೂರ ತಾಲೂಕು ಸೇರಿದಂತೆ ಸಿಂಧನೂರ, ಮಾನ್ವಿ, ಮಸ್ಕಿ, ಲಿಂಗಸೂಗುರು, ಅರ–ಕೇರಾ, ಸಿರವಾರ, ದೇವದುರ್ಗ ಎಲ್ಲಾ ತಾಲೂಕಿನಲ್ಲಿ ಏಕಕಾಲಕ್ಕೆ ಸಮೀಕ್ಷಾ ಕಾರ್ಯ ಅಚ್ಚುಕಟ್ಟಾಗಿ ನಡೆಯಬೇಕು. ಕುಟುಂಬದ ಸಂಖ್ಯೆಗಳನ್ನು ಗುರುತಿಸಿ ಪ್ರತಿ ಗಣತಿದಾರರಿಗೆ ಇಂತಿಷ್ಟು ಮನೆಗಳ ಸಮೀಕ್ಷಾ ಕಾರ್ಯಕ್ಕಾಗಿ ಎಲ್ಲಾ ತಾಲೂಕುಗಳು ಸೇರಿ ಒಟ್ಟು 3178 ಗಣತಿದಾರರನ್ನು ನಿಯೋಜಿಸಲಾಗಿದೆ. ಇಂತಹ 10 ಬ್ಲಾಕ್‌ಗಳಿಗೆ ಒಬ್ಬ ಗಣಿತಿ ಮೇಲ್ವಿಚಾರಕರೆಂದು 340 ಜನರನ್ನು ನೇಮಿಸಲಾಗಿದೆ. ತರಬೇತಿಗಾಗಿ 08 ರಾಜ್ಯಮಟ್ಟದ 68 ಜಿಲ್ಲಾಮಟ್ಟದ ಮಾಸ್ಟರ್ ಟ್ರೈನರ್‌ಗಳನ್ನು, ಪ್ರತಿ ತಾಲ್ಲೂಕಿಗೆ ಜಿಲ್ಲಾಮಟ್ಟದ ನೋಡಲ್ ಅಧಿಕಾರಿ, ತಾಂತ್ರಿಕ ಸಿಬ್ಬಂದಿ ನಿಯೋಜಿಸಲಾಗಿದೆ. ಗಣಿತಿ–ದಾರರಾಗಿ ನೇಮಕಗೊಂಡ ಶಿಕ್ಷಕರು, ಮೇಲ್ವಿಚಾರಕರಾಗಿ ನೇಮಕಗೊಂಡ ಶಿಕ್ಷಣ ಇಲಾಖೆಯ ಸಿ.ಆರ್.ಪಿ.ಗಳು ಮತ್ತು ಮಾಸ್ಟರ್ ಟ್ರೈನರಗಳಾಗಿ ನೇಮಕಗೊಂಡ ಡಯಟ್ ಹಾಗೂ ಪದವಿ ಪೂರ್ವ ಕಾಲೇಜಿ ಉಪನ್ಯಾಸಕರು ಎಲ್ಲರೂ ಈ ಸಮೀಕ್ಷಾ ಕಾರ್ಯವನ್ನು ಗಂಭೀರವಾಗಿ ಪರಿಗಣಿಸಿ, ಪ್ರತಿಯೊಬ್ಬರು ಕೇಂದ್ರ ಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈಗಾಗಲೇ ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ. ಗಣಿತಿದಾರರಿಗೆ ಕೈಪಿಡಿ, ಬ್ಯಾಗ್, ಟೋಪಿ ಮತ್ತು ಸ್ವಯಂ ದೃಢೀಕರಣ ಪತ್ರಗಳ ಕಿಟ್ ನೀಡಲಾಗಿದೆ. ಆಯಾ ತಾಲ್ಲೂಕಿನ ತಹಶೀಲ್ದಾರರ ಕಚೇರಿಗಳಲ್ಲಿ ವಾರ್ ರೂಮ್‌ಗಳನ್ನು ಸ್ಥಾಪಿಸಿ ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಸಮೀಕ್ಷಾ ಕಾರ್ಯವು ಸುಗಮವಾಗಿ ಮತ್ತು ವೇಗವಾಗಿ ನಡೆಯಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ಸಮೀಕ್ಷಾ ಕಾರ್ಯ–ಕ್ಕೆ ನಿಯೋಜನೆಗೊಂಡ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸೆ.7ರವರೆಗೆ ಸಮೀಕ್ಷಾ ಕಾರ್ಯ–ಕ್ಕೆ ಮೊದಲ ಆದ್ಯತೆ ನೀಡಬೇಕು. ನಿರಂತರವಾಗಿ ಕ್ಷೇತ್ರಭೇಟಿ ನಡೆಸಿ ಸಮೀಕ್ಷಾ ಕಾರ್ಯ ಚಾಲ್ತಿಯಲ್ಲಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಯಾವ ಕಡೆಗಳಲ್ಲಿ ಸಮೀಕ್ಷಾ ಕಾರ್ಯ ಮಂದಗತಿಯಲ್ಲಿದೆ ಎಂಬುದನ್ನು ಗುರುತಿಸಿ ಅಂತಹ ಕಡೆಗೆ ಸಮೀಕ್ಷಾ ಕಾರ್ಯವನ್ನು ಚುರುಕುಗೊಳಿಸಬೇಕು. ಅಕ್ಟೋಬರ್ 7ರವರೆಗೆ ಸಮಯವಕಾಶವಿದೆ ಎಂದು ಕಾಯದೇ ಗಣತಿದಾರರು ತಮಗೆ ನಿಗದಿಪಡಿಸಿದ ಗುರಿಯನ್ನು ಬೇಗನೆ ಪೂರ್ಣಗೊಳಿಸಿ ರಜೆ ಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

ಮೇಲ್ವಿಚಾರಕರು ಪ್ರತಿ ಗಂಟೆಗೊಮ್ಮೆ ಕರೆ ಮಾಡಿ ಸಮೀಕ್ಷಾ ಕಾರ್ಯ ಬೆಳಗ್ಗೆಯಿಂದಲೇ ಆರಂಭವಾಗಿದೆಯಾ? ಎಲ್ಲ ಗಣತಿದಾರರು ಕ್ಷೇತ್ರ ಕಾರ್ಯದಲ್ಲಿದ್ದಾರಾ? ಎಂಬುದನ್ನು ಪರೀಕ್ಷಿಸಬೇಕು. ಎಲ್ಲ ಮಾಸ್ಟರ್ ಟ್ರೇನರಗಳು ಕಡ್ಡಾಯವಾಗಿ ಅಕ್ಟೋಬರ್ 7ರವರೆಗೆ ಆಯಾ ತಾಲೂಕು ಕೇಂದ್ರ ಸ್ಥಾನದಲ್ಲಿದ್ದು ಗಣತಿದಾರರಿಗೆ ಮಾರ್ಗದರ್ಶನ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಸಹಾಯಕ ಆಯುಕ್ತರು, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಸೇರಿದಂತೆ ಇನ್ನಿತರನ್ನು ಒಳಗೊಂಡ ವಿಶೇಷ ನೋಡಲ್ ಅಧಿಕಾರಿಗಳು, ಈ ಮುಂಚಿತವಾಗಿ ನೇಮಕೊಂಡಿ ಎಲ್ಲ ನೋಡಲ್ ಅಧಿಕಾರಿಗಳು ನಿರಂತರವಾಗಿ ಕ್ಷೇತ್ರ ಭೇಟಿ ನಡೆಸಿ ಮೇಲ್ವಿಚಾರಣೆ ನಡೆಸಬೇಕು. ಆಯಾ ತಾಲೂಕುಗಳಲ್ಲಿನ ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಎಲ್ಲ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಹಾಗೂ ಇನ್ನಿತರ ಅಧಿಕಾರಿಗಳು ಎಲ್ಲರೂ ಪ್ರತಿ ದಿನ ಸಭೆ ಸೇರಿ ಸಮೀಕ್ಷಾ ಪ್ರಗತಿ ಕಾರ್ಯದ ಬಗ್ಗೆ ಚರ್ಚಿಸಿ ಸಮ್ವನಯದಿಂದ ಕೆಲಸ ನಿರ್ವಹಿಸಬೇಕು. ಅವರು ಇವರು ಎನ್ನದೇ ಈ ಗಣತಿ ಕಾರ್ಯಕ್ಕೆ ಪ್ರತಿಯೊಬ್ಬರು ಸಹಕಾರ ನೀಡಬೇಕು. ಕರೆ ಮಾಡಿದಾಗ ಸ್ವೀಕರಿಸದೇ, ನಿಗದಿಪಡಿಸಿದ ಅವಧಿಯೊಳಗೆ ಕಾರ್ಯ ಮಾಡದೇ ಯಾರಾದರು ನಿರ್ಲಕ್ಷ ವಹಿಸಿದಲ್ಲಿ ಅಂತವರನ್ನು ಅಮಾನತು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ್ ಕಾಂದೂ ಅವರು ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ ಆರಂಭಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯವು ಬರುವ ಅಕ್ಟೋಬರ್ 07ರವರೆಗೆ ನಡೆಯಲಿದೆ. ಗಣಿತಿ–ದಾರರು ಮನೆಮನೆಗೆ ಭೇಟಿ ನೀಡಿ ಕುಟುಂಬದ ಅಂಕಿ–ಅಂಶಗಳನ್ನು ಸಂಗ್ರಹಿಸುವ ಈ ಕಾರ್ಯವು ಜಿಲ್ಲೆಯಲ್ಲಿ ಶಿಸ್ತುಬದ್ಧವಾಗಿ ನಡೆಯಬೇಕು. ಇದ–ಕ್ಕೆ ಸಂಬಂಧಿಸಿದಂತೆ ಏನಾದರು ಗೊಂದಲಗಳಿದ್ದಲ್ಲಿ ಅಧಿಕಾರಿಗಳು ತಮ್ಮ ಮೇಲಿನ ಅಧಿಕಾರಿಗಳನ್ನು ಅಥವಾ ಜಿಲ್ಲಾಧಿಕಾರಿಗಳು ಅಥವಾ ತಮಗೆ ನೇರವಾಗಿ ಕರೆ ಮಾಡಿ ಕೇಳಿ ಪರಿಹರಿಸಿಕೊಳ್ಳಬೇಕು. ಎಲ್ಲ ತಾಲೂಕುಗಳಲ್ಲಿ ಕಂಟ್ರೋಲ್ ರೂಮುಗಳು ಸರಿಯಾಗಿ ಕಾರ್ಯನಿರ್ವಹಿಸಬೇಕು. ಪ್ರತಿಯೊಬ್ಬರ ಗಣತಿದಾರರ ಮೇಲೆ ಪ್ರತಿ ದಿನ ಸರಿಯಾಗಿ ಮೇಲ್ವಿಚಾರಣಾ ಕಾರ್ಯವಾಗಬೇಕು. ಆಯಾ ಕಡೆಗಳಲ್ಲಿ ಜಿಂಗಲ್ಸ್ ಮೂಲಕ ಹೆಚ್ಚಿನ ಪ್ರಚಾರ ಕಾರ್ಯಕ್ಕೆ ಏರ್ಪಾಡು ಮಾಡಬೇಕು ಎಂದು ತಿಳಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ಬಸವಣೆಪ್ಪ ಕಲಶೆಟ್ಟಿ, ಎಲ್ಲ ತಾಲೂಕಿನ ತಹಸೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಾಸ್ಟರ್ ಟ್ರೇನರಗಳು ಮತ್ತು ಇನ್ನಿತರ ಇಲಾಖೆಯ ಅಧಿಕಾರಿಗಳು ಇದ್ದರು.

# ಗ್ರಾಮೀಣ ಮಹಿಳೆಯರು ತರಬೇತಿಯ ಸದುಪಯೋಗ ಪಡೆದುಕೊಳ್ಳಿ

**ಮಲ್ಲಮ್ಮ ನುಡಿ ವಾರ್ತೆ**




ಕೊಪ್ಪಳ: ಅಳವಂಡಿ ಸಮೀಪದ ಮುರ್ಲಾಪುರದಲ್ಲಿ ರಿವಾರ್ಡ್ ಯೋಜನೆ ಅಡಿಯಲ್ಲಿ ಮಹಿಳಾ ಸಂಘದ ಸದಸ್ಯರುಗಳಿಗೆ ಎರಡು ದಿನದ (ಇಂಕ) ಉದ್ಯಮಶೀಲತಾ ಅರಿವು ಕಾರ್ಯಕ್ರಮ ತರಬೇತಿಯನ್ನು ಅಳವಂಡಿ ಹೋಬಳಿಯ ಮಹಿಳೆಯರಿಗಾಗಿ ತರಬೇತಿಯನ್ನು ಕೃಷಿ ಇಲಾಖೆ, ಜಲನಯನ ಇಲಾಖೆ ಹಾಗೂ SBI, RSETI ಸಂಸ್ಥೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಯಿತು.

ತರಬೇತಿ ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಗೀತಾ ಮಾತನಾಡಿ ಮಹಿಳೆಯರು ಸ್ವಾವಲಂಬಿಯಾಗಿ ಉದ್ಯಮ ಪ್ರಾರಂಭಿಸಿ ಆರ್ಥಿಕ ಸಬಲರಾಗಿ, ಗ್ರಾಮೀಣ ಮಹಿಳೆಯರಿಗಾಗಿ ಇರುವ ತರಬೇತಿಯ ಸದುಪಯೋಗ ಪಡೆದುಕೊಳ್ಳಿ ಎಂದರು ಇದೇ ವೇಳೆ ಪ್ರಿಯದರ್ಶಿನಿ ,ಗವಿಸಿದ್ದಪ್ಪ ,ಬಸನಗೌಡ ಅವರು ಸ್ವಾವಲಂಬಿ ಉದ್ಯೋಗದ ಮಾಹಿತಿ ಒದಗಿಸಿದರು ತರಬೇತಿಯಲ್ಲಿ ಮುರ್ಲಾಪೂರ ಗ್ರಾಮದ ಮಹಿಳಾ ಸಂಘದ


# ಸೆ.28 ರಂದು ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26–ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 220/11ಕೆ.ವಿ ಯ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್ 2 ರ ಎಫ್–34 ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸೆ.28 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ನಗರದ ಫಸ್ಟ್ ಗೇಟ್, ಕೊರಚ ಸ್ಟ್ರೀಟ್, ಉರ್ದು ಟ್ರೈನಿಂಗ್ ಸ್ಕೂಲ್, ಕಡಪಗೆರೆ, ಟೈಲರ್ ಸ್ಟ್ರೀಟ್, ವಡ್ಡೆ ನಾಗಪ್ಪ ಕಾಲೋನಿ, ತಿಲಕ್ ನಗರ್, ವಿನಾಯಕ ನಗರ, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜ್, ರೇಡಿಯೋ ಪಾರ್ಕ್, ಕೌಲ್ ಬಜಾರ್ ಮೇನ್ ರೋಡ್ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತ ನಾಯಕನಿಗೆ ಒಲಿದು ಬಂದ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ

**ಮಲ್ಲಮ್ಮ ನುಡಿ ವಾರ್ತೆ**



ಭೀಮರಾಯನಗುಡಿ: ಐ ಬಿ ಯಲ್ಲಿ ನೂತನವಾಗಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ಮಂಡಳಿ ಅಧ್ಯಕ್ಷರಾಗಿ ಆಯ್ಕೆಯಾದ ಸನ್ಮಾನ್ಯ ಶ್ರೀ ಶರಣಪ್ಪ ಸಲಾದಪೂರ ಅವರಿಗೆ ಗಂಗನಾಳ ಗ್ರಾಮದ ವತಿಯಿಂದ ಸನ್ಮಾನಿಸಲಾಯಿತು

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಭೀಮಾಜೆಟ್ಟಿ ಜಾಗಿರದಾರ ಸಿದ್ದಣ್ಣ ಕಿಲಾರಿ ಹೊನ್ನಪ್ಪ ಗಂಗನಾಳ ಸಿದ್ದರಾಮಪ್ಪ ಕವಲಿ ಮಾಳಪ್ಪ ಪೂಜಾರಿ ಹೊನ್ನಯ್ಯ ರೆಡ್ಡಿ ಮಂಜು ಹರಿಕೇರಿ ತಿಮ್ಮಯ್ಯ ಉದ್ದಾರ ಶಿವಪ್ಪ ಅಗಸಿಮನಿ ನಿಂಗಣ್ಣ ಪೂಜಾರಿ ಮಾರುತಿ ಕಿಲಾರಿ ರಾಯಪ್ಪ ಗಂಗನಾಳ ಹನುಮಂತರಾಯ ಬಿರಾದಾರ್ ರಾಮಣ್ಣ ಅರಿಕೇರಿ ದಿನೇಶ್ ಕಿಲಾರಿ ಶಂಕ್ರಪ್ಪ ಕವಲಿ ಉಪಸ್ಥಿತರಿದ್ದರು.

ಪಾರಂಪರಿಕಾ ನಡಿಗೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅಭಿಮತ

# ಬಳ್ಳಾರಿಯು ಗಣಿ ಪ್ರದೇಶ ಮಾತ್ರವಲ್ಲ; ಪ್ರವಾಸೋದ್ಯಮಕ್ಕೂ ಪ್ರಸಿದ್ಧಿ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26-ಬಳ್ಳಾರಿಜಿಲ್ಲೆಎಂದರೆ ಕೇವಲ ಗಣಿ ಪ್ರದೇಶ ಮಾತ್ರವಲ್ಲ; ಬದಲಾಗಿ ಭಾರತೀಯ ಪುರಾತತ್ವ ಪಾರಂಪರಿಕಾ ಪಟ್ಟಿಗೆ ಸೇರಿದ ಮಹತ್ವಪೂರ್ಣ ಪ್ರವಾಸೋದ್ಯಮ ಸ್ಥಳಗಳೂ ಸಹ ಒಳಗೊಂಡಿದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಅಭಿಮತ ವ್ಯಕ್ತಪಡಿಸಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಹಾಗೂ ಹೋಟೆಲ್ ಮಾಲೀಕರ ಸಂಘ, ರಾಬರ್ಟ್ ಬ್ರೂಸ್‌ಫೂಟ್ ಸಂಗನಕಲ್ಲು ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಸಂಡೂರು ಡ್ರೈರೀಸ್ ಇವರ ಸಹಯೋಗದಲ್ಲಿ ವಿಶ್ವಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ನಗರದ ಐತಿಹಾಸಿಕ ಕೋಟೆ ಪ್ರವೇಶ ದ್ವಾರ ಅವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಬಳ್ಳಾರಿ ಕೋಟೆಯ ಪಾರಂಪರಿಕಾ ನಡಿಗೆಗೆ ಫೋಟೋ ಪಾಯಿಂಟ್ ಉದ್ಘಾಟಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಪ್ರವಾಸೋದ್ಯಮ ಸ್ಥಳಗಳಾದ ಬಳ್ಳಾರಿಯ ಏಕಾಶಿಲ ಬೆಟ್ಟ(ಕೋಟೆ), ಸಂಗನಕಲ್ಲು ಗುಡ್ಡ, ರಾಬರ್ಟ್ ಬ್ರೂಸ್‌ಫೂಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯ, ಅವಂಬಾವಿ, ಮಿಂಚೇರಿ ಬೆಟ್ಟ, ದರೋಜಿ ಕರಡಿಧಾಮ, ಸಂಡೂರಿನ ಕುಮಾರಸ್ವಾಮಿ ದೇವಾಲಯ ಮತ್ತು ನಾರಿಹಳ್ಳ ಜಲಾಶಯ, ಕುರುಗೋಡು ಶ್ರೀ ದೊಡ್ಡಬಸವೇಶ್ವರ ದೇವಸ್ಥಾನ, ಭತ್ತದ ನಾಡು ಎಂದೇ ಖ್ಯಾತಿ ಪಡೆದ ಸಿರುಗುಪ್ಪ ಸೇರಿದಂತೆ ಹಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದಾಗಿದೆ ಎಂದು ತಿಳಿಸಿದರು. ಜಿಲ್ಲೆಯ ಸಂಡೂರನ್ನು ನೋಡುತ್ತಿದ್ದರೆ ಎಂತಹವರು ಸಹ ಆಕರ್ಷಣೆಗೆ ಒಳಗಾಗುತ್ತಾರೆ. ಪ್ರಮುಖರು ಹೇಳಿದಂತೆ, ಸೆಪ್ಟಂಬರ್ ನಲ್ಲಿ ಸಂಡೂರು ನೋಡು (ಸಿ ಸಂಡೂರ್ ಇನ್ ಸೆಪ್ಟೆಂಬರ್) ಎನ್ನುವ ಮಾತಿನಂತೆ ಸೆಪ್ಟಂಬರ್ ನಲ್ಲಿ ತಪ್ಪದೇ ಸಂಡೂರು ಭಾಗಕ್ಕೆ ಭೇಟಿ ನೀಡಿ ಪ್ರಕೃತಿಯ ಸೊಬಗು ಸವಿಯಬೇಕು ಎಂದರು. ಬಳ್ಳಾರಿ ನಗರದ ರಾಬರ್ಟ್ ಬ್ರೂಸ್



ಫೂಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯವು ದಕ್ಷಿಣ ಭಾರತದಲ್ಲಿಯೇ ವಿಶೇಷ ಪ್ರಾಚೀನ ಕಾಲದಲ್ಲಿ ಮಾನವನ ಅವಶೇಷಗಳನ್ನು ಕಲೆ ಹಾಕಿದ ಸಂಗ್ರಹಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿ ಅಂತರಾಷ್ಟ್ರೀಯ ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ಉಪಯುಕ್ತವಾಗಿದೆ ಎಂದು ಹೇಳಿದರು. ಅದೇರೀತಿಯಾಗಿ ಜಿಲ್ಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ವಾಸ್ತುಶಿಲ್ಪ ಹೊಂದಿದ ದೇವಸ್ಥಾನಗಳನ್ನು ಕಾಣಬಹುದಾಗಿದ್ದು, ಧಾರ್ಮಿಕ ದೇವಾಲಯಗಳು ಮತ್ತು ಪಾರಂಪರಿಕ ತಾಣಗಳನ್ನು ಕಾಪಾಡುವ ಮೂಲಕ ಹೆಚ್ಚಿನ ಪ್ರಚಾರ ನೀಡಿ, ಜಿಲ್ಲೆಯನ್ನು ಪ್ರವಾಸೋದ್ಯಮ ಅಭಿವೃದ್ಧಿ ತಾಣವನ್ನಾಗಿ ಮಾಡಲು ಪ್ರೋತ್ಸಾಹಿಸೋಣ ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ. ಎಸ್ ತಳಕೇರಿ, ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ಸದಸ್ಯ ಅಹೀರಾಜ್.ಎಂ., ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ವಿಕ್ರಂ ಪೋಲ, ಹಿರಿಯ ಪ್ರವಾಸಿ ಪ್ರವರ್ತಕ ಶ್ರೀಹರಿ.ಎಂ, ಸಂಡೂರು ಡ್ರೈರೀಸ್ ತಂಡದ ಸದ್ಯಸರು, ಭಾರತೀಯ ಪುರಾತತ್ವ ಇಲಾಖೆಯ ಸಿಬ್ಬಂದಿ, ಪ್ರವಾಸಿ ಮಿತ್ರರು ಸೇರಿದಂತೆ ಸಾರ್ವಜನಿಕರು ಭಾಗವಹಿಸಿದ್ದರು.

ಬಳ್ಳಾರಿ - ವಿಜಯನಗರ ರೈಲು ಪ್ರಯಾಣಿಕರಿಗೆ

# ದಸರಾ ಹಬ್ಬದ ಪ್ರಯುಕ್ತ ವಿಶೇಷ ರೈಲು

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26-ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದ ಈ.ತುಕಾರಾಮ್ ಅವರ ವಿಶೇಷ ಕಾಳಜಿಯಿಂದ ದಸರಾ ಹಬ್ಬದ ಪ್ರಯುಕ್ತ ಬಳ್ಳಾರಿ-ವಿಜಯನಗರ ರೈಲು ಪ್ರಯಾಣಿಕರಿಗೆ ವಿಶೇಷ ರೈಲು ವ್ಯವಸ್ಥೆ ಕಲ್ಪಿಸಲಾಗಿದೆ.

ವಿಜಯನಗರ ರೈಲ್ವೆ ಬಳಕೆದಾರರ ಸಮಿತಿಯು ಬಳ್ಳಾರಿ-ಹೊಸಪೇಟೆ-ಕೊಪ್ಪಳ ಭಾಗದ ಜನರು ದಸರಾ ಮತ್ತು ದೀಪಾವಳಿ ಹಬ್ಬದ ಸಮಯದಲ್ಲಿ ಬೆಂಗಳೂರು – ಮೈಸೂರು ನಿಂದ ಬಳ್ಳಾರಿ – ಹೊಸಪೇಟೆಗೆ ತೆರಳಲು ವಿಶೇಷ ರೈಲು ಸಂಚಾರ ವ್ಯವಸ್ಥೆ ಮಾಡಬೇಕು ಎಂದು ಮನವಿ ಸಲ್ಲಿಸಿದ್ದರು.

ಮನವಿಗೆ ಸ್ಪಂದಿಸಿದ ಸಂಸದ ಈ.ತುಕಾರಾಮ್ ಅವರು ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳಿಗೆ ಪತ್ರ ಬರೆದು ಕೋರಿದ ಮೇರೆಗೆ ರೈಲ್ವೆ ಇಲಾಖೆಯು ಬಳ್ಳಾರಿ-ವಿಜಯನಗರ ಜಿಲ್ಲೆಯ ಪ್ರಯಾಣಿಕರ ಅನುಕೂಲಕ್ಕಾಗಿ ವಿಶೇಷ ರೈಲು ಸಂಚರಿಸಲು ಅನುವು ಮಾಡಿಕೊಟ್ಟಿದ್ದಾರೆ.

ರಜೆ ಇಲ್ಲ, ಸಮೀಕ್ಷಾದಾರರು ಸಮೀಕ್ಷೆಯಲ್ಲಿ

# ಸಕ್ರೀಯವಾಗಿ ತೊಡಗಬೇಕು



**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26-ಜಿಲ್ಲೆಯಲ್ಲಿ ಈಗಾಗಲೇ ಆರಂಭಗೊಂಡಿರುವ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯದಲ್ಲಿ ಗಣತಿ-ದಾರರು, ಸೂಪರ್ ವೈಸರ್ ಗಳು, ಮಾಸ್ಟರ್ ಟ್ರೈರ್ಸ್ ಹಾಗೂ ಬಿಇಒಗಳು ಕಡ್ಡಾಯವಾಗಿ ಭಾಗವಹಿಸಿ ಸಮೀಕ್ಷಾ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂಗ್ರ ಪ್ರಸಾದ್.ಕೆ ಅವರು ಹೇಳಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡೀಯೋ ಸಭಾಂಗಣದಲ್ಲಿ ಜಿಲ್ಲೆಯ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯದ ಪ್ರಗತಿಯ ಸಭೆ ನಡೆಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇಂದು ವರ್ಚುವಲ್ ಸಭೆ ಜರುಗಿದ್ದು, ನೆರೆ-ಹೊರೆಯ ಜಿಲ್ಲೆಗಳಿಗಿಂತ ನಮ್ಮ ಜಿಲ್ಲೆಯು ಸಮೀಕ್ಷಾ ಕಾರ್ಯದಲ್ಲಿ ಹಿಂದುಳಿದಿದೆ. ಹಾಗಾಗಿ ಸಮೀಕ್ಷಾ ಕಾರ್ಯಕ್ಕೆ ಕಾಲಾವಕಾಶ ಕಡಿಮೆ ಇದ್ದು, ಎಲ್ಲಾ ಸಮೀಕ್ಷಾದಾರರು ಹೆಚ್ಚಿನ ಆಸಕ್ತಿ ವಹಿಸುವ ಮೂಲಕ ಸಮೀಕ್ಷೆಗೆ ನೇಮಕಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯ-ಕ್ಷಮತೆ ತೋರಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಸಮೀಕ್ಷಾ ಕಾರ್ಯಕ್ಕೆ ನೇಮಿಸಿದ ಬಹಳಷ್ಟು ಗಣತಿದಾರರು(ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು) ಕ್ಷೇತ್ರಮಟ್ಟದಲ್ಲಿ ಹೋಗಿ ಮೊಬೈಲ್ ಮೂಲಕ ಲಾಗಿನ್ ಆಗದೇ ಇರುವುದು, ಸಮೀಕ್ಷೆಗೆ ತೆರಳದೇ ಇರುವುದು ಕಂಡುಬಂದಿದ್ದು, ಈ ಕೂಡಲೇ ಅವರನ್ನು ಸಂಪರ್ಕಿಸಿ, ನಿರ್ದೇಶನ ನೀಡಬೇಕು. ಇಲ್ಲವಾದಲ್ಲಿ ಅಂತಹವರ ಮೇಲೆ ಕ್ರಮ ಜರುಗಿಸಬೇಕು ಎಂದು ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ಸೂಚಿಸಿದರು.

*ಗ್ರಾಮ ಸಹಾಯಕರಿಂದ ವಿಶೇಷ ಸಹಾಯ:*

ಸಮೀಕ್ಷಾ ಕಾರ್ಯದಲ್ಲಿ ಮನೆ ಗುರುತಿಗೆ ಸಂಬಂಧಿಸಿದಂತೆ, ಹಳ್ಳಿಯಿಂದ ಹಳ್ಳಿಗೆ ಸಂಚಾರಕ್ಕೆ ಸಮಸ್ಯೆಯಾದಲ್ಲಿ, ಊಟ, ಕುಡಿಯುವ ನೀರು ಸೇರಿದಂತೆ ಯಾವುದೇ ಮೂಲಸೌಕರ್ಯಗಳಿಗೆ ಆಯಾ ಗ್ರಾಮಗಳ ಗ್ರಾಮ ಸಹಾಯಕರು ಸಹಾಯ ಮಾಡಲಿದ್ದಾರೆ ಎಂದರು.

*ತಾಂತ್ರಿಕ ದೋಷ ಕಂಡುಬಂದಲ್ಲಿ ತಿಳಿಸಿ:*

ಸಮೀಕ್ಷಾ ಕಾರ್ಯಕ್ಕೆ ತೆರಳುವ ಗಣತಿದಾರರು ಮೊಬೈಲ್ ಲಾಗಿನ್ ಆಗುವ ಸಂದರ್ಭದಲ್ಲಿ ಯಾವುದೇ ರೀತಿಯ ತಾಂತ್ರಿಕ ದೋಷ ಕಂಡುಬಂದಲ್ಲಿ ಗಮನಕ್ಕೆ ತರಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

*ರಜೆ ಇಲ್ಲ:*

ಹಿಂದುಳಿದ ವರ್ಗಗಳ ಸಮೀಕ್ಷಾ ಕಾರ್ಯ ಮುಗಿಯುವವರೆಗೆ ಸಮೀಕ್ಷಾದಾರರಿಗೆ ಹಬ್ಬ, ಶಾಲಾ ರಜೆ ಸೇರಿದಂತೆ ಯಾವುದೇ ರೀತಿಯ ರಜೆ ಇಲ್ಲ. ಪ್ರತಿಯೊಬ್ಬರೂ ತಪ್ಪದೇ ಹಾಜರಿರಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

*ಗ್ರಾಪಂ ಮಟ್ಟದಲ್ಲಿ ಶಿಬಿರ:*

ಹಳ್ಳಿಗಳಲ್ಲಿ ಲಾಗಿನ್ ಗೆ ನೆಟ್ ವರ್ಕ್ ಸಮಸ್ಯೆ ಕಂಡುಬರುವ ಹಳ್ಳಿಗಳನ್ನು ಗುರುತಿಸಿ, ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದರೆ ಹಿಂದುಳಿದ ವರ್ಗಗಳ ಆಯೋಗದ ನಿರ್ದೇಶನದಂತೆ ಆಯಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಶಿಬಿರ ಆಯೋಜಿಸಲಾಗುತ್ತದೆ. ಇದಕ್ಕೆ ಬೇಕಾದ ಸಿಬ್ಬಂದಿ, ಸಾಮಾಗ್ರಿಗಳನ್ನು ಒದಗಿಸಿಕೊಡಲಾಗುವುದು. ಕುಟುಂಬಸ್ಥರು ಶಿಬಿರದಲ್ಲಿ ಭಾಗವಹಿಸಿ ಮಾಹಿತಿ ನೋಂದಾಯಿಸಿಕೊಳ್ಳಲು ಅನುಕೂಲವಾಗಲಿದೆ. ಶಿಬಿರ ಆಯೋಜನೆ ಮಾಹಿತಿಯನ್ನು ಆಯಾ ಗ್ರಾಮಸ್ಥರಿಗೆ ಹೆಚ್ಚಿನ ಪ್ರಚಾರ ನೀಡಬೇಕು ಎಂದು ಡಿಸಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದರು.

ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮದ ಜಿಂದಾಲ್ ಟೌನ್ ಶಿಪ್, ವಡ್ಡು, ಶಂಕರ ಗುಡ್ಡ ಕಾಲೋನಿಗಳಲ್ಲಿ ಸಮೀಕ್ಷಾದಾರರಿಗೆ ಪ್ರವೇಶ ನೀಡದಿರುವುದರ ಕುರಿತು ಕಂಪನಿಯ ಮುಖ್ಯಸ್ಥರಿಗೆ ಆದೇಶ ರವಾನಿಸಿ ಎಂದು ಸಂಡೂರು ತಹಶೀಲ್ದಾರರಿಗೆ ಸೂಚಿಸಿದರು.

ಪ್ರತಿದಿನ ಬಿಇಒ ಗಳು ಸೂಪರ್ ವೈಸರ್ ಗಳ ಮೇಲ್ವಿಚಾರಣೆ ನಡೆಸಬೇಕು. ಪ್ರತಿಯೊಬ್ಬರ ಸಹಕಾರ-ಸಹಭಾಗಿತ್ವದಿಂದ ಜಿಲ್ಲೆಯನ್ನು ಟಾಪ್-05 ಜಿಲ್ಲೆಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿರಿಸುವ ಮೂಲಕ ಸಮೀಕ್ಷಾ ಕಾರ್ಯವನ್ನು ಯಶಸ್ವಿಗೊಳಿಸಲು ಕೈಜೋಡಿಸಬೇಕು ಎಂದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ ಶಿವಪೂರೆ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ಡಿಎಂಎಫ್ ವಿಶೇಷ ಅಧಿಕಾರಿ ಲೋಕೇಶ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿ ಶಾಷು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ವರ್ಚುವಲ್ ಮೂಲಕ ಎಲ್ಲಾ ತಾಲ್ಲೂಕು ತಹಶೀಲ್ದಾರರು, ಇಒ, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಸಿಡಿಪಿಒ ಹಾಗೂ ಇನ್ನಿತರರು ಹಾಜರಿದ್ದರು.

ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಅಂಗವಾಗಿ

# ರಾಷ್ಟ್ರೀಯ ಛಾಯಾಗ್ರಹಣ ಮತ್ತು ಕಲಾ ಪ್ರದರ್ಶನ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26:ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಮತ್ತು ಮೂರು ದಶಕಗಳ ಸೇವೆಯನ್ನು ಗುರುತಿಸುವ ಅಂಗವಾಗಿ "ಎಲ್ಲರಿಗೂ ನ್ಯಾಯ, ಕಾನೂನು ನೆರವಿನ ಲೆನ್ಸ್ ಮೂಲಕ" ಎಂಬ ಶೀರ್ಷಿಕೆಯಡಿ ರಾಷ್ಟ್ರೀಯ ಛಾಯಾಗ್ರಹಣ ಮತ್ತು ಕಲಾ ಪ್ರದರ್ಶನವನ್ನು ನವೆಂಬರ್ 8 ಮತ್ತು 9 ರಂದು ನವದೆಹಲಿಯಲ್ಲಿ ಆಯೋಜಿಸಲಾಗಿದೆ.

ನ್ಯಾಯದ ಪಥವನ್ನು ಮುನ್ನಡೆಸುವಲ್ಲಿ ಕಾನೂನು ನೆರವಿನ ಪಾತ್ರವನ್ನು ಸೃಜನಶೀಲ ಅಭಿವ್ಯಕ್ತಿಯ ಮೂಲಕ ಎತ್ತಿತೋರಿಸುವುದು ಮತ್ತು ಕಾನೂನು ಸೇವೆಗಳಿಂದ ಪ್ರಯೋಜನ ಪಡೆಯುವವರ ವಾಸ್ತವಗಳ ಬಗ್ಗೆ ಸಮಾಜವನ್ನು ಸಂವೇದನಶೀಲಗೊಳಿಸುವುದು ಇದರ ಉದ್ದೇಶವಾಗಿದೆ.

ದೈನಂದಿನ ಹೋರಾಟಗಳು, ದಿಟ್ಟತನ ಮತ್ತು ಕಾನೂನು ಸಹಾಯದಿಂದ ಸಕ್ರಿಯಗೊಳಿಸಲಾದ ಸಬಲೀಕರಣದ ಕಥೆಗಳನ್ನು ಬಿಂಬಿಸುವ ಛಾಯಾಚಿತ್ರಗಳು, ವರ್ಣಚಿತ್ರಗಳು, ರೇಖಾಚಿತ್ರಗಳು ಮತ್ತು ವೀಡಿಯೋಗಳನ್ನು (ಗರಿಷ್ಠ ಅವಧಿ 1 ನಿಮಿಷ) ಕಾನೂನು ನೆರವು ವೃತ್ತಿಪರರು, ಕಾನೂನು ಸಮುದಾಯದ ಸದಸ್ಯರು, ವಿದ್ಯಾರ್ಥಿಗಳು, ಪ್ಯಾರಾ-ಲೀಗಲ್ ಸ್ವಯಂ ಸೇವಕರು ಮತ್ತು ಸಾರ್ವಜನಿಕರಿಂದ ಆಹ್ವಾನಿಸಲಾಗಿದೆ.



ಜಿಲ್ಲೆಯ ಪತ್ರಕರ್ತರು, ಛಾಯಾಗ್ರಾಹಕರು ಹಾಗೂ ಸಂಪಾದಕರು ಸಹ ಈ ಕಲಾಪ್ರದರ್ಶನದಲ್ಲಿ ಭಾಗವಹಿಸಬಹುದು.

ಪ್ರಕಟಗೊಂಡ ಛಾಯಾಚಿತ್ರಗಳು, ವರ್ಣಚಿತ್ರಗಳು, ರೇಖಾಚಿತ್ರಗಳು ಮತ್ತು ವೀಡಿಯೋಗಳನ್ನು ರಾಷ್ಟ್ರೀಯ ಅಧಿವೇಶನದಲ್ಲಿ ಪ್ರದರ್ಶಿಸಲಾಗುವುದು ಹಾಗೂ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಗೌರವಿಸಲಾಗುವುದು.

ಛಾಯಾಚಿತ್ರಗಳು, ವರ್ಣಚಿತ್ರಗಳು, ರೇಖಾಚಿತ್ರಗಳು ಮತ್ತು ವೀಡಿಯೋಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸಲ್ಲಿಸಲು ಅಕ್ಟೋಬರ್ 04 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ತಾಳೂರು ರಸ್ತೆಯ ಹೊಸ ನ್ಯಾಯಾಲಯ ಸಂಕೀರ್ಣದ 3 ನೇ ಮಹಡಿಯ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿ ಅಥವಾ ದೂ.08392-278077 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾತಾವರಣ ಬದಲಾವಣೆ; ಸಾಂಕ್ರಾಮಿಕ ಕಾಯಿಲೆಗಳಿಂದ ಎಚ್ಚರ ವಹಿಸಿ: ಡಿಹೆಚ್‌ಓ ಡಾ.ಯಲ್ಲಾ ರಮೇಶ್‌ಬಾಬು



**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26-ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಅಲ್ಲಲ್ಲಿ ತುಂತುರು ಮಳೆಯಾಗುತ್ತಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಗಳಿದ್ದು, ಸಾರ್ವಜನಿಕರು ಎಚ್ಚರವಹಿಸಲು ಅರಿವು ಮೂಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಶುಕ್ರವಾರ, ಬಳ್ಳಾರಿ ತಾಲ್ಲೂಕಿನ ಶಿಡಿಗಿನಮೊಳ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಆರೋಗ್ಯಾಧಿಕಾರಿಗಳು, ಆಶಾಕಾರ್ಯಕರ್ತೆಯರೊಂದಿಗೆ ಚರ್ಚಿಸಿ ಅವರು ಮಾತನಾಡಿದರು.

ಮನೆಯ ಸುತ್ತಮುತ್ತ ನೀರು ನಿಲ್ಲುವುದರಿಂದ ಸೊಳ್ಳೆಗಳ ತಾಣಗಳಾಗುತ್ತವೆ. ಇದರಿಂದ ಸಾಂಕ್ರಾಮಿಕ ರೋಗಗಳಾದ ವಾಂತಿ-ಬೇಧಿ, ಟೈಫಾಯಿಡ್ ಮತ್ತು ಸೊಳ್ಳೆಯಿಂದ ಹರಡುವ ಕಾಯಿಲೆಗಳಾದ ಡೆಂಗ್ಯೂ, ಚಿಕುನ್‌ಗುನ್ಯಾ, ಮಲೇರಿಯಾ ಮುಂತಾದ ಕಾಯಿಲೆಗಳು ಕಂಡುಬರುವ ಸಾಧ್ಯತೆಗಳು ಇವೆ ಎಂದು ತಿಳಿಸಿದರು.

ಜ್ವರ ಪ್ರಕರಣಗಳ ಪತ್ತೆಗಾಗಿ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ರಕ್ತ ಪರೀಕ್ಷೆ ಕೈಗೊಳ್ಳುವ ಸೌಲಭ್ಯ ಕಲ್ಪಿಸಲಾಗಿದೆ. ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಡೆಂಗ್ಯೂ, ಚಿಕಿನ್ ಗುನ್ಯಾ, ಮಲೇರಿಯಾ ಮುಂತಾದವುಗಳ ನಿಯಂತ್ರಣ ಜೊತೆಗೆ ಟೈಫಾಯಿಡ್ ಗುರ್ತಿಸುವಿಕೆಯನ್ನು ಸಹ ಮಾಡಲಾಗುತ್ತಿದ್ದು, ಯಾವುದೇ ಜ್ವರವಿದ್ದರೂ ಸಹ ನಿರ್ಲಕ್ಷ ಮಾಡದೇ ಆಸ್ಪತ್ರೆಗೆ ಭೇಟಿ ನೀಡಿ ಜ್ವರದ ಸ್ವರೂಪವನ್ನು ತಿಳಿದುಕೊಂಡು ಚಿಕಿತ್ಸೆ ಪಡೆಯಲು ಮುಂದೆ ಬರಬೇಕು ಎಂದು ಸಾರ್ವಜನಿಕರಲ್ಲಿ ವಿನಂತಿಸಿದರು. ವಾತಾವರಣ ಬದಲಾವಣೆಯು ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ಹೆಚ್ಚಿಸುವ ಸಾಧ್ಯತೆ ಇದೆ. ಸೊಳ್ಳೆಗಳು ರೋಗವಾಹಕಗಳ ಚಟುವಟಿಕೆಯನ್ನು ಹೆಚ್ಚಿಸುತ್ತದೆ, ನೀರು ಮತ್ತು ಆಹಾರದಿಂದ ಹರಡುವ ರೋಗಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಮನುಷ್ಯನ ಆರೋಗ್ಯವನ್ನು ದುರ್ಬಲಗೊಳಿಸುತ್ತದೆ ಎಂದರು.

ಮಳೆಯಿಂದ ಕುಡಿಯುವ ನೀರು ಕಲುಷಿತವಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಕುದಿಸಿ ಆರಿಸಿ ನೀರು ಕುಡಿಯಬೇಕು. ವಾತಾವರಣ ಬದಲಾವಣೆಯು ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಾತಾವರಣ ಬದಲಾವಣೆ ಹಿನ್ನಲೆ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಜನರಲ್ಲಿ ಅರಿವು ಮೂಡಿಸುವುದು ಅತ್ಯಗತ್ಯವಾಗಿರುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಡಿಎನ್‌ಒ ಗಿರೀಶ್, ಆಸ್ಪತ್ರೆಯ ಸಿಬ್ಬಂದಿ ವರ್ಗದವರು, ಆಶಾಕಾರ್ಯಕರ್ತೆಯರು ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

ಜಿಲ್ಲಾ ಮಟ್ಟದ ಕಾಣೆಯಾದ ಮಕ್ಕಳ ಪತ್ತೆ ಹಚ್ಚಲು ವಿಶೇಷ ಕಾರ್ಯಪಡೆಯ ಸಮಿತಿ ಸಭೆ

# ಕಾಣೆಯಾದ ಮಕ್ಕಳ ಪತ್ತೆಗೆ ವಿಶೇಷ ತಂಡ ರಚಿಸಿ: ಎಎಸ್‌ಪಿ ನವೀನ್ ಕುಮಾರ್

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.26-ಜಿಲ್ಲೆಯಲ್ಲಿ 2021 ರಿಂದ ಇಲ್ಲಿಯವರೆಗೆ 20 ಮಕ್ಕಳು ಕಾಣೆಯಾಗಿದ್ದು, ಪತ್ತೆ ಹಚ್ಚಲು ವಿಶೇಷ ತಂಡ ರಚಿಸಿ ಮಕ್ಕಳ ಮನೆಗೆ ಭೇಟಿ ನೀಡಿ ಪೋಷಕರೊಂದಿಗೆ ಚರ್ಚಿಸಿ ಮಕ್ಕಳ ಪತ್ತೆಹಚ್ಚುವಿಕೆಗೆ ಸಂಬಂಧಿಸಿದ ಪೊಲೀಸ್ ಠಾಣೆಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ನವೀನ್ ಕುಮಾರ್ ಅವರು ಹೇಳಿದರು.

ನಗರದ ಎಸ್‌ಪಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಕಾಣೆ-ಯಾದ ಮಕ್ಕಳ ಪತ್ತೆಹಚ್ಚಲು ವಿಶೇಷ ಕಾರ್ಯಪಡೆಯ ಸಮಿತಿಯ ಮಾಸಿಕ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ಮಾತನಾಡಿ,



ಜಿಲ್ಲೆಯಲ್ಲಿ ಕಾಣೆಯಾದ ಮಕ್ಕಳಿಗೆ ಸಂಬಂಧಿಸಿದಂತೆ ಎಲ್ಲಾ ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಹಾಗೂ ಪೋಷಕರನ್ನು ಕರೆಯಿಸಿ ಅವರಿಗೆ ಆಪ್ತ ಸಮಾಲೋಚನೆ ನಡೆಸಬೇಕು. ಎಲ್ಲಾ ಶಾಲೆಗಳಲ್ಲಿ ಸಲಹಾ ಪೆಟ್ಟಿಗೆಯನ್ನು ಹಾಕಬೇಕು. ಪ್ಯಾರಾಲೀಗಲ್ ವಾಲೆಂಟಿಯರ್ಸ್‌ವರ ಸಹಾಯ ಪಡೆದುಕೊಳ್ಳಬೇಕು ಎಂದು ನಿರ್ದೇಶನ ನೀಡಿದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರಾದೇವಿ ಅವರು ಮಾತನಾಡಿ, ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಎಲ್ಲಾ ಶಾಲೆಗಳಲ್ಲಿ ಸರ್ಕಾರಿ ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ 1098 ಹೊಸ ಲೋಗೋದೊಂದಿಗೆ ಗೋಡೆ ಬರಹ ಬರೆಸಬೇಕು ಎಂದು ಹೇಳಿದರು.

ಶಾಲೆ ಮತ್ತು ಕಾಲೇಜುಗಳಲ್ಲಿ ಸೈಬರ್ ಅಪರಾಧಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಮಕ್ಕಳು ಶಾಲೆಗೆ ನಿರಂತರ ಗೈರುಹಾಜರಾಗಿದ್ದರೆ ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಅಥವಾ 1098ಕ್ಕೆ ಕರೆ ಮಾಡಿ ತಿಳಿಸಬೇಕು ಎಂದರು. ಸಭೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರು, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರು, ಪ್ಯಾರಾಲೀಗಲ್ ವ್ಯಾಲೆಂಟಿಯರ್ಸ್, ಬಾಲನ್ಯಾಯ ಮಂಡಳಿಯ ಸದಸ್ಯರು, ಪೊಲೀಸ್ ಠಾಣಾಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಇದ್ದರು.


# ಪ್ರತಿಯೊಬ್ಬರೂ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು- ಹಂಪಯ್ಯ ಸ್ವಾಮಿ ಹಿರೇಮಠ

ಮಲ್ಲಮ್ಮ ನುಡಿವಾರ್ತೆ

ಕುಕನೂರ : ಪ್ರತಿಯೊಬ್ಬರೂ ಸಹಕಾರ ನೀಡಿದರೆ ಮಾತ್ರ ಸಹಕಾರ ಸಂಘಗಳು ಬೆಳವಣಿಗೆ ಆಗಲು ಸಾಧ್ಯವಿದೆ ಎಂದು ಹಂಪಯ್ಯ ಸ್ವಾಮಿ ಹಿರೇಮಠ ನಾಮನಿರ್ದೇಶಕ ನಿರ್ದೇಶಕರು ಕ. ಹಾ. ಮ. ಮ. ನಿ, ಬೆಂಗಳೂರು ಹೇಳಿದರು.

ಅವರು ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ನಿ, 2024-25 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಸುಮಾರು 20 ವರ್ಷಗಳಿಂದ ಮಂಗಳೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ನಿರ್ದೇಶಕರ ಪರಿಶ್ರಮದಿಂದ ಉತ್ತಮ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದೆ ಎಂದರು. ಈ ಗ್ರಾಮದ ರೈತರ ಶ್ರಮದಿಂದ ಈ ಸಹಕಾರಿ ಸಂಘ ಬೆಳೆವಣಿಯಾಗಿದೆ ಎಂದು ಹೇಳಿದರು.

ಹಾಲಿನ ಒಕ್ಕೂಟ ಮಹಾಸಂಸ್ಥೆ ರೈತರ ಪರವಾಗಿ



ಅನೇಕ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ಮಾಡಲು ಬದ್ಧವಾಗಿದೆ ಎಂದು ಹೇಳಿದರು ನಂದಿನಿ ಉತ್ಪನ್ನಗಳನ್ನು ಎಲ್ಲಾ ರೈತರಿಗೆ ತಲುಪಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು ನಿಮ್ಮ ಗ್ರಾಮದಲ್ಲಿ ನಂದಿನಿ ಪಾರ್ಲರ್ ಮಳಿಗೆಗಳನ್ನು ಅತಿ ಶೀಘ್ರದಲ್ಲೇ ಪ್ರಾರಂಭ ಮಾಡುವದಾಗಿ ಈ ಸಂದರ್ಭದಲ್ಲಿ ಭರವಸೆ ನೀಡಿದರು.

ಮಾರುತಿ ಗಾವರಾಳ ಯುವ ಮುಖಂಡರು ಮಾತನಾಡಿ ಮಂಗಳೂರು ಹಾಲು ಉತ್ಪಾದಕರ ಸಹಕಾರ ಸಂಘ ಇಡೀ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ರೈತರಿಗೆ ಒಳ್ಳೆಯ ಕೆಲಸ ಮಾಡಿ ಜಿಲ್ಲೆಯಲ್ಲಿ ಮಾದರಿ ಸಹಕಾರಿ ಸಂಘ ಆಗಲಿ ಎಂದು ಈ ಸಂದರ್ಭದಲ್ಲಿ ತಿಳಿಸಿದರು ಪ್ರತಿಯೊಂದು ರಾಸುಗಳಿಗೆ ಒಕ್ಕೂಟದ ಅನುದಾನದಲ್ಲಿ ರಾಸು ವಿಮೆಯನ್ನು ಮಾಡಿಸಬೇಕು ಎಂದು ರೈತರಿಗೆ ಹೇಳಿದರು. ರೈತರು ಕರುಗಳಿಗೆ ತಪ್ಪದೇ ಜಂತುನಾಶಕ ಔಷಧಿ ಕುಡಿಸಬೇಕು ಎಂದು ಹೇಳಿದರು.

ಶೇಖರಗೌಡ್ರ ಸಂಗನಗೌಡ್ರ ಪೊಲೀಸ್ ಪಾಟೀಲ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ನಮ್ಮ ಹಾಲು ಉತ್ಪಾದಕರ ಸಹಕಾರ ಸಂಘ 20 ವರ್ಷಗಳಿಂದ ಅನೇಕ ಒಳ್ಳೆಯ ಯೋಜನೆಗಳನ್ನು ರೈತರಿಗೆ ತಲುಪಿಸುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು ನಮ್ಮ ಸಂಘದ ಎಲ್ಲಾ ನಿರ್ದೇಶಕರು, ಸಿಬ್ಬಂದಿ ವರ್ಗದವರು ಸಂಘದ ಏಳಿಗೆಗಾಗಿ ಪ್ರಾಮಾಣಿಕ ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದರು. ಉತ್ತಮ ಹಸಿರುಮೇವಿನ ತಳಿಗಳನ್ನು ಅಧಿಕ ಹಾಲಿನ ಇಳುವರಿ ಪಡೆಯಿರಿ ಎಂದು ರೈತರಿಗೆ ಸಲಹೆ ನೀಡಿದರು ಸಂಘದ ಸದಸ್ಯರು ಮತ್ತು ಕುಟುಂಬದ ಸದಸ್ಯರನ್ನು ಯಶಸ್ವಿ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳಿದರು. ಸತ್ಯನಾರಾಯಣ ಅಂಗಡಿ ಸಮಾಲೋಚಕರು ಜಿಲ್ಲಾ ಸಹಕಾರ ಹಾಲು ಒಕ್ಕೂಟ ಯಲಬುರ್ಗಾ ವಿಭಾಗ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಆನಂದ ಮುದುಕಪ್ಪ ಉಮಚಗಿ ಮುಖ್ಯ ಕಾರ್ಯನಿರ್ವಾಹಕರು ವಾರ್ಷಿಕ ವರದಿ ವಾಚನ ಮಾಡಿದರು.

ಸಂತೋಷ ಹಿರೇಮಠ ಸ್ವಾಗತ ನಿರ್ವಹಣೆ ಮಾಡಿದರು. ಈ ಸಂದರ್ಭದಲ್ಲಿ ಕಮಲಮ್ಮ ಗಾವರಾಳ ನಿರ್ದೇಶಕರು ರಾ. ಬ. ಕೊ. ವಿ. ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಬಳ್ಳಾರಿ, ಶೇಖರಗೌಡ್ರ. ಸಂ. ಪೋಲೀಸಪಾಟೀಲ, ಅಧ್ಯಕ್ಷರು ಹಾಲು ಉತ್ಪಾದಕರ ಸಹಕಾರ ಸಂಘ, ಗಟ್ಟೆಪ್ಪ ಉಮಚಗಿ ಉಪಾಧ್ಯಕ್ಷರು, ನಿರ್ದೇಶಕರಾದ ಶಂಕರಗೌಡ್ರ ಕೀರ್ತಗೌಡ್ರ, ಗುರಪ್ಪ ಕುದ್ರಿಮೋತಿ, ಹುಸೇನಸಾಬ ಗುಡಿಹಿಂದಲ್, ಮಂಗಳೇಶಪ್ಪಕವಳಕೇರಿ, ಪಾಲಾಕ್ಷಗೌಡ್ರ ಕೀರ್ತಗೌಡ್ರ, ಪಾರಮ್ಮ ಹೊಸಳ್ಳಿ, ಶಿವಮ್ಮ ಬಾರಿನ್ನವರ, ಮುದಕಪ್ಪ ಅರಗಂಜಿ, ಗಂಗಮ್ಮ ನೀಲಗೇರ, ಲಕ್ಷ್ಮಮ್ಮ ಮ್ಯಾಗಳೇಶಿ ಗವಿಸಿದ್ದಪ್ಪ ಕುಂಬಾರ, ಗವಿಸಿದ್ದಪ್ಪ ಚಂಡೂರ ಚಿಕ್ಕಮ್ಯಾಗೇರಿ ಬಸಯ್ಯ ಹಳ್ಳಿಗುಡಿ ಚಿಕ್ಕಮ್ಯಾಗೇರಿ, ಮಹೇಶ ಗಾವರಾಳ, ಬಸವರಾಜ ಯರದೊಡ್ಡಿ, ಶರಣಪ್ಪ ಹ್ಯಾಟಿ, ಅಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ರವೀಂದ್ರನಾಥ ಕೊಟ್ರಪ್ಪ ತೋಟದ ಪತ್ರಕರ್ತರು, ಕಳಕಯ್ಯ, ಅರವಿಂದ ಗಾವರಾಳ, ಮಂಜುನಾಥ ತೊಡ್ಲರ್, ಭರತೇಶ ಪಲ್ಲೇದ, ಗ್ರಾಮದ ರೈತ ಬಾಂಧವರು ಉಪಸ್ಥಿತರಿದ್ದರು.

# ಗಾಣಗಾಪೂರ, ಸೊನ್ನಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಭೇಟಿ: ಪ್ರವಾಹ ಪೀಡಿತ ಪ್ರದೇಶ ಮತ್ತು ಬೆಳೆ ಹಾನಿ ವೀಕ್ಷಣೆ





ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.26: ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ.-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಗುರುವಾರ ಮಹಾರಾಷ್ಟ್ರದ ವೀರ್, ಉಜನಿ, ಸಿನಾ ಜಲಾಶಯ ಮತ್ತು ಬೋರಿ ನದಿಯಿಂದ ಅಪಾರ ಪ್ರಮಾಣದ ನೀರು ಭೀಮಾ ನದಿಗೆ ಹರಿಬಿಟ್ಟ ಕಾರಣ ಪ್ರವಾಹದ ಬೀತಿ ಎದುರಾಗಿರುವ ಹಿನ್ನೆಲೆಯಲ್ಲಿ ಗಾಣಗಾಪುರ, ಸೊನ್ನ ಬ್ರಿಡ್ಜ್ ಕಂ ಬ್ಯಾರೇಜ್ ವೀಕ್ಷಣೆ ಮಾಡಿ ಸಂತ್ರಸ್ತರ ಅಹವಾಲು ಆಲಿಸಿದರು.

ಮೊದಲಿಗೆ ದೇವಲಗಾಣಗಾಪೂರಕ್ಕೆ ಭೇಟಿ ನೀಡಿದ ಸಚಿವರು, ಗಾಣಗಾಪೂರ-ಇಟಗಾ ಸಂಪರ್ಕ ಕಲ್ಪಿಸುವ ಸೇತುವೆ ಸಂಪೂರ್ಣ ಮುಳುಗಡೆಯಾಗಿರುವುದನ್ನು ವೀಕ್ಷಿಸಿದರು. ಸ್ಥಳದಲ್ಲಿ ಹಾಜರಿದ್ದ ಗ್ರಾಮಸ್ಥರು ಪ್ರತಿ ವರ್ಷ ಪ್ರವಾಹ ಬಂದಾಗ ಈ ಸೇತುವೆ ಮುಲುಗಡೆಯಾಗಿ ಸಂಪರ್ಕ ಕಡಿತವಾಗುತ್ತಿದೆ. ಸೇತುವೆ ಎತ್ತರ ಹೆಚ್ಚಿಸಿ ಶಾಶ್ವತ ಪರಿಹಾರ ಒದಗಿಸಿ ಎಂದು ಸಚಿವರಲ್ಲಿ ಬೇಡಿಕೊಂಡರು. ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ ಪ್ರವಾಹ ತಗ್ಗಿದ ಬಳಿಕ ಮತ್ತೊಮ್ಮೆ ಇಲ್ಲಿಗೆ ಭೇಟಿ ನೀಡಿ ಸಂಪೂರ್ಣವಾಗಿ ಪರಿಶೀಲಿಸಿ ಅಗತ್ಯ ಪರಿಹಾರ ಕ್ರಮ ಕೈಗೊಳ್ಳುವುದಾಗಿ ಗ್ರಾಮಸ್ಥರಿಗೆ ಅಭಯ ನೀಡಿದ ಅವರು, ಪ್ರವಾಹದಿಂದ ಗ್ರಾಮಸ್ಥರಿಗೆ ಕಲುಷಿತ ನೀರು ಪೂರೈಕೆಯಾಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಮತ್ತು ಶುದ್ಧೀಕರಿಸಿದ ಕುಡಿಯುವ ನೀರು ಸಾರ್ವಜನಿಕರಿಗೆ ಪೂರೈಕೆ ಮಾಡಬೇಕು ಎಂದು ತಾಲೂಕು ಪಂಚಾಯತ್ ಇ.ಓ.ಗೆ ಸೂಚನೆ ನೀಡಿದರು. ಗಾಣಗಾಪೂರದ ಯಾತ್ರಿಕ ನಿವಾಸದಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೂ ಭೇಟಿ ನೀಡಿದ ಸಚಿವರು ಸಂತ್ರಸ್ತರೊಂದಿಗೆ ಸಮಾಲೋಚನೆ ನಡೆಸಿದರು. ಸಂತ್ರಸ್ತರಿಗೆ ಊಟೋಪಚಾರ ಜೊತೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ನಿರ್ದೇಶನ ನೀಡಿದ ಅವರು, ನಂತರ ಸಂಗಮಕ್ಕೆ ತೆರಳುವ ಸಂಪರ್ಕ ಕಡಿತವಾಗಿರುವುದನ್ನು ಸಹ ವೀಕ್ಷಿಸಿದರು. ಇನ್ನು ಮಾರ್ಗ ಮಧ್ಯೆ ಸಚಿವರು ಚೌಡಾಪುರ ಗ್ರಾಮದಲ್ಲಿ ಸರ್ವೆ ನಂ.6/3 ರಲ್ಲಿನ ಹೇಮಾ ಅಶೋಕ, 6/1 ರಲ್ಲಿ ಧನಶ್ರೀ ಕಿಶೋರ ಮತ್ತು 6/2 ರಲ್ಲಿನ ಚಂದಪ್ಪ ಗುರಪ್ಪ ಅಂಬಾಡಿ ಅವರ ಹೊಲದಲ್ಲಿ ಬೆಳೆದ ತೊಗರಿ ಬೆಳೆಹಾನಿ, ಮಲ್ಲಾಬಾದ ಗ್ರಾಮದಲ್ಲಿನ ಟೊಮಾಟೋ ಹಾಗೂ ಅಫಜಲಪೂರ ಗ್ರಾಮದಲ್ಲಿನ ಸರ್ವೆ ನಂ.678 ರಲ್ಲಿನ ಹತ್ತಿ ಬೆಳೆ ಮತ್ತು ಸರ್ವೆ ನಂ.356/12 ರಲ್ಲಿ ಸುಮಾರು 1.40 ಹೆಕ್ಟೇರ್ ಪ್ರದೇಶದಲ್ಲಿ ವಿನೋದ್ ಬಸವರಾಜ್ ನಿಂಬಾಳ ಅವರು ಬೆಳೆದ ಉಳ್ಳಾಗಡ್ಡಿ ಹಾನಿ ಪ್ರದೇಶ ವೀಕ್ಷಿಸಿದರು. ವಿಧಾನ ಪರಿಷತ್ ಶಾಸಕ ಜಯದೇವ ಗುತ್ತೆದಾರ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂ ಖಾನ್, ಮುಖಂಡ ಅರುಣಕುಮಾರ ಪಾಟೀಲ, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತೆ ಸಾಹಿತ್ಯ, ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್, ಲೋಕೋಪಯೋಗಿ ಇಲಾಖೆಯ ಇ.ಇ.ಸುಭಾಷ ಬಿರಾದಾರ, ತಹಶೀಲ್ದಾರ ಸಂಜೀವಕುಮಾರ ದಾಸರ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಇದ್ದರು.

## ಜಿಲ್ಲೆ ಹಾಗೂ ಮಹಾರಾಷ್ಟ್ರದಲ್ಲಿ ಸುರಿದ ಮಳೆಯಿಂದ ಭೀಮಾನದಿ ತೀರದಲ್ಲಿ ಪ್ರವಾಹ ಸ್ಥಿತಿ: ಸಚಿವ ಪ್ರಿಯಾಂಕ್ ಖರ್ಗೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ, ಸೆ.26-ಕಲಬುರಗಿ ಸೇರಿದಂತೆ ಮಹಾರಾಷ್ಟ್ರದಲ್ಲಿ ಏಕ ಕಾಲಕ್ಕೆ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಜಿಲ್ಲೆಯ ಭೀಮಾ ನದಿ ತೀರದ ಗ್ರಾಮಗಳಲ್ಲಿ ಪ್ರವಾಹವಾಗಿದೆ. ಮಹಾರಾಷ್ಟ್ರದಲ್ಲಿ ರೆಡ್ ಅಲರ್ಟ್ ಹಾಗೂ ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಪ್ರವಾಹ ಪರಿಹಾರ ಸಮರೋಪಾದಿಯಲ್ಲಿ ನಡೆಯುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರವಾಹ ಪೀಡಿತ ಅಫಜಲಪುರ ತಾಲೂಕಿನ ಗಾಣಗಾಪೂರ ಬ್ರಿಡ್ಜ್, ಕಾಳಜಿ ಕೇಂದ್ರ, ಸಂಗಮ ಸೇರಿದಂತೆ ಸೊನ್ನ ಬ್ಯಾರೇಜ್ ಮತ್ತು ವಿವಿಧ ಹಳ್ಳಿಗಳ ಹಾನಿಗೊಳಗಾದ ಪ್ರದೇಶ ಹಾಗೂ ಬೆಳೆ ಹಾನಿ ಜಮೀನುಗಳ ಪರಿಶೀಲನೆ ನಡೆಸಿದ ನಂತರ ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ವಾಡಿಕೆಗಿಂತ ಹೆಚ್ಚು ಮಳೆ: ಜಿಲ್ಲೆಯಲ್ಲಿ ಜನೇವರಿ 2025 ರಿಂದ ಸೆಪ್ಟೆಂಬರ್ 25 ರವರೆಗಿನ ವಾಡಿಕೆ ಮಳೆ 614 ಮಿಮಿ ಇದ್ದು 901 ಮಿಮಿ (ಶೇ 47%) ಹೆಚ್ಚುವರಿ ಮಳೆಯಾಗಿದೆ. ಅಗಷ್ಟ್ ತಿಂಗಳ ವಾಡಿಕೆ 156 ಮಿಮಿ ಇದ್ದು 263 ಮಿಮಿ (ಶೇ 69%) ಹೆಚ್ಚುವರಿಯಾಗಿದೆ. ಸೆಪ್ಟೆಂಬರ್ 1 ರಿಂದ 25 ರವರೆಗೆ ವಾಡಿಕೆ ಮಳೆ 145 ಮಿಮಿ ಇದ್ದು 202 ಮಿಮಿ (39% ) ಹೆಚ್ಚುವರಿ ಯಾಗಿದೆ. ಕಳೆದ ಒಂದು ವಾರದಿಂದ ವಾಡಿಕೆ ಮಳೆ 47 ಮಿಮಿ ಇದ್ದು 88 ಮಿಮಿ ಮಳೆಯಾಗಿದ್ದು, 85% ಹೆಚ್ಚುವರಿಯಾಗಿದೆ. ಇದರಿಂದಾಗಿ ತೊಗರಿ, ಉದ್ದು, ಹತ್ತಿ, ಹೆಸರು ಸೇರಿದಂತೆ ಪ್ರಮುಖ ಬೆಳೆಗಳು ಹಾನಿಯಾಗಿವೆ ಎಂದರು.

ಪುನರ್ ವಸತಿ ಬೇಡಿಕೆ ಪರಿಶೀಲನೆ: ಇನ್ನು ಮುಂದಿನ ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ಮಳೆ ಮುಂದುವರೆಯಲಿದ್ದು ನದಿ ಪಾತ್ರದ ಜನರು ಯಾವುದೇ ಕಾರಣಕ್ಕೂ ನದಿಗೆ ಇಳಿಯಬಾರದು ಎಂದು ಮನವಿ ಮಾಡಿದ ಸಚಿವರು, ನದಿ ಪಾತ್ರದ ಕೆಲವು ಕಡೆ ಜನರು ಪುನರ್ ವಸತಿಗಾಗಿ ಆಗ್ರಹಿಸಿದ್ದಾರೆ. ಯಾವ ಗ್ರಾಮದ ಜನರು ಪುನರ್ ವಸತಿ ಬಯಸಿದ್ದಾರೆ ಅವರು ಜಿಲ್ಲಾಡಳಿತಕ್ಕೆ ವಿವರ ಒದಗಿಸಿದರೆ ಆ ಬಗ್ಗೆಯೂ ಕೂಡಾ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

3.45 ಲಕ್ಷ ಕ್ಯೂಸೆಕ್ಸ್ ನೀರು ಬಿಡುಗಡೆ: ಮಹಾರಾಷ್ಟ್ರದ ಉಜ್ಜನಿ ಜಲಾಶಯದಿಂದ 45,000 ಕ್ಯೂಸೆಕ್ಸ್, ಸಿನಾ ಜಲಾಶಯದಿಂದ 2,70,000 ಕ್ಯೂಸೆಕ್ಸ್, ವಿರಾ ಜಲಾಶಯದಿಂದ 30,000 ಕ್ಯೂಸೆಕ್ಸ್ ಹಾಗೂ ಭೋರಿ ಹಳ್ಳದಿಂದ 5,000 ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡಿದ್ದರಿಂದ ಭೀಮಾ ನದಿಗೆ 3,50,000 ಕ್ಯೂಸೆಕ್ಸ್ ನೀರು ಹರಿದು ಬಂದಿದೆ. ಅಫಜಲಪುರ ತಾಲೂಕಿನ ಸೊನ್ನ ಬ್ಯಾರೇಜ್ನಿಂದ 3.45 ಲಕ್ಷ ಕ್ಯೂಸೆಕ್ಸ್ ನೀರು ಭೀಮಾ ನದಿಗೆ ಬಿಡಲಾಗಿದೆ ಹಾಗಾಗಿ ನದಿ ಪಾತ್ರದಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಕಾಳಜಿ ಕೇಂದ್ರಗಳ ಸ್ಥಾಪನೆ: ಜಿಲ್ಲೆಯಲ್ಲಿ ಒಟ್ಟು 36 ಗ್ರಾಮಗಳು ಪ್ರವಾಹ ಪೀಡಿತವಾಗಿವೆ. ಇವುಗಳಲ್ಲಿ ಅಫಜಲ್ಪುರ ತಾಲೂಕಿನ 17, ಜೇವರ್ಗಿ ತಾಲೂಕಿನ 8 ಹಾಗೂ ಕಲಬುರಗಿ ಮತ್ತು ಚಿತ್ತಾಪುರ ತಾಲೂಕಿನಲ್ಲಿ ತಲಾ 5 ಗ್ರಾಮಗಳು ಸೇರಿವೆ.

ಜಿಲ್ಲೆಯಲ್ಲಿ 31 ಕಾಳಜಿ ಕೇಂದ್ರಗಳನ್ನು ಗುರುತಿಸಲಾಗಿದ್ದು, ಅಫಜಲಪುರ ತಾಲೂಕಿನ 17, ಜೇವರ್ಗಿ ತಾಲೂಕಿನ 8 ಹಾಗೂ ಕಲಬುರಗಿ ಮತ್ತು ಚಿತ್ತಾಪುರ ತಾಲೂಕಿನಲ್ಲಿ ತಲಾ 5 ಗ್ರಾಮಗಳು ಸೇರಿವೆ.

ಜಿಲ್ಲೆಯಲ್ಲಿ ಒಟ್ಟು 12 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಅಫಜಲಪುರ ತಾಲೂಕಿನ 3 ಜೇವರ್ಗಿ ತಾಲೂಕಿನ 8 ಹಾಗೂ ಕಲಬುರಗಿ ತಾಲೂಕಿನಲ್ಲಿ 1 ತೆರೆಯಲಾಗಿದೆ. ಒಟ್ಟು 1436 ಜನರಿಗೆ ಈ ಕಾಳಜಿ ಕೇಂದ್ರಗಳಲ್ಲಿ ವಾಸಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ವಿವರಿಸಿದರು.

ಆಹಾರ ಪದಾರ್ಥಗಳ ಕಿಟ್ ವಿತರಣೆ: ಮಳೆ ಹಾಗೂ ಪ್ರವಾಹದಿಂದ ಹಾನಿಗೊಳಗಾದ ಗ್ರಾಮಗಳ ಜನರಿಗೆ ಸುಮಾರು 2500 ಆಹಾರ ಸಾಮಗ್ರಿಗಳ ಕಿಟ್‌ನ್ನು ಕಲಬುರಗಿ ಸಂಸದರಾದ ರಾಧಾಕೃಷ್ಣ ದೊಡ್ಡಮನಿ ಅವರು ಜಿಲ್ಲಾಡಳಿತದ ಮೂಲಕ ವಿತರಿಸಲಾಗುತ್ತಿದೆ.

ಪರಿಹಾರ ತಂಡ ನಿಯೋಜನೆ: ಪ್ರವಾಹ ಸಂದರ್ಭದಲ್ಲಿ ರಕ್ಷಣೆ ಕಾರ್ಯ ಕೈಗೊಳ್ಳಲು 20 ಅಧಿಕಾರಿಗಳ ಒಳಗೊಂಡ ಪರಿಣಿತ 1 ಎನ್‌ಡಿಆರ್‌ಎಫ್ ತಂಡವನ್ನು ದೇವಲಗಾಣಗಾಪುರದಲ್ಲಿ ಇರಿಸಲಾಗಿದೆ. ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ, ಕಂದಾಯ ಇಲಾಖೆ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳನ್ನು ಸೇವೆಗೆ ನಿಯೋಜಿಸಲಾಗಿದೆ ಎಂದರು.

ಜಂಟಿ ಸಮೀಕ್ಷೆ: ಮಳೆಯಿಂದ ಜಿಲ್ಲೆಯಲ್ಲಿ ಮೇಲ್ನೋಟದ ಅಂದಾಜಿನಂತೆ 1.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಬೆಳೆ ಹಾನಿಯಾಗಿದೆ. ಕೃಷಿ, ಕಂದಾಯ, ತೋಟಗಾರಿಕೆ ಸೇರಿದಂತೆ ಇತರೆ ಇಲಾಖೆಗಳ ಜಂಟಿ ಸಮೀಕ್ಷೆ ನಡೆಸಲಾಗುತ್ತಿದ್ದು ಶೇ 90 ರಷ್ಟು ಸಮೀಕ್ಷೆ ಮುಗಿದಿದೆ. ಪೂರ್ಣ ಸಮೀಕ್ಷೆ ಮುಗಿದ ನಂತರ ಬೆಳೆ ಹಾನಿ ಗೊತ್ತಾಗಲಿದೆ. ಈ ನಡುವೆ ಸೆಪ್ಟೆಂಬರ್ 17 ರಂದು ಜಿಲ್ಲೆಗೆ ಭೇಟಿ ನೀಡಿದ್ದ ಸಿಎಂ ಸಿದ್ದರಾಮಯ್ಯನವರಿಗೆ ಬೆಳೆ ಹಾನಿ ಬಗ್ಗೆ ವಿವರಿಸಲಾಗಿದೆ ಎಂದರು.

ಬೆಳೆವಿಮೆ: 2025-26 ನೇ ಸಾಲಿನ 3,00,952 ರೈತರು ಬೆಳೆ ವಿಮೆ ನೋಂದಣಿ ಮಾಡಿಸಿದ್ದು, ಶೇ 59 ರೈತರು ಬೆಳೆ ಹಾನಿ ಬಗ್ಗೆ ದೂರು ಸಲ್ಲಿಸಿರುತ್ತಾರೆ. ದೂರು ನೀಡಿದ ರೈತರ ಬೆಳೆ ಹಾನಿ ಸಮೀಕ್ಷೆ ಶೇ 75 ಮುಗಿದಿದೆ. ಈಗಾಗಲೇ 2024-25 ನೇ ಸಾಲಿನ ಎರಡನೆಯ ಕಂತಿನ ಬೆಳೆವಿಮೆ ಪರಿಹಾರವಾಗಿ ರೂ 315.64 ಕೋಟಿ ಬಿಡುಗಡೆಯಾಗಿದ್ದು ಸಧ್ಯದಲ್ಲೇ ರೈತರ ಅಕೌಂಟ್‌ಗೆ ಜಮೆಮಾಡಲಾಗುವುದು ಎಂದು ಸಚಿವರು ಹೇಳಿದರು.

ಪರಿಹಾರ: ಬೆಳೆ ಪರಿಹಾರ ಸೇರಿದಂತೆ ರೈತರಿಗೆ ಸೇರಬೇಕಾಗಿರುವ ಪರಿಹಾರ ಒದಗಿಸಿಕೊಡುವಲ್ಲಿ ರಾಜ್ಯ ಸರ್ಕಾರ ಮುಂದಿದೆ. 2023-24 ರ ಸಾಲಿನಲ್ಲಿ ಇನ್ ಪುಟ್ ಸಬ್ಸಿಡಿ ಹಾಗೂ ಬೆಳೆ ವಿಮೆ ಸೇರಿದಂತೆ 8,91,277 ರೈತರಿಗೆ ರೂ 1417 ಕೋಟಿ ಪರಿಹಾರ ಒದಗಿಸಲಾಗಿದೆ. 2023-24 ಹಾಗೂ 2014-25 ರ ಸಾಲಿನ ಬೆಳೆ ವಿಮೆಯಾಗಿ 3,63,368 ರೈತರಿಗೆ ರೂ 846.03 ಕೋಟಿ ಪರಿಹಾರ ಒದಗಿಸಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ನೆಟೆರೋಗದಿಂದ ತೊಗರಿ ಬೆಳೆ ಹಾನಿಯಾದಾಗ 1,78,354 ರೈತರಿಗೆ ರೂ 182 ಕೋಟಿ ಪರಿಹಾರ ನೀಡಲಾಗಿದೆ. ಬರ/ನೆರೆ ಪರಿಹಾರವಾಗಿ ರೂ 389.14 ಕೋಟಿ ಪರಿಹಾರ ನೀಡಲಾಗಿದೆ. ಹಿಂದಿನ ಸರ್ಕಾರದ ಅಧಿಕಾರವಾಧಿಯಲ್ಲಿ ರೂ 206 ಕೋಟಿ ಮಾತ್ರ ಬಿಡುಗಡೆ ಮಾಡಲಾಗಿತ್ತು.

ವಿಶೇಷ ಪ್ಯಾಕೇಜ್ ಪಡೆಯಲು ಕ್ರಮ: ತಮ್ಮ ಇಲಾಖೆ ವತಿಯಿಂದ ವಿಶೇಷ ಪ್ಯಾಕೇಜ್ ಕಲಬುರಗಿ ಜಿಲ್ಲೆಗೆ ಘೋಷಿಸಲು ಯೋಜಿಸಲಾಗುತ್ತಿದೆ, ಇದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಮಳೆಯ ಕಡಿಮೆಯಾದ ನಂತರ ತಾಲ್ಲೂಕುವಾರು ವರದಿ ನೀಡಲು ಸಿಇಒ ಅವರಿಗೆ ಸೂಚನೆ ನೀಡಲಾಗಿದೆ. ಸ್ಥಳಾಂತರ ಪುನರ್ ವಸತಿ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು, ಇನ್ನೊಂದೆರೆಡು ಮೂರು ದಿನ ಮಳೆಯ ಅಬ್ಬರ ಹೆಚ್ಚಾಗಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಜಾಗೃತವಾಗಿರಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಅಲ್ಲಮಪ್ರಭು ಪಾಟೀಲ್, ಪರಿಷತ್ ಸದಸ್ಯ ಜಗದೇವ ಗುತ್ತೇದಾರ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರುನ್ನಮ್, ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು, ಸಿಇಒ ಭಂವರ್ ಸಿಂಗ್ ಮೀನಾ ಅವರು ಉಪಸ್ಥಿತರಿದ್ದರು.

## ಲಿಂಗಂಪಲ್ಲಿ ಹಳ್ಳದಲ್ಲಿ ಕೊಚ್ಚಿ ಹೋಗಿದ್ದ ವೃದ್ಧ ಮಹಿಳೆ ಪತ್ತೆ



ಕಲಬುರಗಿ:ಸೆ.26: ಸೇಡಂ ತಾಲ್ಲೂಕಿನ ಲಿಂಗಂಪಲ್ಲಿ ಗ್ರಾಮದಲ್ಲಿನ ಹಳ್ಳದ ಪ್ರವಾಹದಲ್ಲಿ ಕಾಲು ಜಾರಿ ಕೊಚ್ಚಿಕೊಂಡು ಹೋಗಿದ್ದ ವೃದ್ಧ ಮಹಿಳೆ ಸುಭದ್ರಮ್ಮ (65) ಅವರ ಮೃತದೇಹ ಶುಕ್ರವಾರ ಪತ್ತೆಯಾಗಿದೆ.

ಪಕ್ಕದ ಮನೆಯವರಿಂದ ತೆಗೆದುಕೊಂಡ ಬಳಿ ವ್ಹೀಲ್ ಚೇರ್ ಮೂಲಕ ತೆರಳುವ ವೇಳೆ ಇಳಿಜಾರು ಪ್ರದೇಶದಿಂದ ಕಾಲು ಜಾರಿ ಹಳ್ಳಕ್ಕೆ ವೃದ್ಧ ಮಹಿಳೆ ಬಿದ್ದ ಮಾಹಿತಿ ಪಡೆದ ತಕ್ಷಣವೇ ಅಗ್ನಿಶಾಮಕ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಶೋಧ ಕಾರ್ಯ ಕೈಗೊಂಡರು. ಸುಮಾರು ನಾಲ್ಕು ತಾಸುಗಳ ಕಾರ್ಯಾಚರಣೆಯ ನಂತರ ವೃದ್ಧ ಮಹಿಳೆಯ ಶವ ಪತ್ತೆಯಾಯಿತು.

ಲಿಂಗಂಪಲ್ಲಿ ಗ್ರಾಮದ ಹಳ್ಳದಿಂದ ಐದು ಕಿ.ಮೀ. ದೂರದ ಕಂಟಿಯಲ್ಲಿ ಸುಭದ್ರಮ್ಮ ಶವ ಪತ್ತೆಯಾಯಿತು. ವೃದ್ಧ ಮಹಿಳೆಗೆ ಪುತ್ರ ನೋಡಿಕೊಳ್ಳುತ್ತಿರಲಿಲ್ಲ. ಹೀಗಾಗಿ ಕಳೆದ ಒಂಬತ್ತು ತಿಂಗಳ ಹಿಂದೆ ರೂದ್ನೂರ್ ಗ್ರಾಮದಿಂದ ಲಿಂಗಂಪಲ್ಲಿ ಗ್ರಾಮದ ಪುತ್ರಿಯ ಮನೆಗೆ ಬಂದಿದ್ದು, ಈಗ ಶವವಾಗಿ ಪತ್ತೆಯಾಗಿದ್ದಾಳೆ.

ಈ ಸಂದರ್ಭದಲ್ಲಿ ಮುಧೋಳ್ ಪೋಲಿಸ್ ಠಾಣೆಯ ಪಿಎಸ್ಐ ಚಂದ್ರಶೇಖರ್,

ಸಿಬ್ಬಂದಿಗಳಾದ ಬಸಪ್ಪ, ಪ್ರಭಾರಿ ಅಗ್ನಿಶಾಮಕ ಠಾಣಾಧಿಕಾರಿ ಶರಣಯ್ಯ ಗುತ್ತೇದಾರ್, ಪ್ರಮುಖ ಅಗ್ನಿಶಾಮಕ ಮಹಿಬೂಬ್, ದಿನೇಶ್ ರೆಡ್ಡಿ, ಬಿ. ನರೇಂದ್ರ, ರಿಯಾಜ್, ನಿಂಗರಾಜ್ ಮುಂತಾದವರು ಕಾರ್ಯಾಚರಣೆಯಲ್ಲಿ ತೊಡಗಿದ್ದರು. ಈ ಕುರಿತು ಮುಧೋಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

## ಮಂಗಳೂರು ಗ್ರಾಮದಲ್ಲಿ ರೈತನೋರ್ವ ಹಾವು ಕಚ್ಚಿ ಮೃತ



ಮಲ್ಲಮ್ಮ ನುಡಿ ವಾರ್ತೆ ಕುಕನೂರು :ಸೆ.26: ತಾಲೂಕಿನ ಮಂಗಳೂರು ಗ್ರಾಮದ ರೈತನೊಬ್ಬ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಹಾವು ಕಚ್ಚಿ ಸಾವನ್ನಪ್ಪಿದ್ದಾನೆ ಎಂದು ತಿಳಿದು ಬಂದಿದೆ. ಸಪ್ಟಂಬರ್ 25 ಗುರುವಾರದಂದು ಈ ಘಟನೆ ನಡೆದಿದ್ದು, ಶರಣಪ್ಪ ಫಕೀರಪ್ಪ ಮೂಲಿಮನಿ (ವಯಸ್ಸು- 22 ) ಪತ್ತೆಹಚ್ಚಲಾಗಿದೆ. ಮೃತನು ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಅಚಾನಕ್ಕಾಗಿ ಹಾವೊಂದು ಅವರಿಗೆ ಕಚ್ಚಿ ಸ್ಥಳದಲ್ಲೇ ಮೃತ ಪಟ್ಟಿರುತ್ತಾನೆ ಎಂದು ಬಲ್ಲಮೂಲಗಳಿಂದ ಮಾಹಿತಿ ಲಭ್ಯವಾಗಿದೆ. ಈ ಘಟನೆ ತಿಳಿದ ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ, ರೈತನ ಕುಟುಂಬಕ್ಕೆ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಈ ಕುರಿತು ಬೇವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಚುನಾವಣೆಗೆ ತಡೆಯಾಜ್ಞೆ

ಬೀದರ, ಸೆ.26 : ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ, ನಿ. ಇಮಾಮಪೂರ, ಬೀದರ ಇದರ ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆ-2025 ನಡೆಸಲು ದಿನಾಂಕ: 10-09-2025 ರಂದು ಹೊರಡಿಸಿದ ಅಧಿಸೂಚನೆ ಕ್ಕೆ ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ಕಲಬುರಗಿಯಲ್ಲಿ ರೀಟ್ ಪಿಟಿಷನ್ ಸಂಖ್ಯೆ: 202986/2025 ದಾಖಲಾಗಿದ್ದು, ಇದರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಸದರಿ ಚುನಾವಣೆ ನಡೆಸಲು ದಿನಾಂಕ:10-09-2025 ರಂದು ಹೊರಡಿಸಿದ ಅಧಿಸೂಚನೆಕ್ಕೆ ತಡೆಯಾಜ್ಞೆ ನೀಡಿರುವುದರಿಂದ ದಿನಾಂಕ: 27-09-2025 ರಂದು ನಿಗದಿ ಪಡಿಸಿದ ಮತದಾನವನ್ನು ನಡೆಸಬಾರದು ಎಂದು ಶ್ರೀ ಮಲ್ಲಿಕಾರ್ಜುನ ಸಾಹುಕಾರ ಸರ್ಕಾರಿ ವಕೀಲರು ಉಚ್ಚ ನ್ಯಾಯಾಲಯ ಕಲಬುರಗಿ ರವರು ಇ-ಮೇಲ್ ಸಂದೇಶ ದಿನಾಂಕ: 26-09-2025 ರ ಮೂಲಕ ಸೂಚಿಸಿರುತ್ತಾರೆ.

ಈ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮತ್ತು ಕಾರ್ಖಾನೆಯ ಎಲ್ಲಾ ಅರ್ಹ ಮತದಾರರಿಗೆ ತಿಳಿಯಪಡಿಸುವುದೇನೆಂದರೆ ದಿನಾಂಕ: 27.09.2025 ರ ಬೆಳಿಗ್ಗೆ 9:00 ಗಂಟೆಯಿಂದ ಸಾಯಂಕಾಲ 4:00 ಗಂಟೆಯವರೆಗೆ ನಿಗದಿ ಪಡಿಸಿದ ಮತದಾನವು ನಡೆಯುವುದಿಲ್ಲವೆಂದು ಚುನಾವಣಾಧಿಕಾರಿ, ನಾರಂಜಾ ಸ.ಸಾ.ಕ.ನಿ. ಇಮಾಮಪೂರ ಹಾಗೂ ಸಹಾಯಕ ಆಯುಕ್ತರು ಬೀದರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ಬಡಾವಣೆಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.26: ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಜಲಮೂಲ ನದಿಗಳಲ್ಲಿ ಒಂದಾದ ಭೀಮಾ ನದಿಯ ಮೇಲ್ಭಾಗದ ಪ್ರದೇಶದಲ್ಲಿ ವಿಪರಿತ ಮಳೆಯಾಗುತ್ತಿದೆ. ಮಹಾರಾಷ್ಟದ ಉಜ್ಜಯನಿ ಜಲಾಶಯ ಹಾಗೂ ಅಫಜಲಪುರದ ಭೀಮಾ ಬ್ಯಾರೇಜಿನಿಂದ ಹೊರ ಹರಿವು ಹೆಚ್ಚಾಗಿರುವುದರಿಂದ ಭೀಮಾ ನದಿಯಲ್ಲಿ ಪ್ರವಾಹ ಉಂಟಾಗಿ ಸರಡಗಿ ಬ್ಯಾರೇಜಿನ ಹತ್ತಿರದ ಪಂಪ್‌ಹೌಸ್‌ವರೆಗೆ ನೀರು ಬಂದಿರುವುದರಿಂದ ಪಂಪ್‌ನ್ನು ಬಂದ ಮಾಡಲಾಗಿದೆ. ಸದರಿ ಮೂಲದಿಂದ ಸರಬರಾಜಾಗುತ್ತಿರುವ ಕೆಳಕಂಡ ಬಡಾವಣೆಗಳಲ್ಲಿ ನಿಗದಿತ ದಿನ/ಸಮಯಕ್ಕೆ ಸರಿಯಾಗಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಆದ್ದರಿಂದ ನಗರದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆಯುಐಡಿಎಫ್‌ಸಿ

ಹಾಗೂ ಮೆ॥ ಎಲ್ ಆಂಡ್ ಟಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಕಲಬುರಗಿ ಕೆಯುಡಬ್ಲ್ಯುಎಸ್‌ಎಂಪಿ-ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜೀನಿಯರಿಂಗ ವಿಭಾಗ, ಕಲಬುರಗಿ**

**ಲೋಕೋಪಯೋಗಿ ಇಲಾಖೆ ವಸತಿಗೃಹ ಸಂಖ್ಯೆ110ಡಿ, ಐವಾನ್-ಇ-ಶಾಹಿ ಕಾಲೋನಿ, ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಎದುರುಗಡೆ ಕಲಬುರಗಿ -585102.**

ದೂರವಾಣಿ/ಫ್ಯಾಕ್ಸಸಂಖ್ಯೆ -08472-241982 Email: mail ee.khsdrp.klb@gmail.com

ಸಂಖ್ಯೆ: ಆಕುಕ/ಕಾನಿಅ/ಇಂ.ವಿ.ಕ/ಸ.ಇಂ-2/ಡಿಪಿಆರ್/2025-26/833 ದಿನಾಂಕ: 25.09.2025

**-: ಟೆಂಡರ್ ಪ್ರಕಟಣೆ :-**

ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ ವಿಭಾಗ ಕಲಬುರಗಿ ರವರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸುವ ಸಲುವಾಗಿ ಯೋಜನಾ ಸಮಾಲೋಚಕರನ್ನು ನೇಮಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (kppp portal) ಮೂಲಕ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: 1) ಬೀದರ ಸರಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ 100 ಹಾಸಿಗೆಯ ಪೆರಿಫೆರಲ ಕ್ಯಾನ್ಸರ ಕೇಂದ್ರ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸಲು ಯೋಜನಾ ಸಮಾಲೋಚಕರನ್ನು ನೇಮಿಸುವುದು. **(ಇಂಡೆಂಟ ಸಂ: 232)**. 2) ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ನಿಮ್ಹಾನ್ಸ ಮತ್ತು ಡಿ-ಆಡಿಕ್ಷನ್ ಕೇಂದ್ರ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸಲು ಯೋಜನಾ ಸಮಾಲೋಚಕರನ್ನು ನೇಮಿಸುವುದು. **(ಇಂಡೆಂಟ ಸಂ: 231)**. 3) ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ಎಂಡೋಕ್ರೈನೊಲಾಜಿ ಕೇಂದ್ರ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸಲು ಯೋಜನಾ ಸಮಾಲೋಚಕರನ್ನು ನೇಮಿಸುವುದು. **(ಇಂಡೆಂಟ ಸಂ: 230)**. 4) ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಸೂಪರಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸಲು ಯೋಜನಾ ಸಮಾಲೋಚಕರನ್ನು ನೇಮಿಸುವುದು. (ಇಂಡೆಂಟ ಸಂ: 176). 5) ಕಲಬುರಗಿ ಜಿಲ್ಲೆ ಜೇವರ್ಗಿಯಲ್ಲಿ, ಕೊಪ್ಪಳ ಜಿಲ್ಲೆ ಯಲಬುರ್ಗಾದಲ್ಲಿ ಮತ್ತು ಯಾದಗಿರಿ ಜಿಲ್ಲೆ ಯಾದಗಿರದಲ್ಲಿ ನರ್ಸಿಂಗ ಕಾಲೇಜು ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸಲು ಯೋಜನಾ ಸಮಾಲೋಚಕರನ್ನು ನೇಮಿಸುವುದು. **(ಇಂಡೆಂಟ ಸಂ: 180)**. 6) ರಾಯಚೂರು ರಾಜೀವಗಾಂಧಿ ಸೂಪರಸ್ಪೆಷಾಲಿಟಿ ಆಸ್ಪತ್ರೆ ಆವರಣದಲ್ಲಿ ಕಿದ್ವಾಯಿ ಪೆರಿಫೆರಲ ಕ್ಯಾನ್ಸರ ಕೇಂದ್ರ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸಲು ಯೋಜನಾ ಸಮಾಲೋಚಕರನ್ನು ನೇಮಿಸುವುದು. **(ಇಂಡೆಂಟ ಸಂ: 177)**.

**ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)-ಕನಿಷ್ಠ ರೂ.15.00, ಗರಿಷ್ಠ ರೂ.48.80, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)- ಕನಿಷ್ಠ ರೂ.50000.00 ಗರಿಷ್ಠ ರೂ.98000.00, ಮೇಲಿನ ಎಲ್ಲಾ ಕಾಮಗಾರಿಗಳಿಗೆ ಡಿಪಿಆರ್ ತಯಾರಿಸುವ ಕಾಲಾವಧಿ- 20 ದಿನಗಳು.**

**ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು**: 1. ಟೆಂಡರ ಗಳನ್ನು ಇ-ಪ್ರೊಕ್ಯೂರಮೆಂಟ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 14.10.2025 ರಂದು 16.00 ಗಂಟೆಯ ವರೆಗೆ, 2. ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ:15.10.2025ರಂದು 16.30 ಗಂಟೆಗೆ

**ಟಿಪ್ಪಣಿ**: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ ರದ್ದುಗೊಳಿಸುವ/ಟೆಂಡರ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

**ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್**

ವಾ.ಸಾ.ಸಂ.ಇ/ಕಲಬುರಗಿ/563/ಕೆ.ಎಸ್.ಎಂ.ಸಿ.&ಎ/2025-26 **ಆಕುಕ ಇಂಜಿನೀಯರಿಂಗ ವಿಭಾಗ ಕಲಬುರಗಿ**


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.